
ಮಂಗಳವಾರ, ಏಪ್ರಿಲ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 120 | ಪುಟ 12
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಕರ ನೇಮಕಾತಿ: ಸಿಬಿಐ ತನಿಖೆಗೆ 'ಸುಪ್ರೀಂ' ತಡೆ 11

'ದುಷ್ಟತನ ಬಿಟ್ಟು 10 ವರ್ಷಗಳ ಸಾಧನೆ ಹೇಳಿ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,671	22,643	₹74,420 (ಬೆಂಗಳೂರು)	₹83,300 (ಬೆಂಗಳೂರು)	83.48

ಪ್ರಜ್ವಲ್ ರೇವಣ್ಣ ಕೃತ್ಯಕ್ಕೆ ವ್ಯಾಪಕ ಖಂಡನೆ • ರಾಷ್ಟ್ರಮಟ್ಟಕ್ಕೂ ತಲುಪಿದ 'ದೌರ್ಜನ್ಯ'ದ ಸದ್ದು

ಆಕ್ರೋಶ ಪ್ರಜ್ವಲ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಕ್ಷೇತ್ರದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂಬ ಪ್ರಕರಣದ ವಿರುದ್ಧ ಆಕ್ರೋಶ ಭುಗಿಲೆದ್ದಿದೆ. ಈ ಬಗ್ಗೆ ಸರ್ಕಾರ ರಚಿಸಿರುವ ವಿಶೇಷ ತನಿಖಾ ದಳ (ಎಸ್ಐಟಿ) ತನಿಖೆಯನ್ನು ಚುರುಕುಗೊಳಿಸಿದೆ.

ವಿಡಿಯೊದಲ್ಲಿ ಇದ್ದಾರೆ ಎನ್ನಲಾದ ವಿವಿಧೆಡೆಯ ಐವರು ಸಂತ್ರಸ್ತೆಯರನ್ನು ಕರೆಯಿಸಿಕೊಂಡಿದ್ದ ಎಸ್ಐಟಿ ತನಿಖಾ ತಂಡದ ಅಧಿಕಾರಿಗಳು ಮಾಹಿತಿ ಪಡೆದಿದ್ದಾರೆ ಎಂದು ಗೊತ್ತಾಗಿದೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ, ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾ ಲಂಬಾ ಅವರು ಈ ವಿಷಯ ಪ್ರಸ್ತಾಪಿಸಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರನ್ನು ಗುರಿಯಾಗಿಸಿ ಟೀಕಾ ಪ್ರಹಾರ ನಡೆಸಿದ್ದಾರೆ. ಕಾಂಗ್ರೆಸ್‌ನ ರಾಜ್ಯ ನಾಯಕರು, 'ಪ್ರಜ್ವಲ್ ವಿಷಯ ಗೊತ್ತಿದ್ದೂ ಟಿಕೆಟ್ ನೀಡಿದ್ದೇಕೆ; ಮೋದಿ ಅವರು ಪ್ರಜ್ವಲ್ ಪರ ಪ್ರಚಾರ ನಡೆಸಿದ್ದು ಏಕೆ' ಎಂದು ಕುಟುಕಿದ್ದಾರೆ.

ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, 'ರೇವಣ್ಣ ಕುಟುಂಬ ಬೇರೆ ನಮ್ಮ ಕುಟುಂಬ ಬೇರೆ. ಪ್ರಜ್ವಲ್ ಉಚ್ಚಾಟಿಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದಿದ್ದಾರೆ.

5ನೇ ಪುಟ ನೋಡಿ



ಜನಪರ ಚಳವಳಿಗಳ ಒಕ್ಕೂಟದ ಸದಸ್ಯರು ಸೋಮವಾರ ಹಾಸನದಲ್ಲಿ ಪ್ರತಿಭಟನೆ ನಡೆಸಿದರು

ಹಳೆ ವಿಡಿಯೊ: ರೇವಣ್ಣ



ಬೆಂಗಳೂರು: 'ಎಚ್.ಡಿ. ದೇವೇಗೌಡರ ಕುಟುಂಬದ ವಿರುದ್ಧ ಷಡ್ಯಂತ್ರ ಹೊಸದಲ್ಲ. ನಾಲ್ಕೈದು ವರ್ಷಗಳ ಹಿಂದಿನ ವಿಡಿಯೊ ಇಟ್ಟುಕೊಂಡು ಈಗ ಪ್ರಕರಣ ದಾಖಲಿಸಿ ರಾಜಕೀಯ ಮಾಡುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಪೂರ್ವ ನಿಗದಿಯಂತೆ ಚುನಾವಣೆ ಮುಗಿದ ನಂತರ ಪ್ರಜ್ವಲ್ ವಿದೇಶಕ್ಕೆ ಹೋಗಿದ್ದಾರೆ. ಅವರಿಗೆ ಎಸ್ಐಟಿ ರಚನೆಯ ಮಾಹಿತಿ ಇರಲಿಲ್ಲ. ಎಲ್ಲೂ ಓಡಿಹೋಗಿಲ್ಲ. ತನಿಖೆಗೆ ಕರೆದಾಗ ಬರುತ್ತಾರೆ' ಎಂದರು.

5ನೇ ಪುಟ ನೋಡಿ

'ಪಾಪದ ಕೊಡ ತುಂಬಿದಾಗ...'

ಹಾಸನ: 'ಎಸ್ಐಟಿ ರಚನೆಯಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ. ಪಾಪದ ಕೊಡ ತುಂಬಿದಾಗ ಎಲ್ಲವೂ ಹೊರ ಬರಬೇಕು. ಶಿಶುಪಾಲನಿಗೆ ಕೃಷ್ಣ ನೂರು ತಪ್ಪು ಮಾಡಲು ಅವಕಾಶ ಕೊಟ್ಟ. 101ನೇ ತಪ್ಪು ಮಾಡಲು ಅವಕಾಶ ಕೊಡಲಿಲ್ಲ' ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಹೇಳುವ ಮೂಲಕ ಪರೋಕ್ಷವಾಗಿ ರೇವಣ್ಣ ಕುಟುಂಬದ ವಿರುದ್ಧ ಆಕ್ರೋಶ ಹೊರಹಾಕಿದರು.

5ನೇ ಪುಟ ನೋಡಿ

ದೇಶ ಬಿಟ್ಟದ್ದು ಹೇಗೆ: ಪ್ರಿಯಾಂಕಾ

ಸೇಡಂ (ಕಲಬುರಗಿ ಜಿಲ್ಲೆ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹಿಳೆಯರ ಮಂಗಳಸೂತ್ರ ಕಸಿದುಕೊಳ್ಳಲಿದೆ ಎನ್ನುತ್ತಿದ್ದ ನೀವು, ಕರ್ನಾಟಕದಲ್ಲಿ ಸಾವಿರಾರು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದಾತ ನಿಮ್ಮ ಮೂಗಿನ ಕೆಳಗೇ ದೇಶ ಬಿಟ್ಟು ಓಡಿಹೋಗಿರುವ ಬಗ್ಗೆ ಏನು ಹೇಳುತ್ತೀರಿ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದರು.

5ನೇ ಪುಟ ನೋಡಿ

'ಪ್ರಜ್ವಲ್ ಉಚ್ಚಾಟನೆಗೆ ಗೌಡರ ತೀರ್ಮಾನ'



ಶಿವಮೊಗ್ಗ: ಪ್ರಜ್ವಲ್ ರೇವಣ್ಣ ಅವರನ್ನು ಜೆಡಿಎಸ್‌ನಿಂದ ಉಚ್ಚಾಟನೆ ಮಾಡಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ತೀರ್ಮಾನಿಸಿದ್ದಾರೆ ಎಂದು ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹುಬ್ಬಳ್ಳಿಯಲ್ಲಿ ಮಂಗಳವಾರ ನಡೆಯುವ ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ಆ ಬಗ್ಗೆ ಅಧಿಕೃತ ಆದೇಶ ಹೊರಡಿಸಲಾಗುವುದು' ಎಂದರು.

'ಪ್ರಜ್ವಲ್ ಪ್ರಕರಣದಲ್ಲಿ ಯಾವುದೇ ರಾಜಿ ಇಲ್ಲ. ರಾಜ್ಯದ ಹೆಣ್ಣು ಮಕ್ಕಳ ಪರವಾಗಿ ನಾನೂ ಧ್ವನಿ ಎತ್ತುತ್ತೇನೆ. ತಪ್ಪು ಆಗಿದ್ದರೆ ಈ ನೆಲದ ಕಾನೂನಿನ ಪ್ರಕಾರ ಶಿಕ್ಷೆ ಆಗಬೇಕು ಎಂಬ ನನ್ನ ನಿಲುವು ಮುಂದುವರಿಯಲಿದೆ' ಎಂದು ಹೇಳಿದರು. ಪ್ರಿಯಾಂಕಾ ಗಾಂಧಿ ಟ್ವೀಟ್ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ನರೇಂದ್ರ ಮೋದಿ, ಬಿಜೆಪಿ, ದೇವೇಗೌಡರಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ. ಈ ವಿಚಾರದಲ್ಲಿ ನನ್ನ ಹಾಗೂ ನನ್ನ ತಂದೆಯ ಬಗ್ಗೆ ಯಾರೂ ಸಂಶಯಪಡಬೇಡಿ' ಎಂದು ಮನವಿ ಮಾಡಿದರು. 'ಪ್ರಜ್ವಲ್‌ಗೆ ಸಂಬಂಧಿಸಿದೆ ಎನ್ನಲಾದ ಪೆನ್‌ಡ್ರೈವ್ ವಿಚಾರದಲ್ಲಿ ಇಡೀ ಸಮಾಜಕ್ಕೆ ಮುಜುಗರ ಆಗಿದೆ. ಈ ವಿಚಾರದಲ್ಲಿ ಪದೇ ಪದೇ ದೇವೇಗೌಡರ ಕುಟುಂಬದ ಹೆಸರು ಎಳೆದು ತರಬೇಡಿ' ಎಂದರು.



ರಥೋತ್ಸವ... ಬಾಗಲಕೋಟೆಯ ಕೂಡಲಸಂಗಮದ ಕ್ಷೇತ್ರಾಧಿಪತಿ ಸಂಗಮನಾಥನ ರಥೋತ್ಸವ ಸೋಮವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು –ಪ್ರಜಾವಾಣಿ ಚಿತ್ರ

ಸಿಇಟಿ: ಎರಡು ಕೃಪಾಂಕ, ಮೇ ಮೂರನೇ ವಾರ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿಯಲ್ಲಿನ ಪಠ್ಯಕ್ಕೆ ಹೊರತಾದ ಪ್ರಶ್ನೆಗಳ ಗೊಂದಲಕ್ಕೆ ತೆರೆ ಎಳೆದಿರುವ ಉನ್ನತ ಶಿಕ್ಷಣ ಇಲಾಖೆ, ತ್ವರಿತವಾಗಿ ಮೌಲ್ಯಮಾಪನ ಕಾರ್ಯ ಪೂರ್ಣಗೊಳಿಸಿ ಮೇ ಮೂರನೇ ವಾರದಲ್ಲಿ ಫಲಿತಾಂಶ ಪ್ರಕಟಿಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಸೂಚಿಸಿದೆ.

ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳಲ್ಲಿ ತಲಾ 60 ಅಂಕಗಳಿಗೆ ಇದೇ ಏ.18, 19ರಂದು ಪರೀಕ್ಷೆ ನಡೆಸಲಾಗಿತ್ತು. ನಾಲ್ಕು ವಿಷಯಗಳ ಪ್ರಶ್ನೆಪತ್ರಿಕೆಯಲ್ಲಿ ಪಠ್ಯಕ್ಕೆ ಹೊರತಾದ 50 ಪ್ರಶ್ನೆಗಳು ಸೇರಿವೆ ಎನ್ನುವ ಕುರಿತು ತಜ್ಞರ ಸಮಿತಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದವು. ಈ 50 ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಪ್ರಶ್ನೆಗಳನ್ನು ಮಾತ್ರ ಸಿಇಟಿ ಫಲಿತಾಂಶಕ್ಕೆ ಪರಿಗಣಿಸಲು ಆದೇಶಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು.

ಪರೀಕ್ಷೆ ನಡೆಸಿದ್ದ ಒಟ್ಟು 240 ಪ್ರಶ್ನೆಗಳಲ್ಲಿ 50 ಪ್ರಶ್ನೆಗಳನ್ನು ಕೈಬಿಟ್ಟಿರುವ ಕಾರಣ 190 ಪ್ರಶ್ನೆಗಳಷ್ಟೇ ಉಳಿಯುತ್ತವೆ. ಅವುಗಳಲ್ಲಿ ಎರಡು ಪ್ರಶ್ನೆಗಳು ಗೊಂದಲದಿಂದ ಕೂಡಿದ್ದು, ಸಮರ್ಪಕವಾಗಿಲ್ಲ ಎನ್ನುವ ತಜ್ಞರ ಸಲಹೆ ಆಧಾರದ ಮೇಲೆ ಎರಡು ಕೃಪಾಂಕ ನೀಡಲು ನಿರ್ಧರಿಸಲಾಗಿದೆ. ಉಳಿದ 188 ಪ್ರಶ್ನೆಗಳನ್ನು ಮೌಲ್ಯಮಾಪನ ಮಾಡಿ, ಒಟ್ಟು 190 ಅಂಕಗಳಿಗೆ ಅಂತಿಮ ಫಲಿತಾಂಶ ಪ್ರಕಟಿಸಬೇಕು ಎಂದು ಸೂಚಿಸಲಾಗಿದೆ.

ಇನ್ನಷ್ಟು ಸುದ್ದಿಗಳು 10

ಇಂಡಿಗನತ್ತ: ಮರು ಮತದಾನ ನೀರಸ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಹನೂರು ತಾಲ್ಲೂಕಿನ ಇಂಡಿಗನತ್ತ ಗ್ರಾಮದಲ್ಲಿ ಸೋಮವಾರ ನಡೆದ ಲೋಕಸಭಾ ಚುನಾವಣೆಯ ಮರು ಮತದಾನ ಶಾಂತಿಯುತವಾಗಿ ನಡೆದಿದೆ. ಆದರೆ, ಮತದಾರರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆದಿದ್ದು, 528 ಮತದಾರರ ಪೈಕಿ 71 ಮಂದಿ ಮಾತ್ರ ಹಕ್ಕು ಚಲಾಯಿಸಿದ್ದಾರೆ. ಈ ಪೈಕಿ 32 ಪುರುಷರು ಮತ್ತು 39 ಮಂದಿ ಮಹಿಳೆಯರು. ಶೇ 13.35ರಷ್ಟು ಮತದಾನವಾಗಿದೆ.

ಈ ಮತಗಟ್ಟೆ ವ್ಯಾಪ್ತಿಗೆ ಇಂಡಿಗನತ್ತ ಮತ್ತು ಮೆಂದಾರೆ ಗ್ರಾಮಗಳು ಬರುತ್ತವೆ. ಮೆಂದಾರೆಯ 58 ಮತ್ತು ಇಂಡಿಗನತ್ತ ಗ್ರಾಮದ 13 ಮಂದಿ ಹಕ್ಕು ಚಲಾಯಿಸಿದ್ದಾರೆ.

ಇದೇ 26ರಂದು ನಡೆದಿದ್ದ ಚುನಾವಣೆ ಸಂದರ್ಭದಲ್ಲಿ ಘರ್ಷಣೆ ಉಂಟಾಗಿ, ಉದ್ರಿಕ್ತರು ಮತಗಟ್ಟೆ ಮೇಲೆ ಕಲ್ಲು ತೂರಾಟ ನಡೆಸಿ, ಇವಿಎಂಗಳಿಗೆ ಹಾನಿ ಮಾಡಿದ್ದರು. ಹಾಗಾಗಿ, ಮರು ಮತದಾನಕ್ಕೆ ಚುನಾವಣಾ ಆಯೋಗ ತೀರ್ಮಾನಿಸಿತ್ತು.

ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರದ ವಾದ

'ಬರ ಪರಿಹಾರ ಅತಿ ಅಲ್ಪ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭೀಕರ ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯಕ್ಕೆ ಪರಿಹಾರ ರೂಪದಲ್ಲಿ ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ₹3,454 ಕೋಟಿ ಮೊತ್ತವು ಕೇಳಿದ್ದಕ್ಕಿಂತ ತೀರಾ ಕಡಿಮೆ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಾದಿಸಿದೆ.

ಬರ ನಿರ್ವಹಣೆಗಾಗಿ ಎನ್‌ಡಿಆರ್‌ಎಫ್ ನಿಧಿಯಿಂದ ಹಣಕಾಸು ನೆರವು ನೀಡುವಂತೆ ಕೇಂದ್ರಕ್ಕೆ ಸೂಚಿಸ ಬೇಕು ಎಂದು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠ ನಡೆಸುತ್ತಿದೆ. ವಿಚಾರಣೆ ವೇಳೆ ರಾಜ್ಯದ ಪರ ವಕೀಲ ಕಪಿಲ್ ಸಿಬಲ್, ಅಂತರ್ ಸಚಿವಾಲಯದ ವರದಿಯ ಪ್ರತಿ ಸಲ್ಲಿಸಲು ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು. ಈ ಸಂಬಂಧ ಕೇಂದ್ರಕ್ಕೆ ನಿರ್ದೇಶನ ನೀಡಿರುವ ಪೀಠವು ವಿಚಾರಣೆಯನ್ನು ಮೇ 6 ಮುಂದೂಡಿದೆ.

ಕಳೆದ ಸೋಮವಾರದ ವಿಚಾರಣೆ ವೇಳೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, 'ಪರಿಹಾರ ನೀಡಲು ಚುನಾವಣಾ ಆಯೋಗ ಅನುಮತಿ ನೀಡಿದೆ. ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು' ಎಂದು ವಾಗ್ದಾನ ಮಾಡಿದ್ದರು. ವಿಚಾರಣೆಯನ್ನು ಮುಂದಿನ ಸೋಮವಾರಕ್ಕೆ ಮುಂದೂಡುವಂತೆ ಕೋರಿದ್ದರು. ರಾಜ್ಯಕ್ಕೆ ₹3,454 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು ಶನಿವಾರ ಘೋಷಿಸಿತ್ತು.

ನ್ಯಾಯಾಲಯದಲ್ಲಿ ಏನಾಯಿತು?

- **ಬರ ಪರಿಹಾರದ ರೂಪದಲ್ಲಿ ಕರ್ನಾಟಕಕ್ಕೆ ಈಗಾಗಲೇ ₹3,400 ಕೋಟಿ ಬಿಡುಗಡೆ ಮಾಡಲಾಗಿದೆ**

ಆರ್.ವೆಂಕಟರಮಣಿ, ಅಟಾರ್ನಿ ಜನರಲ್

ಕೇಂದ್ರ ಸರ್ಕಾರ ಕೊನೆಗೂ ಬರ ಪರಿಹಾರ ಬಿಡುಗಡೆ ಮಾಡಿದೆ. ಅದಕ್ಕಾಗಿ ಧನ್ಯವಾದಗಳು. ಆದರೆ, ರಾಜ್ಯ ಸರ್ಕಾರವು ₹18,000 ಕೋಟಿ ಪರಿಹಾರ ಕೇಳಿತ್ತು. ಬಿಡುಗಡೆ ಮಾಡಿರುವುದು ಬಹಳ ಕಡಿಮೆ. ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಜೀವನೋಪಾಯಕ್ಕೆ ₹12,577 ಕೋಟಿ ಪರಿಹಾರ ಕೋರಲಾಗಿತ್ತು. ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯ ಅಡಿಯಲ್ಲಿ ಜೀವನೋ ಪಾಯಕ್ಕೆ ಪರಿಹಾರ ನೀಡಲು ಅವಕಾಶ ಇದೆ. ಅದನ್ನು ಪರಿಗಣಿಸಿಲ್ಲ

ಕಪಿಲ್ ಸಿಬಲ್, ಕರ್ನಾಟಕ ಸರ್ಕಾರದ ಪರ ವಕೀಲ

- **ಕೇಂದ್ರ ಸರ್ಕಾರ ನೇಮಿಸಿದ ಅಂತರ್ ಸಚಿವಾಲಯದ ತಜ್ಞರ ಸಮಿತಿಯು ಬರಪೀಡಿತ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿತ್ತು. ಆ ವರದಿಯ ಆಧಾರದಲ್ಲಿ ಸಚಿವರ ಸಮಿತಿಯು ಪರಿಹಾರ ಘೋಷಣೆ ಮಾಡಿದೆ**

ಆರ್.ವೆಂಕಟರಮಣಿ

ತಜ್ಞರ ಸಮಿತಿಯ ವರದಿಯಲ್ಲಿ ಏನಿದೆ ಎಂಬುದು ರಾಜ್ಯ ಸರ್ಕಾರಕ್ಕೆ ತಿಳಿದಿಲ್ಲ. ಅದರ ಪ್ರತಿಯನ್ನು ರಾಜ್ಯಕ್ಕೆ ನೀಡಿಲ್ಲ. ವರದಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಅದಕ್ಕೆ ಅನುಗುಣವಾಗಿ, ಏನು ನಿರ್ಧರಿಸಿದರೂ ನಮಗೆ ತೊಂದರೆ ಇಲ್ಲ

ಕಪಿಲ್ ಸಿಬಲ್

ತಜ್ಞರ ಸಮಿತಿಯ ಶಿಫಾರಸಿನ ಆಧಾರದಲ್ಲಿ ಸಚಿವರ ಉನ್ನತಾಧಿಕಾರ ಸಮಿತಿಯು ಪರಿಹಾರ ಘೋಷಣೆ ಮಾಡಿದೆ. ತಜ್ಞರ ಸಮಿತಿ ವರದಿಯ ಪ್ರತಿ ಸಲ್ಲಿಸಲು ಕಾಲಾವಕಾಶ ನೀಡಬೇಕು

ಆರ್.ವೆಂಕಟರಮಣಿ



ಹೆಚ್ಚಿನ ಕಾಲಾವಕಾಶ ನೀಡಲು ಸಾಧ್ಯವಿಲ್ಲ. ಮುಂದಿನ ಸೋಮವಾರದೊಳಗೆ ವರದಿ ಪ್ರತಿ ಸಲ್ಲಿಸಬೇಕು

ನ್ಯಾಯಪೀಠ

ಸಂಸದ ಶ್ರೀನಿವಾಸ ಪ್ರಸಾದ್ ನಿಧನ

ಪ್ರಜಾವಾಣಿ ವಾರ್ತೆ



ಜನನ 1947 ಮರಣ 2024

ಮೈಸೂರು: ಕೇಂದ್ರದ ಮಾಜಿ ಸಚಿವ, ಚಾಮರಾಜನಗರದ ಸಂಸದ ವಿ. ಶ್ರೀನಿವಾಸ ಪ್ರಸಾದ್ (76) ವಯೋಸಹಜ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ನಸುಕಿನಲ್ಲಿ ನಿಧನರಾದರು.

ಅವರಿಗೆ ಪತ್ನಿ ಭಾಗ್ಯಲಕ್ಷ್ಮಿ, ಪುತ್ರಿಯರಾದ ಪ್ರತಿಮಾ, ಪೂರ್ಣಿಮಾ, ಪೂನಂ, ಅಳಿಯಂದಿರಾದ ಮಾಜಿ ಶಾಸಕ ಬಿ.ಹರ್ಷವರ್ಧನ್, ಐಆರ್‌ಎಸ್ ಅಧಿಕಾರಿ ಪಿ.ದೇವರಾಜ್ ಹಾಗೂ ಡಾ.ಎನ್.ಎಸ್. ಮೋಹನ್ ಮತ್ತು ಐವರು ಮೊಮ್ಮಕ್ಕಳು ಇದ್ದಾರೆ.

ಮೂತ್ರಕೋಶದ ಸೋಂಕಿನ ಕಾರಣಕ್ಕೆ ಅವರು ಏ. 22ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಅಂದಿನಿಂದ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತಿತ್ತು.

ಇಲ್ಲಿನ ಅಶೋಕಪುರಂನ ಸರ್ಕಾರಿ ಶಾಲೆಯ ಆವರಣದಲ್ಲಿ ಪಾರ್ಥಿವ ಶರೀರದ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು, ಅಪಾರ ಸಂಖ್ಯೆಯ ಅಭಿಮಾನಿಗಳು ಅಂತಿಮ ನಮನ ಸಲ್ಲಿಸಿದರು.

'ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೇರವೇರಿಸಲಾಗುವುದು' ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಬಿಎಸ್‌ಸಿ, ಎಂ.ಎ. (ರಾಜ್ಯಶಾಸ್ತ್ರ) ಪದವೀಧರರಾಗಿದ್ದ ಅವರು, 1974ರಲ್ಲಿ ಇಲ್ಲಿನ ಕೃಷ್ಣರಾಜ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸುವ ಮೂಲಕ ರಾಜಕಾರಣ ಪ್ರವೇಶಿಸಿದ್ದರು. ಒಟ್ಟು 14 ಚುನಾವಣೆಗಳನ್ನು ಎದುರಿಸಿ ಆರು ಬಾರಿ ಸಂಸದರಾಗಿ, ಎರಡು ಬಾರಿ ಶಾಸಕರಾಗಿ ಆಯ್ಕೆ ಆಗಿದ್ದರು.

1999ರಿಂದ 2004ರವರೆಗೆ ಕೇಂದ್ರದಲ್ಲಿ ಗ್ರಾಹಕ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣೆ ಖಾತೆ ರಾಜ್ಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ 2013ರಿಂದ 2016ರವರೆಗೆ ಕಂದಾಯ ಸಚಿವ, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. 'ಮೈತ್ರಿ', 'ಮನಸ್ವಿನಿ' ಹಾಗೂ 'ಪರಿಶಿಷ್ಟರಿಗೆ ಪ್ರತ್ಯೇಕ ಸ್ಮಶಾನ ನಿರ್ಮಾಣ' ಯೋಜನೆಗಳ ಹಿಂದಿನ ಶಕ್ತಿಯಾಗಿದ್ದರು.

ಸಚಿವ ಸಂಪುಟದಿಂದ ಕೈಬಿಟ್ಟಿದ್ದನ್ನು ಪ್ರತಿಭಟಿಸಿ ಶಾಸಕ ಸ್ಥಾನಕ್ಕೆ ಮತ್ತು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ ಬಿಜೆಪಿ ಸೇರ್ಪಡೆಯಾಗಿದ್ದರು. 2017ರಲ್ಲಿ ನಂಜನಗೂಡು ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. 2019ರಲ್ಲಿ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆ ಆಗಿದ್ದರು. ಇದೇ ವರ್ಷದ ಮಾರ್ಚ್ 17ರಂದು 'ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ' ಆಚರಿಸಿಕೊಂಡ ಅವರು, ಸಕ್ರಿಯ ರಾಜಕಾರಣಕ್ಕೆ ವಿದಾಯ ಹೇಳಿದ್ದರು.

ಅಂತ್ಯಕ್ರಿಯೆ ಇಂದು

'ಮಂಗಳವಾರ (ಏ.30) ಬೆಳಿಗ್ಗೆ 10ಕ್ಕೆ ಅಶೋಕಪುರಂನಲ್ಲಿ ಪಾರ್ಥಿವ ಶರೀರದ ಮೆರವಣಿಗೆ ನಡೆಸಲಾಗುವುದು. ಮಾನಂದವಾಡಿ ರಸ್ತೆಯಲ್ಲಿರುವ ರೇಷ್ಮೆ ಕಾರ್ಖಾನೆ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 1ರ ನಂತರ ನಡೆಸಲಾಗುವುದು. ಬೌದ್ಧ ಧರ್ಮಕ್ಕೆ ಅವರು ಮತಾಂತರ ಆಗಿದ್ದರಿಂದ, ಅವರ ಇಚ್ಛೆಯಂತೆ ಆ ಧರ್ಮದ ವಿಧಿ–ವಿಧಾನಗಳಂತೆಯೇ ಅಂತ್ಯಕ್ರಿಯೆ ನೆರವೇರಿಸಲಾಗುವುದು' ಎಂದು ಪುತ್ರಿ ಪ್ರತಿಮಾ ಪ್ರಸಾದ್ ಮಾಹಿತಿ ನೀಡಿದರು.

ನುಡಿನಮನ 07

ಇಂದೋರ್: ಹಿಂದೆ ಸರಿದ ಕಾಂಗ್ರೆಸ್ ಅಭ್ಯರ್ಥಿ

ಇಂದೋರ್ (ಪಿಟಿಐ): ಗುಜರಾತ್‌ನ ಸೂರತ್ ನಂತರ ಕಾಂಗ್ರೆಸ್ ಪಕ್ಷಕ್ಕೆ ಮಧ್ಯಪ್ರದೇಶದಲ್ಲಿಯೂ ಮುಖಭಂಗ ಉಂಟಾಗಿದೆ. ಇಂದೋರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಮ್, ಮತದಾನಕ್ಕೆ ಎರಡು ವಾರ ಇರುವಾಗ ತಮ್ಮ ನಾಮಪತ್ರ ಹಿಂಪಡೆದಿದ್ದಾರೆ. ಬಳಿಕ ಅವರು ಬಿಜೆಪಿ ಕಚೇರಿಯಲ್ಲಿ ಕಾಣಿಸಿಕೊಂಡಿದ್ದಾರೆ.

9

'ಪ್ರಜಾಪ್ರಭುತ್ವ ಅಪಾಯದಲ್ಲಿದೆ'

ನವದೆಹಲಿ (ಪಿಟಿಐ): ಅಕ್ಷಯ್ ನಾಮಪತ್ರ ಹಿಂಪಡೆದ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದಿದೆ. ಒಬ್ಬರ ನಂತರ ಒಬ್ಬರಂತೆ ಅಭ್ಯರ್ಥಿಗಳನ್ನು ಬೆದರಿಸಲಾಗುತ್ತಿದ್ದು, ಚುನಾವಣಾ ಆಯೋಗವು ಇದೆಲ್ಲದರ ಬಗ್ಗೆ ನಿರ್ಲಕ್ಷ್ಯ ವಹಿಸಿದೆ. ಇಂಥ ಪರಿಸ್ಥಿತಿಯಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಯುವುದು ಸಾಧ್ಯವೇ ಎಂದು ಪ್ರಶ್ನಿಸಿದೆ.

9ನೇ ಪುಟ ನೋಡಿ



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮತಯಂತ್ರ ಸಂರಕ್ಷಣೆ, ಮತ ಎಣಿಕೆ ಕೇಂದ್ರಗಳಿಗೆ ಕಾಲೇಜು ಕಟ್ಟಡಗಳು

ಎರಡು ತಿಂಗಳು ತರಗತಿಗಳಿಗೆ ಕುತ್ತು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೋವಿಡ್ ನಂತರ ಶೈಕ್ಷಣಿಕ ವೇಳಾಪಟ್ಟಿಯಲ್ಲಿನ ಏರುಪೇರಿನಿಂದ ಸಂಕಷ್ಟ ಅನುಭವಿಸುತ್ತಾ ಬಂದಿದ್ದ ಪದವಿ ವಿದ್ಯಾರ್ಥಿಗಳು ಚುನಾವಣಾ ಕಾರಣಕ್ಕೆ ಸಮರ್ಪಕವಾಗಿ ತರಗತಿಗಳು ನಡೆಯದೇ ಪರಿತಪಿಸುವಂತಾಗಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಹಳೆ ಮೈಸೂರು ಪ್ರಾಂತ್ಯದ 14 ಜಿಲ್ಲೆಗಳಲ್ಲಿ ಈಗಾಗಲೇ (ಏ. 26) ಮತದಾನ ಮುಕ್ತಾಯವಾಗಿದೆ. ಕಲ್ಯಾಣ ಕರ್ನಾಟಕ, ಮಲೆನಾಡು, ಮಧ್ಯ ಕರ್ನಾಟಕದ ಜಿಲ್ಲೆಗಳೂ ಸೇರಿದಂತೆ 14 ಕ್ಷೇತ್ರಗಳಲ್ಲಿ ಮೇ 7ರಂದು ಮತದಾನ ನಡೆಯಲಿದೆ.

ಚುನಾವಣಾ ಆಯೋಗವು ಮತ ಎಣಿಕೆಗಾಗಿ ಆಯಾ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಕಾಲೇಜುಗಳ ಕಟ್ಟಡಗಳನ್ನು ಈಗಾಗಲೇ ವಶಕ್ಕೆ ಪಡೆದಿದೆ. ಏ.26ರಂದು ಮತದಾನ ನಡೆದ ಕ್ಷೇತ್ರಗಳಲ್ಲಿನ ಮತಯಂತ್ರಗಳು ಮತ ಎಣಿಕೆ ಕೇಂದ್ರದ ಭದ್ರತಾ ಕೊಠಡಿಗಳನ್ನು ಸೇರಿವೆ. ಮತ ಎಣಿಕೆ ಜೂನ್ 4ಕ್ಕೆ ಮುಗಿಯುವವರೆಗೂ ವಿದ್ಯಾರ್ಥಿಗಳು ಕಾಲೇಜು ಆವರಣ ಪ್ರವೇಶಿಸಲು ಸಾಧ್ಯವಾಗದು. ಏಪ್ರಿಲ್ ಎರಡನೇ ವಾರ ಆರಂಭವಾಗಿದ್ದ ಎರಡು, ನಾಲ್ಕು ಹಾಗೂ ಆರನೇ ಸೆಮಿಸ್ಟರ್‌ಗಳನ್ನು ಜುಲೈ ಅಂತ್ಯಕ್ಕೆ ಪೂರ್ಣಗೊಳಿಸಬೇಕಿದೆ. ಆದರೆ, ಎಣಿಕೆ ಕೇಂದ್ರಗಳಿಗೆ ಬಿಟ್ಟು ಕೊಟ್ಟ ಕಾಲೇಜುಗಳಲ್ಲಿ ಸುಮಾರು ಎರಡು ತಿಂಗಳು ಪಾಠ ನಡೆಸಲು ಅಡ್ಡಿಯಾಗುತ್ತಿದೆ.

ಮತಯಂತ್ರ ಸಂರಕ್ಷಣೆ ಹಾಗೂ ಮತ ಎಣಿಕೆಗಾಗಿ ಚುನಾವಣಾ ಆಯೋಗ ವಶಕ್ಕೆ ಪಡೆದ ಬಹುತೇಕ ಕಟ್ಟಡಗಳು ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಾಗಿವೆ. ಕೋವಿಡ್ ನಂತರ ಪದವಿ ಕಾಲೇಜುಗಳ ಶೈಕ್ಷಣಿಕ ವೇಳಾಪಟ್ಟಿ ಏರುಪೇರಾಗಿದ್ದ ಕಾರಣ ರಜೆಯ ಅವಧಿ ಆಗಸ್ಟ್, ಸೆಪ್ಟೆಂಬರ್‌ಗೆ ಹೋಗಿದೆ. ಎರಡು, ನಾಲ್ಕು, ಆರನೇ ಸೆಮಿಸ್ಟರ್ ತರಗತಿಗಳು ಇದೇ ಏಪ್ರಿಲ್ ಎರಡನೇ ವಾರದಿಂದ ಆರಂಭವಾಗಿವೆ. ತರಗತಿಗಳು ಆರಂಭವಾದ ಒಂದೆರಡು ದಿನಗಳಲ್ಲೇ ಹಲವು ಕ್ಷೇತ್ರಗಳ ಪದವಿ ಕಾಲೇಜುಗಳನ್ನು ಚುನಾವಣಾ ಆಯೋಗ ವಶಕ್ಕೆ ಪಡೆದಿದೆ.

ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜನ್ನು ಮತ ಎಣಿಕೆ ಕೇಂದ್ರಕ್ಕೆ ಪಡೆದ ಕಾರಣ 1,600ಕ್ಕೂ ಹೆಚ್ಚಿರುವ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲು ಸಾಧ್ಯವಾಗಿಲ್ಲ. ವಿಜ್ಞಾನ ಕಾಲೇಜಿನಲ್ಲಿ ಮಧ್ಯಾಹ್ನ 3ರ ನಂತರ ಕೆಲ ತರಗತಿಗಳನ್ನು ನಡೆಸಲಾಗುತ್ತಿದೆ. ಕೋಲಾರದ ಸರ್ಕಾರಿ ಪದವಿ ಕಾಲೇಜನ್ನು ಸಮೀಪದ ಪಿಯು ಕಾಲೇಜಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗಿದೆ.

ಕ್ಷೇತ್ರ	ಮತ ಎಣಿಕೆ ಕೇಂದ್ರವಾದ ಕಾಲೇಜುಗಳು
ಶಿವಮೊಗ್ಗ	ಸಹ್ಯಾದ್ರಿ ಕಲಾ ಕಾಲೇಜು
ಚಿತ್ರದುರ್ಗ	ಸರ್ಕಾರಿ ವಿಜ್ಞಾನ ಕಾಲೇಜು
ಉತ್ತರ ಕನ್ನಡ	ಡಾ.ಎ.ವಿ.ಬಾಳಿಗಾ ಪದವಿ ಕಾಲೇಜು, ಕುಮಟಾ
ಬೆಳಗಾವಿ	ಆರ್‌ಪಿಡಿ ಪದವಿ ಕಾಲೇಜು
ಚಿಕ್ಕೋಡಿ	ಆರ್.ಡಿ. ಪದವಿ ಕಾಲೇಜು
ಮೈಸೂರು	ಮಹಾರಾಣಿ ವಾಣಿಜ್ಯ ಕಾಲೇಜು
ತುಮಕೂರು	ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು
ಮಂಡ್ಯ	ವಿಶ್ವವಿದ್ಯಾಲಯದ ಪದವಿ ಕಲಾ ಕಾಲೇಜು
ಕೋಲಾರ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೊಪ್ಪಳ	ಗವಿಸಿದ್ದೇಶ್ವರ ಪದವಿ ಕಾಲೇಜು
ಹಾವೇರಿ	ದೇವಗಿರಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು
ಚಿಕ್ಕಬಳ್ಳಾಪುರ	ನಾಗಾರ್ಜುನ ಎಂಜಿನಿಯರಿಂಗ್ ಕಾಲೇಜು
ಚಾಮರಾಜನಗರ	ಸರ್ಕಾರಿ ಎಂಜಿನಿಯರಿಂಗ್ ಕಾಲೇಜು
ಬೆಂಗಳೂರು ಗ್ರಾಮಾಂತರ	ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರ
ಬಳ್ಳಾರಿ	ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು
ಹಾಸನ	ಸರ್ಕಾರಿ ಎಂಜಿನಿಯರಿಂಗ್ ಕಾಲೇಜು

ಒಂದು ಸೆಮಿಸ್ಟರ್ ಅವಧಿ ನಾಲ್ಕು ತಿಂಗಳು, ಪಾಠ ನಡೆಯುವುದು ಮೂರು ತಿಂಗಳು. ಎರಡು ತಿಂಗಳು ಆನ್‌ಲೈನ್ ಪಾಠಕ್ಕೆ ಹೇಳಿದ್ದಾರೆ. ಗ್ರಾಮಗಳಲ್ಲಿ ನೆಟ್‌ವರ್ಕ್ ಇಲ್ಲ. ಇದು ಕಲಿಕೆ ಮೇಲೆ ಪರಿಣಾಮ ಬೀರಿದೆ.

ಕೈವಲ್ಯಾ, ವಿದ್ಯಾರ್ಥಿನಿ, ಮಹಾರಾಣಿ ಕಾಲೇಜು, ಮೈಸೂರು

10ನೇ ಪುಟ ನೋಡಿ

ಶಿವಮೂರ್ತಿ ಶರಣ ಮತ್ತೆ ಜೈಲಿಗೆ

ಪ್ರಜಾವಾಣಿ ವಾರ್ತೆ



ಶಿವಮೂರ್ತಿ ಮುರುಘಾ ಶರಣರನ್ನು ಪೊಲೀಸರು ಸೋಮವಾರ ಜಿಲ್ಲಾ ಕಾರಾಗೃಹಕ್ಕೆ ಕರೆದೊಯ್ದರು –ಪ್ರಜಾವಾಣಿ ಚಿತ್ರ / ವಿ.ಚಂದ್ರಪ್ಪ

ಚಿತ್ರದುರ್ಗ: ಪೋಕ್ಸೊ ಪ್ರಕರಣದ ಆರೋಪಿ ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಶರಣರು ಸೋಮವಾರ ಮತ್ತೆ ಜಿಲ್ಲಾ ಕಾರಾಗೃಹ ಸೇರಿದರು. ಸುಪ್ರೀಂ ಕೋರ್ಟ್ ಸೂಚನೆಯ ಮೇರೆಗೆ ಜಿಲ್ಲಾ ನ್ಯಾಯಾಲಯಕ್ಕೆ ಶರಣಾದ ಆರೋಪಿಯನ್ನು ನ್ಯಾಯಾಧೀಶರು ಮೇ 27ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಶಿವಮೂರ್ತಿ ಶರಣರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಸಂತ್ರಸ್ತ ಬಾಲಕಿಯ ತಂದೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಹೈಕೋರ್ಟ್ ಆದೇಶಕ್ಕೆ ನಾಲ್ಕು ತಿಂಗಳ ಕಾಲ ತಡೆ ನೀಡಿತ್ತು. ವಿಚಾರಣಾ ನ್ಯಾಯಾಲಯಕ್ಕೆ ಶರಣಾಗಲು ಒಂದು ವಾರ ಕಾಲಾವಕಾಶ ನೀಡಿ ಏಪ್ರಿಲ್ 23ರಂದು ಆದೇಶಿಸಿತ್ತು.

ದಾವಣಗೆರೆಯ ಶಿವಯೋಗಿ ಮಂದಿರದಲ್ಲಿದ್ದ ಸ್ವಾಮೀಜಿ, ಸೋಮವಾರ ವಕೀಲರೊಂದಿಗೆ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರಾದರು. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಆರೋಪಿಯು ಸ್ವಯಂಪ್ರೇರಿತವಾಗಿ ಶರಣಾಗಲು ನ್ಯಾಯಾಲಯಕ್ಕೆ ಬಂದಿರುವ ಸಂಗತಿಯನ್ನು ವಕೀಲರು ನ್ಯಾಯಾಧೀಶರಿಗೆ ತಿಳಿಸಿದರು. ಅರ್ಜಿ ವಿಚಾರಣೆಗೆ ಎತ್ತಿಕೊಂಡ ನ್ಯಾಯಾಧೀಶ ಎಸ್.ಎನ್. ಕಲ್ಕಣಿ, ಆರೋಪಿ ಹಾಜರಾತಿಗೆ ಸೂಚಿಸಿದರು.

ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ನ್ಯಾಯಾಧೀಶರು, ಮೇ 27ರಂದು ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಸೂಚಿಸಿದರು. ಆರೋಪಿಯನ್ನು ವಶಕ್ಕೆ ಪಡೆದ ತನಿಖಾಧಿಕಾರಿ, ಡಿವೈಎಸ್‌ಪಿ ದಿನಕರ್ ನೇತೃತ್ವದ ಪೊಲೀಸರ ತಂಡ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿತು. ಬಳಿಕ ಜಿಲ್ಲಾ ಕಾರಾಗೃಹಕ್ಕೆ ಒಪ್ಪಿಸಲಾಯಿತು.

'ಸ್ವಾಮೀಜಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಇಬ್ಬರು ಸಂತ್ರಸ್ತ ಬಾಲಕಿಯರು ನೀಡಿದ್ದ ಹೇಳಿಕೆಯ ಆಧಾರದಲ್ಲಿ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆ. 26ರಂದು ದೂರು ದಾಖಲಾಗಿತ್ತು. 2022ರ ಸೆ. 1ರಂದು ಸ್ವಾಮೀಜಿಯನ್ನು ಬಂಧಿಸಿದ್ದ ಪೊಲೀಸರು, ಪೋಕ್ಸೊ ಕಾಯ್ದೆ–2012, ಭಾರತೀಯ ದಂಡ ಸಂಹಿತೆ–1860, ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಾಲಂ ಅಡಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಹೈಕೋರ್ಟ್ ಏಕಸದಸ್ಯ ಪೀಠ ಕಳೆದ ನವೆಂಬರ್ 8ರಂದು ಮುರುಘಾಶ್ರೀಗೆ ಜಾಮೀನು ನೀಡಿತ್ತು.

ಮಂಗಳವಾರದ ಉಷ್ಣಾಂಶ 37° ಗರಿಷ್ಠ 23° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದೆ.

ಉಷ್ಣಾಂಶ

ಬುಧವಾರ	ಗುರುವಾರ	ಶುಕ್ರವಾರ
37° 23°	38° 23°	37° 23°

ಲೈಂಗಿಕ ದೌರ್ಜನ್ಯ ಪ್ರಕರಣ • ವಿಡಿಯೊ ಪರಿಶೀಲನೆಗೆ ವಿಶೇಷ ತಂಡ

ಸಂತ್ರಸ್ತೆಯರ ಹೇಳಿಕೆ ಪಡೆದ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಎಚ್.ಡಿ.ರೇವಣ್ಣ ಹಾಗೂ ಅವರ ಮಗ ಸಂಸದ ಪ್ರಜ್ವಲ್ ವಿರುದ್ಧ ದಾಖಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ಆರಂಭಿಸಿರುವ ಎಸ್‌ಐಟಿ (ವಿಶೇಷ ತನಿಖಾ ತಂಡ) ಅಧಿಕಾರಿಗಳು, ಸಂತ್ರಸ್ತೆಯರು ಎನ್ನಲಾದ ಇಬ್ಬರು ಮಹಿಳೆಯರಿಂದ ಸೋಮವಾರ ಮರು ಹೇಳಿಕೆ ಪಡೆದುಕೊಂಡರು.

ಸಿಐಡಿ ಎಡಿಜಿಪಿ ಬಿಜಯ್‌ಕುಮಾರ್ ಸಿಂಗ್ ನೇತೃತ್ವದಲ್ಲಿ ರಚಿಸಲಾಗಿರುವ ಎಸ್‌ಐಟಿಗೆ ಈಗಾಗಲೇ 20 ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಐಪಿಎಸ್ ಅಧಿಕಾರಿಗಳಾದ ಸುಮನ್ ಡಿ. ಪನ್ನೇಕರ್ ಹಾಗೂ ಸೀಮಾ ಲಾತ್ಕರ್ ಸಹ ತಂಡದಲ್ಲಿದ್ದಾರೆ. ಡಿವೈಎಸ್ಪಿ, ಇನ್‌ಸ್ಪೆಕ್ಟರ್, ಪಿಎಸ್‌ಐ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಕಡತಗಳನ್ನು ಈಗಾಗಲೇ ಎಸ್‌ಐಟಿಗೆ ಹಸ್ತಾಂತರಿಸಲಾಗಿದೆ. ದೂರು ನೀಡಿದ್ದ ಇಬ್ಬರು ಸಂತ್ರಸ್ತೆಯರನ್ನು ಇಲ್ಲಿನ ಅರಮನೆ ರಸ್ತೆಯಲ್ಲಿರುವ ಸಿಐಡಿ ಕಚೇರಿಗೆ ಸೋಮವಾರ ಕರೆಸಿಕೊಂಡಿದ್ದ ಎಸ್‌ಐಟಿ ಅಧಿಕಾರಿಗಳು, ಅವರಿಬ್ಬರಿಂದ ಮರು ಹೇಳಿಕೆ ಪಡೆದುಕೊಂಡಿರುವುದಾಗಿ ಮೂಲಗಳು ಹೇಳಿವೆ.

'ಮನೆ ಕೆಲಸದ ಮಹಿಳೆ ನೀಡಿರುವ ಪ್ರಾಥಮಿಕ ಮಾಹಿತಿ ಆಧರಿಸಿ ಪ್ರಕರಣ ದಾಖಲಾಗಿದೆ. ಇದೀಗ, ಎಸ್‌ಐಟಿ ತನಿಖೆ ಶುರುವಾಗಿದೆ. ಮಹಿಳೆ ಮೇಲಾಗಿರುವ ದೌರ್ಜನ್ಯದ ಸಂಪೂರ್ಣ ಮಾಹಿತಿ ತನಿಖೆಗೆ ಅಗತ್ಯವಿದೆ. ಹೀಗಾಗಿ, ಸಂತ್ರಸ್ತೆಯರಿಂದ ಮರು ಹೇಳಿಕೆ ಪಡೆಯಲಾಗಿದೆ. ಅದಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ವಿಡಿಯೊ ಪರಿಶೀಲನೆಗೆ ಪ್ರತ್ಯೇಕ ತಂಡ: 'ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾತ್ರ ಎಸ್‌ಐಟಿ ತನಿಖೆ ನಡೆಸುತ್ತಿದೆ. ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ವಿಡಿಯೊಗಳ ಬಗ್ಗೆ ಪರಿಶೀಲನೆ ನಡೆಸಲು ಪ್ರತ್ಯೇಕ ತಂಡ ರಚಿಸಲಾಗಿದ್ದು, ಮಾಹಿತಿ ಕಲೆಹಾಕುವ ಕೆಲಸ ಪ್ರಗತಿಯಲ್ಲಿದೆ' ಎಂದು ಮೂಲಗಳು ತಿಳಿಸಿವೆ.

'ಮಹಿಳೆಯರ ಮೇಲೆ ದೌರ್ಜನ್ಯ ಆಗಿರುವುದು ಕೆಲ ವಿಡಿಯೊಗಳಿಂದ ಗೊತ್ತಾಗುತ್ತಿದೆ. ಆದರೆ, ಅಸಲಿ ವಿಡಿಯೊ ಅಗತ್ಯವಿದೆ. ಅವು ಎಲ್ಲಿವೆ? ಎಂಬುದು ತನಿಖೆಯಿಂದ ತಿಳಿಯಬೇಕಿದೆ. ವಿಡಿಯೊದಲ್ಲಿರುವ ಮಹಿಳೆಯರ ಹೇಳಿಕೆಯೂ ಅತ್ಯಗತ್ಯ. ಮಹಿಳೆಯರ ವಿವರ ಲಭ್ಯವಾಗುತ್ತಿದ್ದಂತೆ, ಅವರಿಂದ ಹೇಳಿಕೆ ಪಡೆಯಲು ಪ್ರಯತ್ನಿಸಲಾಗುವುದು. ನಂತರ, ವಿಡಿಯೊ ಆಧರಿಸಿ ಪ್ರತ್ಯೇಕ ಪ್ರಕರಣಗಳು ದಾಖಲಾಗಲಿವೆ. ಬಳಿಕವೇ ಪ್ರಕರಣಗಳ ತನಿಖೆ ಎಸ್‌ಐಟಿಗೆ ವರ್ಗಾವಣೆ ಆಗಲಿದೆ' ಎಂದು ಹೇಳಿವೆ.

ಪ್ರತ್ಯೇಕ ಸಭೆ: ಎಸ್‌ಐಟಿ ಅಧಿಕಾರಿಗಳು ಹೊಸ ಸಿಬ್ಬಂದಿ ನೇಮಕ ಹಾಗೂ ಪ್ರಕರಣದ ಮಾಹಿತಿ ವಿನಿಮಯಕ್ಕಾಗಿ ಸಿಐಡಿ ಕಚೇರಿಯಲ್ಲಿ ಸೋಮವಾರ ಮಧ್ಯಾಹ್ನ ಸಭೆ ನಡೆಸಿದರು. ಹಾಸನಕ್ಕೆ ಪ್ರತ್ಯೇಕ ತಂಡವೊಂದನ್ನು ಕಳುಹಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು.

'ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರ ರಕ್ಷಣೆಗೆ ಮುಂದಾಗಬೇಕು': 'ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸಿದ ಸಂಸದ ಪ್ರಜ್ವಲ್ ಪ್ರಕರಣದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಮಧ್ಯಪ್ರವೇಶಿಸಬೇಕು. ಸಂತ್ರಸ್ತೆಯರ ರಕ್ಷಣೆಗೆ ಮುಂದಾಗಬೇಕು' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ರಾಷ್ಟ್ರೀಯ ಮಹಿಳಾ ಆಯೋಗ ಬಿಜೆಪಿಯ ದೋಸ್ತಿ ಪಕ್ಷದ ನಾಯಕನ ಮೇಲೆ ಕ್ರಮ ತೆಗೆದುಕೊಂಡಿಲ್ಲ' ಎಂದು ದೂರಿದರು.

ರೇವಣ್ಣ, ಪ್ರಜ್ವಲ್‌ಗೆ ನೋಟಿಸ್ ಸಾಧ್ಯತೆ

'ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯರ ಹೇಳಿಕೆ ಹಾಗೂ ಲಭ್ಯವಿರುವ ಪುರಾವೆಗಳನ್ನು ಪರಿಶೀಲಿಬೇಕಿದೆ. ತಾಂತ್ರಿಕ ಪುರಾವೆ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಆರೋಪಿಗಳಾದ ಎಚ್.ಡಿ. ರೇವಣ್ಣ ಹಾಗೂ ಪ್ರಜ್ವಲ್ ರೇವಣ್ಣ ಅವರಿಗೂ ನೋಟಿಸ್ ನೀಡಿ ವಿಚಾರಣೆನಡೆಸಲಾಗುವುದು' ಎಂದು ಮೂಲಗಳು ಹೇಳಿವೆ.

'ದಾಖಲಾಗಿರುವ ಪ್ರಕರಣಗಳ ಶಿಕ್ಷೆ ಪ್ರಮಾಣ ಏಳು ವರ್ಷಕ್ಕಿಂತ ಕಡಿಮೆ ಇದೆ. ಇಂಥ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸದಿರಲು ಹಲವು ನಿಯಮಗಳಿವೆ. ಹೀಗಾಗಿ, ಆರೋಪಿಗಳ ಬಂಧನದ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದುವರಿಯಲಾಗುವುದು' ಎಂದು ತಿಳಿಸಿವೆ.

ಪ್ರಜ್ವಲ್ ಪರಾರಿಗೆ ಬಿಜೆಪಿ ನೆರವು– ಕಾಂಗ್ರೆಸ್ ಆರೋಪ

ಬೆಂಗಳೂರು: 'ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ, ಬಿಜೆಪಿ– ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ತೆರಳಿ ತಲೆಮರೆಸಿಕೊಳ್ಳಲು ಕೇಂದ್ರದ ಬಿಜೆಪಿ ಸರ್ಕಾರ ಮತ್ತು ರಾಜ್ಯದ ಬಿಜೆಪಿ ನಾಯಕರು ವಾಮಮಾರ್ಗದಲ್ಲಿ ಸಹಕಾರ ನೀಡಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿದೆ.

'ಪ್ರಜ್ವಲ್ ರೇವಣ್ಣನನ್ನು ಬಂಧಿಸಿ ರಾಜ್ಯಕ್ಕೆ ಕರೆತಂದು ಕಾನೂನು ಮೂಲಕ ಶಿಕ್ಷೆ ವಿಧಿಸಲು ರಾಜ್ಯ ಬಿಜೆಪಿ ನಾಯಕರು ಪ್ರಧಾನಿ ಮೇಲೆ ಒತ್ತಡ ಹೇರಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ರಾಜ್ಯದಲ್ಲಿ ಯಾರಾದರೂ ಸತ್ತರೆ ಅವರ ಹೆಸರಿನಲ್ಲಿ ರಾಜಕೀಯ ಮಾಡುವ ಬಿಜೆಪಿಗರು, ಪ್ರಜ್ವಲ್ ರೇವಣ್ಣನ ಬೆಂಬಲಕ್ಕೆ ನಿಂತಿದ್ದಾರೆ. ಅಲ್ಲದೆ, ಚುನಾವಣೆಯಲ್ಲಿ ಅಂಥವನ ಪರ ನಿಂತು ಮತಯಾಚಿಸಿರುವ ಬಿಜೆಪಿ ನಾಯಕರು, ಮಹಿಳೆಯರ ವಿರೋಧಿಗಳು ಎನ್ನುವುದನ್ನು ಸಾಬೀತುಪಡಿಸಿದ್ದಾರೆ' ಎಂದೂ ದೂರಿದೆ.

OBITUARY



Smt. Premabai B. Kabadi
W/o Bhaskar S. Kabadi
We regret to inform her sad demise on 29.04.2024. We pray god to rest her soul in peace.
Deeply mourned by:
Kabadi Sahajanandsa & Brothers,Daughters: Shashirekha, Vanishree, Sons: Paramanand, Sathyapal Family members of Late Sri Kabadi Shankarsa

ಬಿಸಿಲ ಝಳ: ಹಾಲು ಉತ್ಪಾದನೆ ಕುಸಿತ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಗ್ರಾಮೀಣ ಭಾಗದ ನೂರಾರು ಕುಟುಂಬಗಳ ಆರ್ಥಿಕ ಸಂಪನ್ಮೂಲಕ್ಕೆ ಆಧಾರವಾಗಿದ್ದ ಹೈನುಗಾರಿಕೆ ಮೇಲೆ ಮಳೆ ಕೊರತೆ ಹಾಗೂ ಬಿಸಿಲ ಝಳ ಗಂಭೀರ ಪರಿಣಾಮ ಬೀರಿದ್ದು, ರೈತರನ್ನು ಸಂಕಷ್ಟಕ್ಕೆ ದೂಡಿದೆ.

ಮೇ ತಿಂಗಳು ಆರಂಭವಾದರೂ ಮಳೆಯ ಸುಳಿವಿಲ್ಲ. ಬಿಸಿಲ ತಾಪವೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೊಳವೆ ಬಾವಿಗಳು ಬತ್ತಿಹೋಗಿವೆ. ಇದರಿಂದಾಗಿ ಮೇವಿನ ಕೊರತೆ ಆಗಿ, ಹಾಲು ಉತ್ಪಾದನೆ ಇಳಿಕೆಯಾಗುವಂತೆ ಮಾಡಿದೆ.

ದಿನಕ್ಕೆ 10ರಿಂದ 12 ಲೀಟರ್ ಹಾಲು ನೀಡುತ್ತಿದ್ದ ಆಕಳುಗಳು, ಆರೇಳು ಲೀಟರ್ ಕೊಡುತ್ತಿವೆ. ಆದರೆ, ಹಸುಗಳಿಗೆ ಮೇವು, ನೀರು, ಬೂಸ, ಹಿಂಡಿಯಂತಹ ಪಶು ಆಹಾರ ಸೇರಿದಂತೆ ನಿರ್ವಹಣೆಗಾಗಿ ಮಾಡುತ್ತಿರುವ ಖರ್ಚು ಮಾತ್ರ ಅಷ್ಟೇ ಇದೆ ಎನ್ನುತ್ತಾರೆ ರೈತರು.

'ರಾಸುಗಳಿಗೆ ಹಿಂಡಿ, ಬೂಸಾದಂತಹ ಪಶು ಆಹಾರವನ್ನು ಎಷ್ಟೇ ಕೊಟ್ಟರೂ, ಹಸಿ ಮೇವು ಅಥವಾ ರಾಗಿ ಹುಲ್ಲು ತಿಂದಾಗ ಕೊಡುವಷ್ಟು ಹಾಲನ್ನು ಕೊಡುವುದಿಲ್ಲ. ಮಳೆ ಇಲ್ಲದ ಕಾರಣ, ಹೊರಗಡೆ ಹಸಿರ ಮೇವೂ ಇಲ್ಲ. ಬಣವೆಗಳಲ್ಲಿರುವ ಮೇವು ದಿನೇ ದಿನೇ ಕಡಿಮೆಯಾಗುತ್ತಿದೆ. ರಾಸುಗಳು ಸೊರಗುತ್ತಿವೆ. ಅವುಗಳನ್ನು ಸಾಕುವುದು ಕಷ್ಟ' ಎನ್ನುವುದು ರೈತರ ಅಳಲು.

'ಹಾಲು ಉತ್ಪಾದನೆ ಕುಸಿದಿದೆ. ಈಗ ಬರುತ್ತಿರುವ ಹಣ ರಾಸುಗಳ ನಿರ್ವಹಣೆಯ ಖರ್ಚಿಗೆ ಸಾಕಾಗುತ್ತಿದೆ. ಆರ್ಥಿಕವಾಗಿ ನಷ್ಟ ಆಗುತ್ತಿದೆ' ಎಂದು ಬೇಸರ ತೋಡಿಕೊಂಡರು ರೈತ ಮಹಿಳೆ ಶಾಂತಮ್ಮ. 'ಬೇಸಿಗೆಯಲ್ಲಿ ನಿತ್ಯ ಹಸುಗಳ ಮೈ ತೊಳೆದು, ಹೊಟ್ಟೆ ತುಂಬಾ ಮೇವು ಹಾಕಿ, ಹೊರಗಿನ ಆಹಾರ ಕೊಟ್ಟರೆ ಉತ್ತಮ ಹಾಲು ಸಿಗುತ್ತದೆ. ಈ ವರ್ಷ ಮಳೆ ಕೊರತೆಯಿಂದಾಗಿ, ರಾಸುಗಳ ಆರೈಕೆ ಹೇಗೆ ಎಂಬುದೇ ಚಿಂತೆಯಾಗಿದೆ' ಎನ್ನುತ್ತಾರೆ ಅವರು.



ಗುಣಮಟ್ಟ ಪರೀಕ್ಷೆಗೆ ಇರಿಸಲಾಗಿರುವ ಹಾಲಿನ ಕ್ಯಾನ್‌ಗಳು

> **ಡೇರಿಗೆ ಬರುತ್ತಿರುವ ಹಾಲಿನಲ್ಲಿ ಫ್ಯಾಟ್ (ಕೊಬ್ಬು) ಕಡಿಮೆಯಾಗಿದೆ. ಹಾಲಿನ ಗುಣಮಟ್ಟವೂ ಇಳಿದಿದೆ. ರೈತರಿಗೆ ಹಾಗೂ ಸಂಘಕ್ಕೆ ಇದರಿಂದ ಆದಾಯ ಕುಂಠಿತವಾಗಿದೆ.**
>
> **-ವನಿತಾ,** ಕಾರ್ಯನಿರ್ವಾಹಕ ಅಧಿಕಾರಿ, ಹಾಲೇನಹಳ್ಳಿ ಡೇರಿ
>
> **ಬಿಸಿಲ ಝಳಕ್ಕೆ ರಾಸುಗಳು ಬಳಲುತ್ತಿವೆ, ಜೊಲ್ಲು ಸುರಿಸುತ್ತಿವೆ. ಬೆಳಿಗ್ಗೆ 8ಕ್ಕೆ ಬಿಸಿಲ ತಾಪ ಶುರುವಾಗುತ್ತದೆ. ಸಂಜೆ 4 ಆದರೂ ಕಡಿಮೆ ಆಗುತ್ತಿಲ್ಲ. ಇದು ರಾಸುಗಳ ಆರೋಗ್ಯದ ಮೇಲೆ ಪರಿಣಾಮ ಬೀರಿದೆ.**
>
> **- ಹರೀಶ್,** ಹಾಲು ಉತ್ಪಾದಕ



ಸನ್ಮಾನ

ನಗರದ ವಿಜಯ ಕಾಲೇಜಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ವಿಜಯ ಕಾಲೇಜಿನ ನಿವೃತ್ತ ಅಧ್ಯಾಪಕರ ಒಕ್ಕೂಟದಿಂದ ಶಿಕ್ಷಣ ತಜ್ಞ ಎಂ.ಕೆ.ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಕಾರ್ಯದರ್ಶಿ ಎನ್.ಬಿ.ಭಟ್, ಅದಮ್ಯ ಚೇತನ ಸಂಸ್ಥೆಯ ಸಂಸ್ಥಾಪಕಿ ತೇಜಸ್ವಿನಿ ಅನಂತಕುಮಾರ್, ನಿವೃತ್ತ ಅಧ್ಯಾಪಕರ ಒಕ್ಕೂಟದ ಎಂ.ಜೆ.ಸುಂದರಂ ಮತ್ತು ಡಿ.ಪಿ.ರವೀಂದ್ರ ಪಾಲ್ಗೊಂಡಿದ್ದರು.

ಕಾಂಗ್ರೆಸ್ ವಿರುದ್ಧ ಜೆಡಿಎಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಪ್ರಕರಣವನ್ನು ನೆಪವಾಗಿಟ್ಟುಕೊಂಡು ಎಚ್.ಡಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಅವರ ಗೌರವಕ್ಕೆ ಕಾಂಗ್ರೆಸ್ ಧಕ್ಕೆ ತರುತ್ತಿದೆ. ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ನಗರ ಪೊಲೀಸ್ ಕಮಿಷನರ್‌ಗೆ ಜೆಡಿಎಸ್ ದೂರು ಸಲ್ಲಿಸಿದೆ.

ಹಾಸನ ಪ್ರಕರಣದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸಲು ಪಕ್ಷದ ತಕರಾರು ಇಲ್ಲ. ಆದರೆ, ಕಾಂಗ್ರೆಸ್ ಭವನದ ಬಳಿ ಭಾನುವಾರ ಪ್ರತಿಭಟನೆ ನಡೆಸುವಾಗ ಕೀಳು ಭಾಷೆ ಬಳಸಿದ್ದಾರೆ. ಚಾರಿತ್ರ್ಯಹರಣ ಮಾಡುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿ ವಿಧಾನ ಪರಿಷತ್ ಸದಸ್ಯ ಕೆ.ಎ.ತಿಪ್ಪೇಸ್ವಾಮಿ, ಮಾಜಿ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಚೌಡರೆಡ್ಡಿ ತೂಪಲ್ಲಿ ನೇತೃತ್ವದ ನಿಯೋಗ ಸೋಮವಾರ ದೂರು ನೀಡಿದೆ.


446 ಅನಧಿಕೃತ ಸಂಪರ್ಕಗಳ ಪತ್ತೆ; 390 ನೋಟಿಸ್ ಜಾರಿ

ಮಳೆನೀರು ಕಾಲುವೆಗೆ ತ್ಯಾಜ್ಯ ನೀರು: ನೋಟಿಸ್ ನೀಡಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಜಲಮಂಡಳಿ ಕಾಯ್ದೆ ಉಲ್ಲಂಘಿಸಿ, ತ್ಯಾಜ್ಯ ನೀರನ್ನು ಅಕ್ರಮವಾಗಿ ಒಳಚರಂಡಿ ಹಾಗೂ ಮಳೆನೀರು ಕಾಲುವೆಗೆ ಹರಿಸುತ್ತಿರುವವರಿಗೆ ಮೇ 1ರಿಂದ ನೋಟಿಸ್ ಜಾರಿ ಮಾಡುವಂತೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿಯಿಂದ ಸಂಪರ್ಕ ಪಡೆಯದೆ ಅನಧಿಕೃತವಾಗಿ ತ್ಯಾಜ್ಯ ನೀರನ್ನು ಒಳಚರಂಡಿಗೆ ಹರಿಸಲಾಗುತ್ತಿದೆ. ಬಹುತೇಕ ಕಡೆಗಳಲ್ಲಿ ಮಳೆ ನೀರು ಕಾಲುವೆಗೂ ತ್ಯಾಜ್ಯ ಬಿಡಲಾಗುತ್ತಿದೆ. ಇದನ್ನು ತಪ್ಪಿಸಲು ಹಾಗೂ ಒಳಚರಂಡಿ ಸಂಪರ್ಕವನ್ನು ಅಧಿಕೃತಗೊಳಿಸಲು ಮೇ 7ರವರೆಗೆ ಅವಕಾಶ ನೀಡಲಾಗಿದೆ ಎಂದರು.



ಒಂದು ವಾರದಿಂದ ಜಲಮಂಡಳಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ 528 ಕಟ್ಟಡಗಳಲ್ಲಿ ಪರಿಶೀಲನೆ ನಡೆಸಿದ್ದಾರೆ. ಇವುಗಳಲ್ಲಿ 446 ಕಡೆಗಳಲ್ಲಿ ಅನಧಿಕೃತವಾಗಿ ತ್ಯಾಜ್ಯ ನೀರನ್ನು ಒಳಚರಂಡಿಗೆ ಹರಿಸುತ್ತಿರುವುದು ಪತ್ತೆಯಾಗಿದೆ. ಇದರಲ್ಲಿ 221 ಸಂಪರ್ಕಗಳನ್ನು ಅಗತ್ಯ ಶುಲ್ಕ ಭರಿಸಿಕೊಂಡು ಅಧಿಕೃತಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಇನ್ನೂ 390 ಸಂಪರ್ಕಗಳಿಗೆ ನೋಟಿಸ್ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

20ಕ್ಕೂ ಹೆಚ್ಚು ಫ್ಲ್ಯಾಟ್‌ಗಳನ್ನು ಹೊಂದಿರುವ ವಸತಿ ಸಮುಚ್ಚಯಗಳು, ಹೋಟೆಲ್‌ಗಳು, ವಾಣಿಜ್ಯ ಕಟ್ಟಡಗಳನ್ನು ಆದ್ಯತೆಯ ಮೇರೆಗೆ ಪರಿಶೀಲನೆ ನಡೆಸಬೇಕು. ಮೇ 7ರ ನಂತರವೂ ಒಳಚರಂಡಿ ಸಂಪರ್ಕವನ್ನು ಅಧಿಕೃತಗೊಳಿಸಲು ಅರ್ಜಿ ಸಲ್ಲಿಸದೇ ಇರುವಂತವರ ಮೇಲೆ ಕ್ರಮ ಕೈಗೊಳ್ಳಬೇಕು. ಅವರು 15 ದಿನಗಳ ಒಳಗಾಗಿ ಜಲಮಂಡಳಿಯ ಅಧಿಕೃತ ಸಂಪರ್ಕ ಪಡೆಯದೇ ಇದ್ದಲ್ಲಿ ಅವರ ಮೇಲೆ ಕಾನೂನಿನ ಅನ್ವಯ ಕ್ರಮಕ್ಕೆ ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಅಧ್ಯಕ್ಷರು ಸೂಚನೆ ನೀಡಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಎಂಜಿನಿಯರ್ ಸುರೇಶ, ಮುಖ್ಯ ಎಂಜಿನಿಯರ್‌ಗಳಾದ ಎಲ್. ಕುಮಾರನಾಯಕ್, ಕೆ.ಎನ್.ಪರಮೇಶ, ಎಸ್. ವಿ.ವೆಂಕಟೇಶ, ಎ.ರಾಜಶೇಖರ್, ಮಹೇಶ ಕೆ.ಎನ್., ರಾಜೀವ್ ಕೆ.ಎನ್., ಗಂಗಾಧರ್ ಬಿ.ಸಿ., ದೇವರಾಜು ಎಂ., ಜಯಶಂಕರ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ರಾಮನವಮಿ ಸಂಗೀತೋತ್ಸವ–2024: ವಿಶೇಷ ಸಂಗೀತ ಕಛೇರಿ: ಎ. ಅತ್ರೇಯ ಮತ್ತು ತಂಡ, ಕರ್ನಾಟಕ ಮತ್ತು ಭಾರತೀಯ ಶಾಸ್ತ್ರೀಯ ಸಂಗೀತದ ಜುಗಲ್‌ಬಂದಿ ಕಛೇರಿ: ಎಚ್.ಕೆ. ವೆಂಕಟ್‌ರಾಮ್, ಅಶ್ವಾನಿ ಶಂಕರ್. ಕೆ.ಯು. ಜಯಚಂದ್ರ ರಾವ್, ರಾಜೇಂದ್ರ ನಾಕೋಡ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ: ನೃತ್ಯ ಪ್ರದರ್ಶನ: ಅನುಷ್ಕಾ, ಸುಭಿಕ್ಷಾ, 'ರಾವಣ ವಧೆ' ಯಕ್ಷಗಾನ ಪ್ರದರ್ಶನ: ಯಕ್ಷಕಲಾ ಅಕಾಡೆಮಿಯಿಂದ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪಿಂಚಣಿ ಜಾರಿ ವಿಳಂಬಕ್ಕೆ ಖಂಡನೆ

ಬೆಂಗಳೂರು: 'ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ನಿವೃತ್ತ ನೌಕರರಿಗೆ ಕನಿಷ್ಠ ಪಿಂಚಣಿ ನೀಡುವಲ್ಲಿ ಇಪಿಎಫ್‌ಒ ವಿಳಂಬ ನೀತಿ ಅನುಸರಿಸುತ್ತಿದೆ' ಎಂದು ಆರೋಪಿಸಿ ಎನ್‌ಎಸಿ, ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿಯ ನಿವೃತ್ತ ನೌಕರರು ಸೋಮವಾರ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನಾ ಸಭೆ ನಡೆಸಿದರು.

ನೂರಾರು ನೌಕರರು ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡಿದ್ದು, ಬೇಡಿಕೆಗಳ ಮನವಿಪತ್ರವನ್ನು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಿಗೆ ನೀಡಲಾಯಿತು.

'ಇಪಿಎಫ್‌ಒ, ಪಿಂಚಣಿದಾರರ ವಿಷಯದಲ್ಲಿ ನಿರ್ಲಕ್ಷ್ಯ ತೋರಲಾಗುತ್ತಿದೆ. ಸುಪ್ರೀಂ ಕೋರ್ಟ್‌ನ ತೀರ್ಪನ್ನು ಜಾರಿಗೆ ತರಲು ವಿಳಂಬ ನೀತಿ ಅನುಸರಿಸಲಾಗುತ್ತಿದೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

ಸರ್ಕಾರ ಮತ್ತು ನ್ಯಾಯಾಲಯಕ್ಕೆ ಪಿಂಚಣಿ ನಿಧಿಯ ವಾಸ್ತವ ಅಂಕಿಅಂಶಗಳನ್ನು ನೀಡದೇ, ಕನಿಷ್ಠ ಪಿಂಚಣಿ ಹೆಚ್ಚಿಸಲು ಇಪಿಎಫ್‌ಒ ಅಧಿಕಾರಿ ವರ್ಗ ಹಿಂದೇಟು ಹಾಕುತ್ತಿದೆ. ನ್ಯಾಯ ಸಿಗುವವರೆಗೂ ದೀರ್ಘ ಹೋರಾಟ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು. 'ಹಿಂದಿನ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿತ್ತು. ಆದರೆ, ಈಡೇರಿಸಲಿಲ್ಲ. ನಮ್ಮ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತುವಂತೆ ಆಗ್ರಹಿಸಿ ಈ ಬಾರಿಯ ಚುನಾವಣೆಯಲ್ಲಿ ಆಯ್ಕೆಯಾಗುವ ಸಂಸದರ ಮನೆ ಹಾಗೂ ಕಚೇರಿಗೆ ಮುತ್ತಿಗೆ ಹಾಕಲಾಗುವುದು' ಎಂದು ತಿಳಿಸಿದರು.

ಪ್ರತಿಭಟನಾ ಸಭೆಯಲ್ಲಿ ಜಿ.ಎಸ್.ಎಂ. ಸ್ವಾಮಿ, ನಂಜುಂಡೇಗೌಡ, ಶಂಕರ್ ಕುಮಾರ್, ಸುಬ್ಬಣ್ಣ, ಹುಚ್ಚಪ್ಪ, ಶ್ರೀನಿವಾಸರೆಡ್ಡಿ ಭಾಗವಹಿಸಿದ್ದರು.



ಕನಿಷ್ಠ ಪಿಂಚಣಿ ನೀಡಲು ಇಪಿಎಫ್‌ಒ ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಎನ್‌ಎಸಿ, ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರು ಸೋಮವಾರ ನಗರದ ಪ್ರಾದೇಶಿ ಭವಿಷ್ಯ ನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ತಾಯಿ ಮಗಳ ನಡುವೆ ಜಗಳವಾಗಿ ಪರಸ್ಪರ ಇರಿದುಕೊಂಡಿರುವ ಶಂಕೆ

ಯುವತಿ ಕೊಲೆ: ತಾಯಿಗೂ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಸಾಹಿತಿ (19) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಅವರ ತಾಯಿ ಸಹ ಚಾಕು ಇರಿತದಿಂದ ಗಾಯಗೊಂಡಿದ್ದಾರೆ.

‘ಠಾಣೆ ವ್ಯಾಪ್ತಿಯ ಶಾಸ್ತ್ರಿನಗರದ ಸಾಹಿತಿ, ಪಿಯುಸಿ ವಿದ್ಯಾರ್ಥಿನಿ. ಕೆಲ ವರ್ಷಗಳ ಹಿಂದೆಯಷ್ಟೇ ತಂದೆ ತೀರಿಕೊಂಡಿದ್ದರು. ತಾಯಿ ಜೊತೆ ಸಾಹಿತಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ತಾಯಿ ಹಾಗೂ ಮಗಳು ಮಾತ್ರ ಮನೆಯಲ್ಲಿದ್ದರು. ಸೋಮವಾರ ಮನೆಯಲ್ಲಿ ಜಗಳವಾಗಿರುವ ಮಾಹಿತಿಯಿದೆ. ಇದೇ ಸಂದರ್ಭದಲ್ಲಿ ಚಾಕು ಇರಿತದಿಂದ ಗಾಯಗೊಂಡು ಸಾಹಿತಿ ಮೃತಪಟ್ಟಿದ್ದಾರೆ. ತಾಯಿಗೂ ಚಾಕು ಇರಿಯಲಾಗಿದ್ದು, ಗಾಯಗೊಂಡಿರುವ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

ತಾಯಿ–ಮಗಳ ನಡುವೆ ಜಗಳ ಶಂಕೆ: ‘ತಾಯಿ ಹಾಗೂ ಮಗಳು ಆಗಾಗ ಜಗಳವಾಡುತ್ತಿದ್ದರು. ಸೋಮವಾರವೂ ಅವರಿಬ್ಬರ ನಡುವೆ ಜಗಳವಾಗಿರುವುದು ಗೊತ್ತಾಗಿದೆ. ಇದೇ ಸಂದರ್ಭದಲ್ಲಿ ಮಗಳು, ತಾಯಿಗೆ ಚಾಕುವಿನಿಂದ ಇರಿದಿದ್ದಾರೆ. ತಾಯಿ ಸಹ ಮಗಳಿಗೆ ಚಾಕುವಿನಿಂದ ಇರಿದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಪರಸ್ಪರ ಚಾಕು ಇರಿತದಿಂದ ತೀವ್ರ ರಕ್ತಸ್ರಾವವಾಗಿ ಸಾಹಿತಿ ಮೃತಪಟ್ಟಿದ್ದಾರೆ. ತಾಯಿ ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

‘ತಾಯಿಯೇ ಕೃತ್ಯ ಎಸಗಿದ್ದಾರೆ ಎಂಬುದನ್ನು ಸದ್ಯಕ್ಕೆ ಹೇಳಲಾಗದು. ಬೇರೆ ಯಾರಾದರೂ ಮನೆಗೆ ಬಂದು ಇಬ್ಬರಿಗೂ ಚಾಕುವಿನಿಂದ ಇರಿದಿರುವ ಅನುಮಾನವೂ ಇದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಮನೆ ಖಾಲಿ ಮಾಡುತ್ತಿದ್ದ ಪತ್ನಿ ಕೊಲೆ: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಶಿಯಾಫತ್ ಉನ್ನೀಸಾ ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಪತಿ ನೂರುಲ್ಲಾ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಠಾಣೆ ವ್ಯಾಪ್ತಿಯ ಇಲಿಯಾಸ್ ನಗರದಲ್ಲಿ ಸೋಮವಾರ ಈ ಕೊಲೆ ನಡೆದಿದೆ. ಕೆಲವೇ ಗಂಟೆಗಳಲ್ಲಿ ಪತಿಯನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉನ್ನೀಸಾ ಹಾಗೂ ನೂರುಲ್ಲಾ ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ನಾಲ್ವರು ಮಕ್ಕಳಿದ್ದಾರೆ. ದಂಪತಿ ನಡುವೆ ಇತ್ತೀಚೆಗೆ ಜಗಳ ಶುರುವಾಗಿತ್ತು. ಪತ್ನಿ ಮನೆ ಬಿಟ್ಟು ಹೋಗಿ ಬೇರೆಡೆ ವಾಸವಿದ್ದರು. ನೂರುಲ್ಲಾ ಪತ್ನಿಗೆ ತಲಾಖ್ ನೀಡಿದ್ದ’ ಎಂದು ಹೇಳಿದರು.

‘ತಲಾಖ್ ನೀಡಿದ್ದರಿಂದ ಉನ್ನೀಸಾ ಅವರು ಪತಿಯ ಮನೆಯಲ್ಲಿದ್ದ ಸಾಮಗ್ರಿಗಳನ್ನು ತರಲು ಹೋಗಿದ್ದರು. ಇದೇ ಸಂದರ್ಭದಲ್ಲಿಯೇ ಆರೋಪಿ ನೂರುಲ್ಲಾ, ಪತ್ನಿ ಜೊತೆ ಜಗಳ ತೆಗೆದು ಚಾಕುವಿನಿಂದ ಇರಿದು ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ತಿಳಿಸಿದರು.

ಬಾಂಬ್ ಸ್ಫೋಟ: ಶಂಕಿತರು ನ್ಯಾಯಾಂಗ ಬಂಧನಕ್ಕೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಗಿರುವ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹಮ್ಮದ್ ತಾಹಾನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಾರ್ಚ್ 1ರಂದು ಬಾಂಬ್ ಸ್ಫೋಟ ನಡೆದಿತ್ತು. ಮುಸಾವೀರ್ ಹಾಗೂ ತಾಹಾನನ್ನು ಏಪ್ರಿಲ್ 12ರಂದು ಬಂಧಿಸಿದ್ದ ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು, ಹೆಚ್ಚಿನ ವಿಚಾರಣೆಗಾಗಿ ಏಪ್ರಿಲ್ 29ರವರೆಗೆ ಕಸ್ಟಡಿಗೆ ಪಡೆದುಕೊಂಡಿದ್ದರು.

ಕಸ್ಟಡಿ ಅವಧಿ ಮುಗಿದಿದ್ದರಿಂದ ಇಬ್ಬರನ್ನೂ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಯಿತು.

‘ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲ ಮಾಹಿತಿ ಕಲೆಹಾಕಲಾಗಿದೆ. ಮಹಜರು ಬಹುತೇಕ ಪೂರ್ಣಗೊಂಡಿದೆ. ಸದ್ಯಕ್ಕೆ ಆರೋಪಿಗಳ ಕಸ್ಟಡಿ ಅಗತ್ಯವಿಲ್ಲ’ ಎಂದು ಎನ್‌ಐಎ ಅಧಿಕಾರಿಗಳು ಹೇಳಿದರು. ವಿಚಾರಣೆ ನಡೆಸಿದ ನ್ಯಾಯಾಲಯ, ಇಬ್ಬರೂ ಶಂಕಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು. ಸದ್ಯ ಇಬ್ಬರನ್ನೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಹೋಟೆಲ್‌ಗೆ ನುಗ್ಗಿ ಚಾಕು ತೋರಿಸಿ ಬೆದರಿಕೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿರುವ ಹೋಟೆಲ್‌ವೊಂದಕ್ಕೆ ನುಗ್ಗಿದ್ದ ಮೂವರು ದುಷ್ಕರ್ಮಿಗಳು, ಮಾಲೀಕರು ಹಾಗೂ ಸಿಬ್ಬಂದಿಗೆ ಚಾಕು ತೋರಿಸಿ ಜೀವ ಬೆದರಿಕೆಯೊಡ್ಡಿ ಸುಲಿಗೆಗೆ ಯತ್ನಿಸಿ ಪರಾರಿಯಾಗಿದ್ದಾರೆ.

ಭಾನುವಾರ ರಾತ್ರಿ ನಡೆದಿರುವ ಆರೋಪಿಗಳ ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದೇ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿರುವ ಹೋಟೆಲ್ ಮಾಲೀಕ, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರನ್ನು ಒತ್ತಾಯಿಸಿದ್ದಾರೆ.

‘ಕಮ್ಮನಹಳ್ಳಿಯಲ್ಲಿರುವ ಹೋಟೆಲ್‌ಗೆ ಮೂವರು ದುಷ್ಕರ್ಮಿಗಳು ನುಗ್ಗಿದ್ದರು. ಕೌಂಟರ್‌ನಲ್ಲಿದ್ದ ಮಾಲೀಕನ ಜೊತೆ ಸುಖಾಸುಮ್ಮನೇ ಜಗಳ ತೆಗೆದಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ಸಿಬ್ಬಂದಿಯನ್ನೂ ಬೆದರಿಸಿ ಸುಲಿಗೆಗೆ ಯತ್ನಿಸಿದ್ದರು. ಜನರು ಸೇರುತ್ತಿದ್ದಂತೆ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ದುಷ್ಕರ್ಮಿಗಳು ಹೋಟೆಲ್‌ಗೆ ಆಗಾಗ ಬಂದು ಬೆದರಿಕೆ ಹಾಕುತ್ತಿರುವ ಘಟನೆಗಳು ನಡೆಯುತ್ತಿರುವ ಬಗ್ಗೆ ಮಾಲೀಕರು ತಿಳಿಸಿದ್ದಾರೆ. ಹೋಟೆಲ್‌ನಲ್ಲಿ ನಡೆದಿರುವ ಘಟನೆ ಕುರಿತು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಅಪಘಾತ: ಹಿಂಬದಿ ಸವಾರ ಸಾವು

ಬೆಂಗಳೂರು: ತಲಘಟ್ಟಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿರುವ ಗುರು ಸಿದ್ದೇಶ್ವರ ಚಿತ್ರಮಂದಿರ ಬಳಿ ಬೈಕ್ ಹಾಗೂ ಕಾರಿನ ನಡುವೆ ಅಪಘಾತ ಸಂಭವಿಸಿದ್ದು, ಬೈಕ್ ಹಿಂಬದಿ ಸವಾರ ರಾಜು ಹುಸೇನ್ (32) ಎಂಬುವವರು ಮೃತಪಟ್ಟಿದ್ದಾರೆ.

‘ಅಸ್ಸಾಂನ ರಾಜು, ಅಂಜನಾಪುರದಲ್ಲಿ ವಾಸವಿದ್ದರು. ವೆಲ್ಡಿಂಗ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಸಹೋದ್ಯೋಗಿ ದಾದಾಪೀರ್ ಎಂಬುವವರ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಭಾನುವಾರ ರಾತ್ರಿ ಕಾರು ಹಾಗೂ ಬೈಕ್ ಪರಸ್ಪರ ಡಿಕ್ಕಿಯಾಗಿ, ಅಪಘಾತ ಸಂಭವಿಸಿತ್ತು. ತೀವ್ರ ಗಾಯಗೊಂಡ ರಾಜು ಹುಸೇನ್ ಸ್ಥಳದಲ್ಲೇ ಮೃತಪಟ್ಟರು. ಗಾಯಗೊಂಡಿರುವ ದಾದಾಪೀರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಹೇಳಿದ್ದಾರೆ.

‘ಕಾರು ಚಾಲಕನ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಅಪಘಾತ: ಕಾರು ಚಾಲಕ ಸಾವು

ಶಿರಾ: ರಾಷ್ಟ್ರೀಯ ಹೆದ್ದಾರಿ-48ರ ತರೂರು ಗೇಟ್ ಬಳಿ ಸೋಮವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ನೆಲಮಂಗಲದ ಅರುಣ್ (35) ಮೃತಪಟ್ಟಿದ್ದಾರೆ.

ಬೆಂಗಳೂರಿನಿಂದ ಹುಬ್ಬಳ್ಳಿಗೆ ಕಾರಿನಲ್ಲಿ ಹೋಗುತ್ತಿದ್ದಾಗ ಅಪಘಾತ ನಡೆದಿದೆ. ಅತಿ ವೇಗವಾಗಿ ಬರುತ್ತಿದ್ದ ಕಾರು ವಾಹನವನ್ನು ಹಿಂದಿಕ್ಕಲು ಹೋಗಿ ಬಸ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ರಸ್ತೆ ವಿಭಜಕದಿಂದ ಹಾರಿ ರಸ್ತೆಯ ಮತ್ತೊಂದು ಬದಿಗೆ ಹೋಗಿ ಬಿದ್ದಿದೆ. ಚಾಲಕ ಅರುಣ್ ಕಾರಿನಿಂದ ಕೆಳಗೆ ಬಿದ್ದು ಎದುರಿಗೆ ಬರುತ್ತಿದ್ದ ಲಾರಿಗೆ ಸಿಕ್ಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ನೆಲಮಂಗಲದ ನರಹರಿ ಕುಲಕರ್ಣಿ ಗಾಯಗೊಂಡಿದ್ದಾರೆ. ಕಳ್ಳಂಬೆಳ್ಳ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ನೀರಾಟ.. ಬಿರು ಬಿಸಿಲಿನಲ್ಲಿ ದೇಹ ತಂಪಾಗಿಸುವುದರ ಜೊತೆಗೆ ಈಜು ಕಲಿಯಲು ಬೆಂಗಳೂರು ಬಸವನಗುಡಿಯ ಅಕ್ವಾಟಿಕ್ ಸೆಂಟರ್‌ಗೆ ಬಂದಿರುವ ಮಕ್ಕಳು ನೀರಾಟದಲ್ಲಿ ತೊಡಗಿರುವುದು – ಪ್ರಜಾವಾಣಿ ಚಿತ್ರ/ ರಂಜು ಪಿ.

ನದಿಯಲ್ಲಿ ಮುಳುಗಿ 5 ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ/ ಹಾರೋಹಳ್ಳಿ (ರಾಮನಗರ): ಕಾವೇರಿ ನದಿ ಹರಿಯುವ ತಾಲ್ಲೂಕಿನ ಸಂಗಮಕ್ಕೆ ಸೋಮವಾರ ಪ್ರವಾಸಕ್ಕೆ ಬಂದಿದ್ದ ಬೆಂಗಳೂರು ಕಾಲೇಜಿನ ಐವರು ವಿದ್ಯಾರ್ಥಿಗಳು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ರಾಜಾಜಿನಗರದ ಕೆಎಲ್‌ಇ ಕಾಲೇಜಿನ ಬಿ.ಎಸ್‌ಸಿ ದ್ವಿತೀಯ ವರ್ಷದ ವಿದ್ಯಾರ್ಥಿನಿಯರಾದ ವರ್ಷಾ (20), ನೇಹಾ (20), ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿನಿ ಚಿಕ್ಕಬಾಣಾವರದ ಹರ್ಷಿತ (20), ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿಸಿಎ ವಿದ್ಯಾರ್ಥಿ ತೇಜಸ್ (21) ಹಾಗೂ ಈಗಷ್ಟೇ ದ್ವಿತೀಯ ಪಿಯು ಪಾಸಾಗಿದ್ದ ಬಿಹಾರ ಮೂಲದ ಅಭಿಷೇಕ್ (20) ಮೃತ ವಿದ್ಯಾರ್ಥಿಗಳು.



ಅಭಿಷೇಕ್



ನೇಹಾ



ಹರ್ಷಿತಾ



ತೇಜಸ್



ವರ್ಷಾ

ಬೆಂಗಳೂರಿನಿಂದ ಒಟ್ಟು 12 ಜನ ಸ್ನೇಹಿತರು ದ್ವಿಚಕ್ರ ವಾಹನದಲ್ಲಿ ಮಧ್ಯಾಹ್ನ 12 ಗಂಟೆಗೆ ಸಂಗಮಕ್ಕೆ ಬಂದಿದ್ದರು. ಇವರೆಲ್ಲರೂ ಶಾಲೆಯಲ್ಲಿ ಕಲಿಯುವಾಗಲೇ ಸ್ನೇಹಿತರಾಗಿದ್ದು, ಸದ್ಯ ಬೇರೆ ಬೇರೆ ಕಾಲೇಜಿನಲ್ಲಿ ಕಲಿಯುತ್ತಿದ್ದಾರೆ. ದೇವಸ್ಥಾನಕ್ಕೆ ಹೋಗುವುದಾಗಿ ಮನೆಯಲ್ಲಿ ಹೇಳಿ ಇಲ್ಲಿಗೆ ಬಂದಿದ್ದರು.

ಎಲ್ಲರೂ ನೀರಿಗಿಳಿದಿದ್ದರು. ಐವರು ಆಳವಾದ ಜಾಗದ ಅರಿವಿಲ್ಲದೆ ಅತ್ತ ಆಟವಾಡಲು ಹೋಗಿದ್ದಾರೆ. ಸರಿಯಾಗಿ ಈಜು ಗೊತ್ತಿಲ್ಲದಿದ್ದರಿಂದ ಪರಸ್ಪರ ಕೈ ಹಿಡಿದುಕೊಂಡು ಹೋಗಿದ್ದ ಐವರು ನೀರಿನ ಸೆಳೆತಕ್ಕೆ ಸಿಲುಕಿ ಮುಳುಗ ತೊಡಗಿದ್ದಾರೆ.

ಸ್ನೇಹಿತರು ಕಣ್ಣೆದುರಿಗೆ ಮುಳುಗುತ್ತಿದ್ದನ್ನು ಕಂಡ ಇತರರು ರಕ್ಷಣೆಗೆ ಕೂಗಿಕೊಂಡಿದ್ದಾರೆ. ತಕ್ಷಣಕ್ಕೆ ಯಾರಿಗೂ ನೆರವಿಗೆ ಬರಲು ಸಾಧ್ಯವಾಗಿಲ್ಲದ್ದರಿಂದ ಐವರೂ ನೀರುಪಾಲಾಗಿದ್ದಾರೆ.

ಅಗ್ನಿಶಾಮಕ ಸಿಬ್ಬಂದಿ ಕರೆಸಿ ಶವಗಳನ್ನು ಮೇಲಕ್ಕೆತ್ತಲಾಯಿತು. ಹಾರೋಹಳ್ಳಿಯ ದಯಾನಂದ ಸಾಗರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಶವಗಳನ್ನು ಹಸ್ತಾಂತರಿಸಲಾಯಿತು ಎಂದು ಸಾತನೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಕ್ಕಳು ನದಿಯಲ್ಲಿ ಮುಳುಗಿ ಮೃತಪಟ್ಟಿರುವ ವಿಷಯ ತಿಳಿದು ಸ್ಥಳಕ್ಕೆ ಬಂದ ವಿದ್ಯಾರ್ಥಿಗಳ ತಂದೆ–ತಾಯಂದಿರು ಹಾಗೂ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಆಸ್ಪತ್ರೆಗೆ ಸಂಸದ ಡಿ.ಕೆ. ಸುರೇಶ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ದೌರ್ಜನ್ಯ: ಆರೋಪಿಗಳಿಗೆ ಜನರಿಂದ ಥಳಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯನ್ನು ವಿವಸ್ತ್ರಗೊಳಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ ಇಬ್ಬರು ಆರೋಪಿಗಳನ್ನು ಸಾರ್ವಜನಿಕರೇ ಹಿಡಿದು ಥಳಿಸಿ ಕಾಡುಗೋಡಿ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಏಪ್ರಿಲ್ 24ರಂದು ನಡೆದಿರುವ ದೌರ್ಜನ್ಯ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಾದ ಸಚಿನ್ ಹಾಗೂ ಶೇಖರ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಾಲಕಿಯು ಪೋಷಕರ ಜೊತೆ ವಾಸವಿದ್ದಳು. ಇವರ ಮನೆ ಸಮೀಪದಲ್ಲಿಯೇ ಆರೋಪಿಗಳು ನೆಲೆಸಿದ್ದರು. ಬಾಲಕಿಯ ಪೋಷಕರು ಕೆಲಸ ನಿಮಿತ್ತ ಮನೆಯಿಂದ ಹೊರಗಡೆ ಹೋಗಿದ್ದರು. ತಿಂಡಿ ಕೊಡಿಸುವುದಾಗಿ ಹೇಳಿದ್ದ ಆರೋಪಿಗಳು, ಬಾಲಕಿಯನ್ನು ಮನೆಗೆ ಕೊರೆದೊಯ್ದಿದ್ದರು. ಅಲ್ಲಿಯೇ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು’ ಎಂದು ತಿಳಿಸಿದರು.

‘ತೀವ್ರ ನೋವಿನಿಂದ ಬಾಲಕಿ ಚೀರಾಡಿದ್ದಳು. ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಆರೋಪಿಗಳನ್ನು ಹಿಡಿದು ಥಳಿಸಿದ್ದರು. ಗಸ್ತು ವಾಹನ ಸಿಬ್ಬಂದಿ ಕೈಗೆ ಆರೋಪಿಗಳನ್ನು ಒಪ್ಪಿಸಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಹೇಳಿದರು.

‘ಸಸ್ತ್ರ’ದಲ್ಲಿ ವಿಶ್ವವಿದ್ಯಾಲಯ ದಿನ

ಬೆಂಗಳೂರು: ‘ಉದ್ಯೋಗ ಕ್ಷೇತ್ರದಲ್ಲಿ ನಿರಂತರವಾಗಿ ಬದಲಾಗುತ್ತಿರುವ ಅಗತ್ಯಕ್ಕೆ ತಕ್ಕಂತೆ ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು’ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಉಪಾಧ್ಯಕ್ಷ ಡಾ. ಅಭಯರ್ ಜೆರೆ ತಿಳಿಸಿದರು.

ಸಸ್ತ್ರ (ಎಸ್‌ಎಎಸ್‌ಟಿಆರ್‌ಎ) ಯೂನಿವರ್ಸಿಟಿಯ ‘ವಿಶ್ವವಿದ್ಯಾಲಯದ ದಿನ’ದಲ್ಲಿ ಮಾತನಾಡಿದ ಅವರು, ‘ವಿಕಸಿತವಾಗುತ್ತಿರುವ ಅನಿಶ್ಚಿತ ತಂತ್ರಜ್ಞಾನಗಳನ್ನು ಸತತವಾಗಿ ಕಲಿಯುವ ಪದವೀಧರರು, ಇದರ ಜೊತೆಗೆ ದೀರ್ಘಕಾಲದಲ್ಲಿ ಜೀವನೋಪಾಯಕ್ಕಾಗಿ ಅಗತ್ಯವಿರುವ ಸ್ವಯಂ– ಸ್ಥಿರತೆಯನ್ನೂ ಸೃಷ್ಟಿಸಿಕೊಳ್ಳಬೇಕು’ ಎಂದರು.

ಶಿಸ್ತು ಸೇರಿದಂತೆ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿ ಹಾಗೂ ಶಿಕ್ಷಕ ವರ್ಗ– ಪಿಎಚ್‌.ಡಿ ಪದವಿ ಪೂರೈಸಿದವರಿಗೆ ಸಂಶೋಧನಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

2023–24ನೇ ಸಾಲಿನ ವಾರ್ಷಿಕ ವರದಿಯನ್ನು ಪ್ರಸ್ತುತಪಡಿಸಿದ ಕುಲಪತಿ ಡಾ. ಎಸ್. ವೈದ್ಯಸುಬ್ರಹ್ಮಣ್ಯಂ, ವಿಶ್ವವಿದ್ಯಾಲಯದ ಪ್ರಗತಿಯ ಪ್ರಮುಖಾಂಶಗಳನ್ನು ವಿವರಿಸಿದರು. 1100 ಪ್ರಕಟಣೆಗಳು, 12 ಪೇಟೆಂಟ್, 8 ಉತ್ಪನ್ನಗಳ ಬಿಡುಗಡೆ, ವಿದ್ಯಾರ್ಥಿಗಳಿಗೆ 1900 ಉದ್ಯೋಗ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ₹125 ಕೋಟಿ ವಿನಿಯೋಗದ ಬಗ್ಗೆ ಮಾಹಿತಿ ನೀಡಿದರು.

‘ಮತ್ತೆ ನ್ಯಾಯಾಲಯಕ್ಕೆ ಹೋದರೆ ಛೀಮಾರಿ ಖಚಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ರಾಜ್ಯಕ್ಕೆ ದಾಖಲೆ ಪ್ರಮಾಣದ ಬರ ಪರಿಹಾರ ನೀಡಿದೆ. ರಾಜ್ಯ ಸರ್ಕಾರ ಈಗ ತಕರಾರು ಎತ್ತಿ ಮತ್ತೆ ನ್ಯಾಯಾಲಯಕ್ಕೆ ಹೋದರೆ ಛೀಮಾರಿ ಹಾಕಿಸಿಕೊಳ್ಳುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಹಿಂದೆಂದೂ ನೀಡದಷ್ಟು ಪರಿಹಾರವನ್ನು ಕೇಂದ್ರ ಸರ್ಕಾರ ನೀಡಿದೆ. ಆದರೂ, ಮತ್ತೆ ನ್ಯಾಯಾಲಯಕ್ಕೆ ಹೋಗುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹೇಳುತ್ತಿದೆ. ಪರಿಹಾರ ಬಿಡುಗಡೆ ಕುರಿತು ನ್ಯಾಯಾಲಯಕ್ಕೆ ಹೋಗಲಿ, ಛೀಮಾರಿಯನ್ನೂ ಹಾಕಿಸಿಕೊಂಡು ಬರಲಿ’ ಎಂದರು.

‘ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ರಾಜ್ಯಕ್ಕೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ಪರಿಹಾರ ವಿತರಣೆಯಲ್ಲಿ ನ್ಯಾಯ ಒದಗಿಸಿರಲಿಲ್ಲ. ಆಗ ಬೇಡಿಕೆಯ ಶೇಕಡ 8ರಿಂದ ಶೇ 9ರಷ್ಟು ಮೊತ್ತ ಮಾತ್ರ ನೀಡಲಾಗಿತ್ತು. ಅದನ್ನು ಹೇಳುವ ಯೋಗ್ಯತೆ ಕೂಡ ಕಾಂಗ್ರೆಸ್ ನಾಯಕರಿಗೆ ಇಲ್ಲ’ ಎಂದು ವಾಗ್ದಾಳಿ ನಡೆಸಿದರು.

ಕೇಂದ್ರದ ಈಗಿನ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕರು ಮಾಡುತ್ತಿರುವ ಆರೋಪಗಳಲ್ಲಿ ಹುರುಳಿಲ್ಲ ಎಂಬುದನ್ನು ಅಂಕಿಅಂಶಗಳೇ ಸಾಬೀತುಪಡಿಸುತ್ತವೆ. ಈಗ ಮತ್ತೆ ರಾಜ್ಯವು ನ್ಯಾಯಾಲಯಕ್ಕೆ ಹೋದರೆ ಹಿಂದಿನ ವಿಚಾರಗಳೂ ಹೊರ ಬರುತ್ತವೆ ಎಂದರು.

ಲಕ್ಷ್ಮಿ ಗೋಪಾಲಸ್ವಾಮಿಗೆ ‘ಸೃಷ್ಟಿ ನೃತ್ಯ ಪರಿಣತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ನೃತ್ಯ ದಿನಾಚರಣೆ ಪ್ರಯುಕ್ತ ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ನೀಡುವ ‘ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣತಿ ಪ್ರಶಸ್ತಿ’ಗೆ ಕಲಾವಿದೆ ಲಕ್ಷ್ಮಿ ಗೋಪಾಲಸ್ವಾಮಿ ಅವರು ಆಯ್ಕೆಯಾಗಿದ್ದಾರೆ.



ಲಕ್ಷ್ಮಿ

ಮೇ 1 ಮತ್ತು ಮೇ 2ರಂದು ಸಂಸ್ಥೆಯು ರವೀಂದ್ರ ಕಲಾ ಕ್ಷೇತ್ರದಲ್ಲಿ ನೃತ್ಯ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದೆ. ಡಈ ಕಾರ್ಯಕ್ರಮದಲ್ಲಿ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಭರತನಾಟ್ಯ, ಕೂಚುಪುಡಿ, ಒಡಿಸ್ಸಿ, ಕಥಕ್ ಸೇರಿ ವಿವಿಧ ನೃತ್ಯ ಪ್ರಕಾರದಲ್ಲಿ ನೂರು ಕಲಾವಿದರನ್ನು ಒಳಗೊಂಡ 25 ತಂಡಗಳು ಪ್ರದರ್ಶನ ನೀಡಲಿವೆ.

ಮೇ 1ರಂದು ಮಧ್ಯಾಹ್ನ 3 ಗಂಟೆಯಿಂದ ನೃತ್ಯ ಕಾರ್ಯಕ್ರಮ ನಡೆಯಲಿವೆ. ನಿತ್ಯ, ರಶ್ಮಿ ವಿಜಯ್, ಶ್ರೀದೇವಿ, ರಶ್ಮಿ ಅಗರ್ವಾಲ್, ಸೌಮ್ಯ ರಂಗಸ್ವಾಮಿ, ಅನುಪಮಾ ಭೂಷಣ ಮೊದಲಾದ ಕಲಾವಿದರು ನೃತ್ಯ ಪ್ರದರ್ಶನ ನೀಡಲಿದ್ದಾರೆ. ಎ.ವಿ. ಸತ್ಯನಾರಾಯಣ ಅವರು ನಾಟ್ಯ ಸಂಯೋಜನೆ ಡಮಾಡಿರುವ ‘ಭಜ ಗೋವಿಂದಂ’ ನೃತ್ಯ ನಾಟಕ ಪ್ರದರ್ಶನವನ್ನೂ ಹಮ್ಮಿಕೊಳ್ಳಲಾಗಿದೆ.

ಮೇ 2ನೇ ತಾರೀಖಿನಂದು ಸಂಜೆ 6 ಗಂಟೆಯಿಂದ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನಿ ಭಾಷಣ ತಿರುಚಿದ ಆರೋಪ ಪ್ರಿಯಾಂಕ್ ವಿರುದ್ಧ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಬಳ್ಳಾರಿಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಡಿದ್ದ ಭಾಷಣದ ತುಣುಕನ್ನು ಸಚಿವ ಪ್ರಿಯಾಂಕ್ ಖರ್ಗೆ ತಿರುಚಿ, ಕನ್ನಡಿಗರಲ್ಲಿ ಪ್ರಧಾನಿ ವಿರುದ್ಧ ದ್ವೇಷ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಬಿಜೆಪಿಯು ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

‘ಎಕ್ಸ್’ನಲ್ಲಿ ಪ್ರಿಯಾಂಕ್ ಪೋಸ್ಟ್ ಮಾಡಿದ್ದ ವಿವರವನ್ನು ದೂರಿನಲ್ಲಿ ಲಗತ್ತಿಸಿದ್ದು, ‘ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿ ರೈತರಿಗೆ ತಲಾ ₹4,000 ನೆರವು ನೀಡುತ್ತಿತ್ತು. ಕಾಂಗ್ರೆಸ್ ಸರ್ಕಾರ ಅದನ್ನು ನಿಲ್ಲಿಸಿದೆ. ಇವರು ಮಾಡಿರುವ ಪಾಪಕ್ಕೆ ಜನರು ಸೂಕ್ತ ಉತ್ತರ ನೀಡಬೇಕು’ ಎಂದು ಪ್ರಧಾನಿ ಹೇಳಿದ್ದರು. ಅದನ್ನು, ‘ಕನ್ನಡಿಗರು ಪಾಪ ಮಾಡಿದ್ದಾರೆ’ ಎಂದು ಪ್ರಧಾನಿ ಹೇಳಿರುವುದಾಗಿ ತಿರುಚಿದ್ದಾರೆ’ ಎಂದು ದೂರಿದೆ.



ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಲಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ ರಾಮನವಮಿ ಸಂಗೀತೋತ್ಸವದಲ್ಲಿ ಸೋಮವಾರ ವಾರಿಜಾಶ್ರೀ ವೇಣುಗೋಪಾಲ್ ಮತ್ತು ತಂಡದವರು ವಿಶೇಷ ಕರ್ನಾಟಕ ಸಂಗೀತ ಕಛೇರಿ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.


ಕೆಎಸ್‌ಪಿಸಿಬಿ: ತಡೆ ಆದೇಶ ವಿಸ್ತರಣೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿ ಎಚ್‌.ಸಿ.ಬಾಲಚಂದ್ರ ಅವರ ನೇಮಕಾತಿಗೆ ನೀಡಲಾಗಿದ್ದ ಮಧ್ಯಂತರ ತಡೆ ಆದೇಶ ವಿಸ್ತರಣೆಗೆ ಹೈಕೋರ್ಟ್ ನಿರಾಕರಿಸಿದೆ.

ಬಾಲಚಂದ್ರ ಅವರ ನೇಮಕಾತಿ ಆಕ್ಷೇಪಿಸಿ ನಗರದಎಂ.ಎಸ್‌.ಹೇಮಂತ ಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು, ‘ಹಾಲಿ ಸದಸ್ಯ ಕಾರ್ಯದರ್ಶಿ ಸ್ನಾತಕೋತ್ತರ ಪದವಿಯಲ್ಲಿ ಬಂಗಾರದ ಪದಕ ವಿಜೇತರಿದ್ದು, ಪರಿಸರದ ವಿಷಯಗಳಲ್ಲಿ 16 ವರ್ಷಗಳ ಅನುಭವ ಹೊಂದಿದ್ದಾರೆ. ಅವರು 2024ರ ಜನವರಿ 11ರಂದು ಕಾರ್ಯಭಾರ ವಹಿಸಿಕೊಂಡಿದ್ದು, ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದ್ಯಕ್ಕೆ ಅವರನ್ನು ಅವರ ಸ್ಥಾನದಿಂದ ಕದಲಿಸದೇ ಇದ್ದರೆ ಉತ್ತಮ’ ಎಂದು ಕೋರಿದರು.



ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿ ಹುದ್ದೆಯನ್ನು ಐಎಎಸ್ ಮತ್ತು ಐಎಫ್‌ಎಸ್ ಹಂತದ ಅಧಿಕಾರಿಗಳಿಗೆ ಎರಡು ಮೂರು ವರ್ಷಗಳಿಗೆ ಮಾತ್ರವೇ ನೀಡಲಾಗುತ್ತಿರುವುದು ತರವಲ್ಲ. ಈ ಅಧಿಕಾರಿಗಳು ವರ್ಗಾವಣೆ ಹೊಂದುವ ಕಾರಣ ಇಂತಹ ಹುದ್ದೆಗಳಲ್ಲಿ ಕಾರ್ಯದ ಸ್ಥಿರತೆಯ ಅಭಾವ ಉದ್ಭವಿಸುತ್ತದೆ’ ಎಂದು ಅಸಮಾಧಾನ ವ್ಯಕ್ತಪಡಿಸಿತು. ಅಂತೆಯೇ, ಈ ಹಿಂದೆ ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ವಿಸ್ತರಿಸಲು ನಿರಾಕರಿಸಿತಲ್ಲದೇ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಹಿರಿಯ ವಕೀಲ ಕೆ.ಎನ್‌.ಫಣೀಂದ್ರ ಹಾಜರಿದ್ದರು. ಕೆ.ಯಶಸ್ವಿ ಪ್ರಸಾದ್ ಅವರು ವಕಾಲತ್ತು ವಹಿಸಿದ್ದಾರೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧ್ಯಕ್ಷರು,ಸದಸ್ಯರು ಮತ್ತು ಸದಸ್ಯ ಕಾರ್ಯದರ್ಶಿಗಳ ನಾಮ ನಿರ್ದೇಶನ ಮಾಡುವ ನಿಟ್ಟನಲ್ಲಿ ಜಲಕಾಯ್ದೆ (ಪರಿಸರ ಮಾಲಿನ್ಯ ತಡೆ ಹಾಗೂ ನಿಯಂತ್ರಣ)–1974ರ ಅಡಿಯಲ್ಲಿ ಷರತ್ತುಗಳು ಮತ್ತು ನಿಯಮಗಳನ್ನು 2023ರ ಆಗಸ್ಟ್ 31ರಂದು ರೂಪಿಸಲಾಗಿದೆ.

‘ಬಾಲಚಂದ್ರ ಅವರನ್ನು ಕಾನೂನಿಗೆ ವಿರುದ್ಧವಾಗಿ ನೇಮಕ ಮಾಡಲಾಗಿದ್ದು, ಅವರನ್ನು ಆ ಸ್ಥಾನದಿಂದ ಪದಚ್ಯುತಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ. ಪ್ರಕರಣದಲ್ಲಿ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅಧೀನ ಕಾರ್ಯದರ್ಶಿ ಸೇರಿದಂತೆ ಒಟ್ಟು ಏಳು ಜನರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಮರು ನೇಮಕ: ಕೆಎಟಿ ಆದೇಶ ಪುರಸ್ಕೃತ

ಬೆಂಗಳೂರು: 2012ರಲ್ಲಿ ನಡೆದಿದ್ದ ದ್ವಿತೀಯ ಪಿಯು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸೇವೆಯಿಂದ ವಜಾಗೊಂಡಿದ್ದ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಎಚ್‌.ಎಸ್‌.ಸುನಿಲ್‌ಕುಮಾರ್ ಮರು ನೇಮಕಕ್ಕೆ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ನೀಡಿದ್ದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಕೆಎಟಿ ಆದೇಶ ಪ್ರಶ್ನಿಸಿ ರಾಜ್ಯ ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಖಜಾನೆ ನಿರ್ದೇಶನಾಲಯದ ನಿರ್ದೇಶಕ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಪ್ರಕರಣವೇನು?: ಸುನಿಲ್ ಕುಮಾರ್ ಕಡೂರಿನ ಉಪ ಖಜಾನೆಯಲ್ಲಿ ಎಸ್‌ಡಿಎ ಆಗಿ ಕೆಲಸ ಮಾಡುತ್ತಿದ್ದರು. ಪ್ರಶ್ನೆಪತ್ರಿಕೆ ಸೋರಿಕೆ ಆರೋಪದಡಿ ಪೊಲೀಸರು ಅವರನ್ನು ಬಂಧಿಸಿದ್ದರು. ಈ ಸಂಬಂಧ ಶಿಸ್ತು ಪ್ರಾಧಿಕಾರ ಮತ್ತು ಸರ್ಕಾರ ನೇಮಿಸಿದ್ದ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಸಮಿತಿ ವರದಿ ಆಧರಿಸಿ ಅವರನ್ನು 2015ರ ಅಕ್ಟೋಬರ್ 15ರಂದು ಸೇವೆಯಿಂದ ವಜಾಗೊಳಿಸಲಾಗಿತ್ತು.

ಚಾಂದ್ ಪಾಷ ಅಮಾನತಿಗೆ ಹೈಕೋರ್ಟ್ ತಡೆ

ಬೆಂಗಳೂರು: ರಾಮನಗರ ವಕೀಲರ ಸಂಘದ ಸದಸ್ಯ ಹಾಗೂ ಐಜೂರು ನಿವಾಸಿಯಾದ ವಕೀಲ ಚಾಂದ್ ಪಾಷ ಅವರ ವಕೀಲಿಕೆ ಅಮಾನತುಗೊಳಿಸಿದ್ದ ರಾಜ್ಯ ವಕೀಲರ ಪರಿಷತ್ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಪರಿಷತ್ ಆದೇಶ ಪ್ರಶ್ನಿಸಿ ಚಾಂದ್ ಪಾಷ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿ ಪರಿಷತ್ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ಮಂಡಿಸಿದ, ‘ಪರಿಷತ್ ಆದೇಶ ಹೊರಡಿಸುವುದಕ್ಕೂ ಮೊದಲು ಯಾವುದೇ ನೋಟಿಸ್ ಜಾರಿ ಮಾಡಿಲ್ಲ. ಇದು ಸ್ವಾಭಾವಿಕ ನ್ಯಾಯತತ್ವಕ್ಕೆ ವಿರುದ್ಧವಾಗಿದೆ’ ಎಂಬ ವಾದವನ್ನು ಮಾನ್ಯ ಮಾಡಿದ ಪೀಠ, ಮುಂದಿನ ವಿಚಾರಣೆವರೆಗೆ ಪರಿಷತ್ ಆದೇಶಕ್ಕೆ ತಡೆ ವಿಧಿಸಿತು.

ಏಳು ರೈಲು ನಿಲ್ದಾಣಗಳಲ್ಲಿ ಕಡಿಮೆ ದರದಲ್ಲಿ ಊಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ರೈಲ್ವೆ ಮಂಡಳಿಯು ದೇಶದ ವಿವಿಧ 100 ರೈಲು ನಿಲ್ದಾಣಗಳಲ್ಲಿ ಸಾಮಾನ್ಯ ದರ್ಜೆಯ ಕೋಚ್‌ಗಳ ಬಳಿ ಕಡಿಮೆ ದರಲ್ಲಿ ಉತ್ತಮ ಆಹಾರ ನೀಡುವ ಕೌಂಟರ್‌ಗಳನ್ನು ತೆರೆದಿದೆ. ಅದರಲ್ಲಿ ರಾಜ್ಯದ ಏಳು ನಿಲ್ದಾಣಗಳು ಸೇರಿವೆ.

ದಕ್ಷಿಣ ರೈಲ್ವೆ ವ್ಯಾಪ್ತಿಯ ಮಂಗಳೂರು ಸೆಂಟ್ರಲ್ ಮತ್ತು ಮಂಗಳೂರು ಜಂಕ್ಷನ್ ರೈಲು ನಿಲ್ದಾಣಗಳು, ನೈರುತ್ಯ ರೈಲ್ವೆ ವ್ಯಾಪ್ತಿಯ ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ಮೈಸೂರು, ವಿಜಯಪುರ ಮತ್ತು ಬಳ್ಳಾರಿ ನಿಲ್ದಾಣಗಳಲ್ಲಿ ಕೌಂಟರ್ ತೆರೆಯಲಾಗಿದ್ದು, ಆಹಾರ ನೀಡಲಾಗುತ್ತಿದೆ.

ಇಂಡಿಯನ್ ರೈಲ್ವೇಸ್ ಕೇಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಷನ್ (ಐಆರ್‌ಸಿಟಿಸಿ) ಮತ್ತು ಭಾರತೀಯ ರೈಲ್ವೆ ಜಂಟಿಯಾಗಿ ಈ ಕ್ರಮ ಕೈಗೊಂಡಿದ್ದು, ಕಾಯ್ದಿರಿಸದ ಬೋಗಿಗಳಲ್ಲಿ ಪ್ರಯಾಣಿಸುವವರಿಗೆ ಬೇಸಿಗೆ ಕಾಲದಲ್ಲಿ ಕೈಗೆಟುಕುವ ಬೆಲೆಯಲ್ಲಿ ಆರೋಗ್ಯಕರ ಊಟ ಮತ್ತು ತಿಂಡಿಗಳನ್ನು ನೀಡುವ ಹೊಸ ಉಪಕ್ರಮ ಇದಾಗಿದೆ.

‘ಜನತಾ ಊಟ’ ಎಂದು ನಿಲ್ದಾಣಗಳಲ್ಲಿ ಅಡುಗೆ ಮಳಿಗೆಗಳಲ್ಲಿ ಕಡಿಮೆ ದರದಲ್ಲಿ ಆಹಾರ ಒದಗಿಸಲಾಗಿತ್ತು. ಈಗ ಪ್ಲಾಟ್‌ಫಾರಂನಲ್ಲಿಯೇ ಕೌಂಟರ್ ತೆರೆಯಲಾಗಿದೆ. 100 ರೈಲ್ವೆ ನಿಲ್ದಾಣಗಳ 150 ಪ್ಲಾಟ್‌ಫಾರ್ಮ್‌ಗಳಲ್ಲಿ ಈ ವ್ಯವಸ್ಥೆ ಮಾಡಲಾಗಿದೆ. ₹20ಕ್ಕೆ ಉಪಾಹಾರ, ₹ 50ಕ್ಕೆ ಲಘು ಊಟ, ₹3ಕ್ಕೆ 200 ಎಂ.ಎಲ್. ನೀರು ನೀಡಲಾಗುತ್ತದೆ ಎಂದು ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಮೌಢ್ಯದ ಆಚರಣೆ ಕ್ರಮದ ಎಚ್ಚರಿಕೆ

ಗೌರಿಬಿದನೂರು: ದೇವರಿಗೆ ಹಣ ಕಟ್ಟದ ಕಾರಣ ಶವ ಸಂಸ್ಕಾರಕ್ಕೆ ಅಡ್ಡಿ ಮಾಡಿದ್ದ ಪ್ರಸಂಗವು ವರದಿಯಾಗಿದ್ದ ನಗರದ ಗೊಟಕನಾಪುರ ಗ್ರಾಮಕ್ಕೆ ತಹಶೀಲ್ದಾರ್ ಮಹೇಶ್ ಪತ್ರಿ ಸೋಮವಾರ ಭೇಟಿ ನೀಡಿದರು. ಇಂತಹ ನಡವಳಿಕೆಗಳು ಮತ್ತೆ ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಸಮುದಾಯದ ಮುಖಂಡರಿಗೆ ಎಚ್ಚರಿಕೆ ನೀಡಿದರು.

‘ದೇವರಿಗೆ ದೇಣಿಗೆ ನೀಡದ ಕಾರಣ ಶವ ಸಂಸ್ಕಾರಕ್ಕೆ ಅಡ್ಡಿ’ ಶೀರ್ಷಿಕೆ ಅಡಿಯಲ್ಲಿ ಸೋಮವಾರ ‘ಪ್ರಜಾವಾಣಿ’ಯಲ್ಲಿ ಸುದ್ದಿ ಪ್ರಕಟವಾಗಿತ್ತು.

‘ಮೌಢ್ಯ ಮತ್ತು ಕಂದಾಚಾರಗಳಿಗೆ 21ನೇ ಶತಮಾನದಲ್ಲಿ ಅವಕಾಶವಿಲ್ಲ. ತಾಲ್ಲೂಕು ಆಡಳಿತ ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸಲು ಸದಾ ಸಿದ್ಧವಿದೆ. ಆದರೆ ಈ ರೀತಿಯ ಪ್ರಕರಣಗಳು ಮರುಕಳಿಸಿದರೆ, ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ತಹಶೀಲ್ದಾರರು ಎಚ್ಚರಿಕೆ ನೀಡಿದರು.

ಕ್ಷೇಮ ಕುಶಲ

ಸ್ವಚ್ಛತೆಯೇ ಶಕ್ತಿ

ಡಾ. ಕುಶ್ವಂತ್ ಕೋಳಿಬೈಲು

ಭಾರತದಲ್ಲಿ ಪ್ರತಿ ವರ್ಷ ಸುಮಾರು ಮೂರು ಲಕ್ಷದಷ್ಟು ಮಕ್ಕಳು ವಾಂತಿ ಮತ್ತು ಭೇದಿಯಿಂದ ಸಾವನ್ನಪ್ಪುತ್ತಾರೆ. ವಾಂತಿ ಮತ್ತು ಭೇದಿಗಳು ಕಲುಷಿತ ನೀರು ಮತ್ತು ಆಹಾರಸೇವನೆಯಿಂದ ಉಂಟಾಗುವ ಕಾರಣ ಈ ಕಾಯಿಲೆಗಳು ಹೆಚ್ಚಾಗಿದ್ದಲ್ಲಿ ಅದು ಆ ದೇಶದ ಆರೋಗ್ಯವ್ಯವಸ್ಥೆ ಮತ್ತು ಶುಚಿತ್ವದಲ್ಲಿನ ಲೋಪದೋಷಗಳಿಗೆ ಹಿಡಿದ ಕೈಗನ್ನಡಿಯಾಗುತ್ತದೆ.

ಪ್ರಪಂಚದ ಮುಂದುವರಿದ ದೇಶಗಳಲ್ಲಿ ಆರೋಗ್ಯವ್ಯವಸ್ಥೆ, ನೀರಿನ ಸರಬರಾಜು, ಶೌಚಾಲಯ ಮತ್ತು ಶುಚಿತ್ವದ ವ್ಯವಸ್ಥೆಯು ಉತ್ತಮವಾಗಿರುವ ಕಾರಣ ಅಲ್ಲಿನ ಜನರು, ಮುಖ್ಯವಾಗಿ ಮಕ್ಕಳು, ವಾಂತಿ ಭೇದಿಯ ಕಾಯಿಲೆಗೆ ಕಡಿಮೆ ತುತ್ತಾಗುತ್ತಾರೆ.



ಸುಮಾರು ಇನ್ನೂರು ವರ್ಷಗಳಲ್ಲಿ ಪ್ರಪಂಚದಾದ್ಯಂತ ಲಕ್ಷಾಂತರ ಜನರ ಸಾವಿಗೆ ಕಾರಣವಾದ ಕಾಲರಾ ಕಾಯಿಲೆಯು ಕಲುಷಿತವಾದ ನೀರಿನಿಂದ ಬರುತ್ತದೆಯೆಂಬುದನ್ನು ವಿಜ್ಞಾನಿ ಜಾನ್ ಸ್ನೋ ಕಂಡುಹಿಡಿದ ನಂತರ ಶುದ್ಧವಾದ ನೀರು ಮತ್ತು ಆರೋಗ್ಯಕ್ಕೆ ಇರುವ ನಂಟಿನ ಬಗ್ಗೆ ಜನರಲ್ಲಿ ಹೆಚ್ಚು ಜಾಗೃತಿ ಮೂಡಿತು.

ವಾಂತಿ ಮತ್ತು ಭೇದಿಯನ್ನು ಉಂಟುಮಾಡುವ ವೈರಸ್ ಮತ್ತು ಬ್ಯಾಕ್ಟೀರಿಯಾಗಳು ನೀರು ಮತ್ತು ಆಹಾರದ ಮೂಲಕ ಜನರ ದೇಹವನ್ನು ಪ್ರವೇಶ ಮಾಡುತ್ತವೆ. ಅವು ಮನುಷ್ಯನ ಹೊಟ್ಟೆ ಮತ್ತು ಕರುಳಿನಲ್ಲಿ ಸೋಂಕನ್ನು ಉಂಟುಮಾಡಿ ನೀರು ಮತ್ತು ಆಹಾರ ಜೀರ್ಣವಾಗದಂಥ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಕರುಳಿನೊಳಗೆ ನೀರು ಮತ್ತು ಲವಣಾಂಶಗಳು ರಕ್ತವನ್ನು ಸೇರದೆ ಉಳಿದುಕೊಂಡರೆ ಅವು ವಾಂತಿ ಮತ್ತು ಭೇದಿಯ ರೂಪದಲ್ಲಿ ದೇಹದಿಂದ ಹೊರಹಾಕಲ್ಪಡುತ್ತವೆ. ಕೆಲವು ಕೀಟಾಣುಗಳು ಕರುಳಿನಲ್ಲಿ ಗಾಯವನ್ನು ಮಾಡಿದರೆ ಭೇದಿಯಲ್ಲಿ ರಕ್ತವೂ ಹೊರಹೋಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳಿಂದ ರೋಗಿಯ ದೇಹದಲ್ಲಿ ನೀರ ಮತ್ತು ಲವಣದ ಅಂಶದ ಕೊರತೆಯುಂಟಾಗಿ ದೇಹ ನಿಸ್ತೇಜವಾಗುತ್ತದೆ. ದೇಹದಿಂದ ಹೊರಹೋಗುತ್ತಿರುವ ನೀರು ಮತ್ತು ಲವಣದ ಪ್ರಮಾಣವು ಅತಿಯಾದಲ್ಲಿ ಮತ್ತು ರೋಗಿಗೆ ಡ್ರಿಪ್ಸ್ ಅಥವಾ ಬಾಯಿಯ ಮೂಲಕ ನೀರು ಮತ್ತು ಲವಣಗಳನ್ನು ನೀಡಲು ವಿಳಂಬವಾದರೆ ವಾಂತಿ-ಭೇದಿಗಳಿಂದ ಪ್ರಾಣಹಾನಿಯೂ ಆಗಬಹುದು. ಚಿಕ್ಕ ಮಕ್ಕಳು ತಮಗೆ ಬಾಯಾರಿದಾಗ ಅವರೇ ನೀರನ್ನು ಕೇಳಿ ಕುಡಿಯುವ ಸಾಧ್ಯತೆಗಳು ಕಡಿಮೆ. ಅವರ ದೇಹದಲ್ಲಿ ನೀರಿನ ಕೊರತೆಯುಂಟಾದಾಗ ಕಂಡುಬರುವ ಸಮಸ್ಯೆಗಳನ್ನು ಎದುರಿಸುವ ಶಕ್ತಿಯೂ ಕಡಿಮೆಯಿರುತ್ತದೆ. ಈ ಕಾರಣಗಳಿಂದಾಗಿ ವಾಂತಿ-ಭೇದಿಯ ಕಾಯಿಲೆಯು ಮಕ್ಕಳಲ್ಲಿ ಹೆಚ್ಚಿನ ಸಾವು-ನೋವನ್ನು ಉಂಟುಮಾಡುತ್ತದೆ.

ಭಾರತದಲ್ಲಿ ಇನ್ನೂ ಬಯಲು ಶೌಚಾಲಯದ ಪದ್ಧತಿಯು ಗ್ರಾಮೀಣ ಭಾಗದಲ್ಲಿ ಚಾಲ್ತಿಯಲ್ಲಿದೆ. ಜನರು ಸಾಬೂನು ಬಳಸಿ ಕೈ ತೊಳೆಯುವುದನ್ನು ಗ್ರಾಮೀಣ ಭಾಗಗಳಲ್ಲಿ ಪಾಲಿಸುವುದಿಲ್ಲ. ಜನರು ಕುಡಿಯುವ ನೀರಿಗೆ ಬಳಸುವ ಕೆರೆ ಮತ್ತು ನದಿಗಳಲ್ಲಿಯೇ ಜಾನುವಾರುಗಳನ್ನು ತೊಳೆಯುತ್ತಾರೆ, ಬಟ್ಟೆಗಳನ್ನು ಒಗೆಯುತ್ತಾರೆ. ನಗರಗಳಂತೆ ಕ್ಲೋರಿನ್ ಬಳಸಿ ಕೀಟಾಣುಗಳನ್ನು ನಿಯಂತ್ರಿಸಿದ ನೀರು ಗ್ರಾಮೀಣ ಭಾಗಗಳಲ್ಲಿ ಸರಬರಾಜಾಗುವುದಿಲ್ಲ. ಈ ಕಾರಣಗಳಿಂದ ವಾಂತಿ-ಭೇದಿಯ ಸಮಸ್ಯೆ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮಹಾನಗರಗಳ 'ಸ್ಲಂ'ಗಳಲ್ಲಿಯೂ ಸೂಕ್ತ ನೀರಿನ ಸರಬರಾಜು ಮತ್ತು ಶುಚಿತ್ವವಿಲ್ಲದಿರುವ ಕಾರಣ ಅಲ್ಲಿಯೂ ವಾಂತಿಭೇದಿಯ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ರಸ್ತೆಬದಿಯಲ್ಲಿ ಮಾರುವ ತಿಂಡಿ ತಿನಿಸುಗಳ ಮೇಲೆ ಕುಳಿತಿರುವ ನೊಣ ಮತ್ತು ಕೀಟಗಳು ಕೂಡ ವಾಂತಿ ಭೇದಿಯನ್ನುಂಟುಮಾಡುವ ಕೀಟಾಣುಗಳನ್ನು ಪಸರಿಸುತ್ತವೆ. ಮಾಂಸಾಹಾರ ಮತ್ತು ಚೆನ್ನಾಗಿ ಬೇಯಿಸದ ಆಹಾರದಲ್ಲಿ ಕೀಟಾಣುಗಳು ಹೆಚ್ಚು ಬೇಗ ಬೆಳೆಯುವ ಕಾರಣ ಜನರು ರಸ್ತೆ ಬದಿಯಲ್ಲಿ ಆಹಾರ ಸೇವಿಸುವಾಗ ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಹಸಿ ತರಕಾರಿಗಳನ್ನು ಬೇಯಿಸದೆ ಸಲಾಡ್ ಮೂಲಕ ಸೇವಿಸುವವರು ತರಕಾರಿಯನ್ನು ಚೆನ್ನಾಗಿ ತೊಳೆಯುವುದರಿಂದ ಅದರ ಮೇಲಿರುವ ಕೀಟಾಣುಗಳ ಜೊತೆಗೆ ತರಕಾರಿಗೆ ಅಂಟಿರುವ ರಾಸಾಯನಿಕಗಳೂ ಹೊಟ್ಟೆಗೆ ಹೋಗುವುದನ್ನು ತಡೆಯಬಹುದು. ನವಜಾತ ಶಿಶುಗಳ ಹೊಟ್ಟೆ ಮತ್ತು ಕರುಳಿನಲ್ಲಿ ರೋಗ ನಿರೋಧಕ ಶಕ್ತಿಯು ಕಡಿಮೆಯಿರುವ ಕಾರಣ ಮೊದಲ ಆರು ತಿಂಗಳು ತಾಯಿಯ ಹಾಲನ್ನು ಮಾತ್ರ ಕುಡಿಸಬೇಕು. ವಾಂತಿ ಭೇದಿಯ ಸಮಸ್ಯೆಯಿಂದ ಆಗ ಶಿಶುವನ್ನು ಪಾರುಮಾಡಬಹುದು.

'ರೋಟಾ ವೈರಸ್' ಒಂದು ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳಲ್ಲಿ ಮಾರಣಾಂತಿಕ ವಾಂತಿ-ಭೇದಿಯನ್ನು ಉಂಟು ಮಾಡುತ್ತಿತ್ತು. ಆದರೆ ಮಗುವಿಗೆ ಮೊದಲ ಆರು ತಿಂಗಳಲ್ಲಿ 'ರೋಟಾ ವೈರಸ್ ಲಸಿಕೆ'ಯನ್ನು ನೀಡಲಾಗುತ್ತದೆ. ಇದರಿಂದ ಭಾರತದಂತಹ ದೇಶದಲ್ಲಿ ರೋಟಾ ವೈರಸ್ ಭೇದಿಯ ಪ್ರಮಾಣ ಬಹಳ ಇಳಿಮುಖವಾಯಿತು, ಲಕ್ಷಾಂತರ ಮಕ್ಕಳ ಜೀವ ಉಳಿಯಿತು. ವಾಂತಿ-ಭೇದಿಯಲ್ಲಿ ದೇಹದಿಂದ ನೀರಿನ ಜೊತೆಗೆ ಲವಣಗಳೂ ಹೊರ ಹೋಗುವುದರಿಂದ 'ಓಆರ್‌ಎಸ್' ಮಿಶ್ರಿತ ನೀರನ್ನು ಕುಡಿಸುವುದರಿಂದ ದೇಹದಲ್ಲಿನ ನೀರಿನ ಮತ್ತು ಲವಣದ ನಷ್ಟವನ್ನು ಸರಿದೂಗಿಸಬಹುದು. 'ಓಆರ್ ಎಸ್' ಪುಡಿಯನ್ನು ಒಂದು ಲೀಟರ್ ಕುದಿಸಿ ಆರಿಸಿದ ನೀರಿಗೆ ಬೆರೆಸಿ ನಿಯಮಿತವಾಗಿ ತೆಗೆದುಕೊಂಡಾಗ ದೇಹಕ್ಕೆ ಚೈತನ್ಯ ಬರುತ್ತದೆ. ತಮ್ಮ ಊರಿನಲ್ಲಿ ಅಥವಾ ಕೇರಿಯಲ್ಲಿ ವಾಂತಿಭೇದಿಯ ಕಾಯಿಲೆ ಕಾಣಿಸಿಕೊಂಡಾಗ ಜನರು ಕುದಿಸಿ ಆರಿಸಿದ ನೀರನ್ನು ಬಳಸಬೇಕು. ಆಗ ಈ ಕಾಯಿಲೆಯನ್ನು ಉಂಟುಮಾಡುವ ಕೀಟಾಣುಗಳು ಹರಡುವುದನ್ನು ತಡೆಯಬಹುದು. ಬಹುಪಾಲು ವಾಂತಿ-ಭೇದಿಯ ಕಾಯಿಲೆಗಳನ್ನು ವೈರಸ್‌ಗಳೇ ಉಂಟುಮಾಡುತ್ತವೆ. ಈ ಕಾರಣದಿಂದ, ವಾಂತಿ-ಭೇದಿಯಿರುವ ಎಲ್ಲ ರೋಗಿಗಳಿಗೆ ಆ್ಯಂಟಿಬಯಾಟಿಕ್ ಅಗತ್ಯವಿರುವುದಿಲ್ಲ.

ದೇಹದಿಂದ ಹೊರಹೋಗುವ ನೀರು ಮತ್ತು ಲವಣದ ಪ್ರಮಾಣವನ್ನು 'ಓಆರ್‌ಎಸ್' ಮೂಲಕ ನೀಡಿದಲ್ಲಿ ದೇಹವು ಶೀಘ್ರವಾಗಿ ಚೇತರಿಸಿಕೊಳ್ಳುತ್ತದೆ. ಅತ್ಯಂತ ಕಡಿಮೆ ದರದಲ್ಲಿ ಸಿಗುವ 'ಓಆರ್‌ಎಸ್' ಉಳಿಸಿರುವಷ್ಟು ಜೀವಗಳನ್ನು ಪ್ರಪಂಚದ ಯಾವ ದುಬಾರಿ ಔಷಧಿಗಳೂ ಉಳಿಸಿಲ್ಲ.

ಕುದಿಸಿದ ನೀರು ಮತ್ತು ಚೆನ್ನಾಗಿ ಬೇಯಿಸಿದ ಆಹಾರವನ್ನು ಸೇವಿಸುವುದರ ಜೊತೆಗೆ ಶುಚಿತ್ವದತ್ತ ಗಮನ ನೀಡಿದರೆ ವಾಂತಿ ಮತ್ತು ಭೇದಿಯ ರೋಗಗಳು ಹರಡುವುದನ್ನು ಕಡಿಮೆ ಮಾಡಬಹುದು. ಶುಚಿತ್ವವಿರುವ ಕಡೆ ಆರೋಗ್ಯ ಸಮಸ್ಯೆಗಳು ತನ್ನಿಂದ ತಾನೆ ಕಡಿಮೆಯಾಗುತ್ತವೆ. ❖

ಮಹಿಳೆಯರ ಆರೋಗ್ಯಕ್ಕೆ ಸಿಗಲಿ ಗಮನ



ಡಾ. ವೀಣಾ ಎನ್. ಸುಳ್ಯ

ಪ್ರಕೃತಿಯಲ್ಲಿ ಹೆಣ್ಣು ಮತ್ತು ಗಂಡಿನ ಜವಾಬ್ದಾರಿ ಸಮಪ್ರಮಾಣದಲ್ಲಿ ಇದೆ. ಆದರೆ ಹೆಣ್ಣಿನ ದೇಹ ಮತ್ತು ಮನಸ್ಸು ನಿರ್ವಹಿಸಬೇಕಾದ ಕೆಲಸಗಳು ಹೆಚ್ಚಿನ ಮಟ್ಟದವು. ಗರ್ಭಧಾರಣೆಯಿಂದ ಹಿಡಿದು ಭ್ರೂಣವನ್ನು ಬೆಳೆಸಿ ಈ ಲೋಕಕ್ಕೆ ತರುವಲ್ಲಿ ಅನೇಕ ಹಂತಗಳನ್ನು ಅವಳು ನಿರ್ವಹಿಸಬೇಕಾಗುತ್ತದೆ. ಮಗುವಿಗೆ ಹಾಲುಣಿಸುವ ಕೆಲಸವು ಸುಮಾರು ಎರಡರಿಂದ ಮೂರು ವರ್ಷಗಳ ಕಾಲ ಹಿಡಿಯುತ್ತದೆ. ಅಲ್ಲದೆ ತಿಂಗಳು ಮುಟ್ಟಿನ ಜವಾಬ್ದಾರಿಯನ್ನೂ ಅವಳು ವಹಿಸಬೇಕಾಗುತ್ತದೆ.

ಸುಮಾರು ಹತ್ತು ವರ್ಷಗಳವರೆಗೂ ಗಂಡುಮಗು-ಹೆಣ್ಣುಮಗುವಿನ ಮಧ್ಯೆ ಅಂತಹ ವ್ಯತ್ಯಾಸಗಳು ಕಾಣಿಸದಿದ್ದರೂ, ದೈಹಿಕವಾಗಿ ರಚನೆಯಲ್ಲಿ ವ್ಯತ್ಯಾಸವಿರುವುದರಿಂದ ಹೆಣ್ಣುಮಕ್ಕಳ ಮೂತ್ರನಾಳದಲ್ಲಿನ ನಂಜು ಮತ್ತು ಯೋನಿಯಲ್ಲಿಯೂ ನಂಜು ಉಂಟಾಗಬಹುದು. ಮೂತ್ರನಾಳ ಮತ್ತು ಯೋನಿ ಮಲದ್ವಾರದ ಸಮೀಪವಿರುವುದರಿಂದ ಈ ಸಮಸ್ಯೆ ಹೆಣ್ಣುಮಕ್ಕಳಲ್ಲಿ ಕಾಣಿಸಿಕೊಳ್ಳಬಹುದು.

ಹತ್ತು ವರ್ಷದ ನಂತರ ಹೆಣ್ಣಿನ ದೇಹದಲ್ಲಿ ಆಗುವ ವ್ಯತ್ಯಾಸಗಳಲ್ಲಿ ಮುಖ್ಯವಾದದ್ದು ಸ್ತನಗಳ ಬೆಳವಣಿಗೆ ಮತ್ತು ಋತುಚಕ್ರದ ಪ್ರಾರಂಭ. ಹೆಣ್ಣುಮಗುವಿಗೆ ಎದೆಯಲ್ಲಿ ನೋವು ಮತ್ತು ಊತ ಕಾಣಿಸಿಕೊಂಡಾಗ ಭಯ, ಆತಂಕ, ಮುಜುಗರ ಉಂಟಾಗುವ ಸಾಧ್ಯತೆಗಳು ಇವೆ. ಸೂಕ್ತ ಸಮಾಲೋಚನೆಯಿಂದ ಮಕ್ಕಳನ್ನು ಈ ಆತಂಕದಿಂದ ಹೊರಗೆ ತರುವುದು ಅವಶ್ಯಕ. ಎದೆಯಲ್ಲಿ ಕಾಣಿಸಿಕೊಳ್ಳುವ ನೋವು ನಿಧಾನವಾಗಿ ಕಡಿಮೆಯಾಗುತ್ತಾ ಹೋಗುತ್ತದೆ.

ಋತುಚಕ್ರಕ್ಕೆ ಸಂಬಂಧಿಸಿದಂತೆ ರಕ್ತಸ್ರಾವದಲ್ಲಿ ಹೆಚ್ಚಳ, ಅನಿಯಮಿತ ರಕ್ತಸ್ರಾವ ಕಂಡುಬರಬಹುದು. ಸುಮಾರು ಹದಿನೆಂಟು ವರ್ಷಗಳವರೆಗೆ ಋತುಚಕ್ರ ನಿಯಮಿತವಾಗಿ ಬಾರದೆ ಇರುವುದು ಹೆತ್ತವರಲ್ಲಿ ಮತ್ತು ಮಕ್ಕಳಲ್ಲಿ ಆತಂಕಕ್ಕೆ ಕಾರಣವಾಗಬಹುದು.

ಮುಟ್ಟಿನ ಸಮಯದಲ್ಲಿ ಕೆಳಹೊಟ್ಟೆ, ಸೊಂಟನೋವು ಕೈಕಾಲುಗಳ ಸೆಳೆತ, ವಾಂತಿ ಬಂದಂತೆ ಆಗುವುದು, ಆಹಾರ ರುಚಿಸದೇ ಇರುವುದು – ಇಂಥವು ಕೆಲವು ತಿಂಗಳುಗಳ ಕಾಲ ಕಾಡಬಹುದು.

ಬೆಳವಣಿಗೆಯ ಸಮಯದಲ್ಲಿ ಕಬ್ಬಿಣ ಅಂಶದ ಕೊರತೆಯಿಂದ ಹೆಣ್ಣುಮಕ್ಕಳು ತೊಂದರೆಗೆ ಈಡಾಗುವುದನ್ನು ಕಾಣುತ್ತೇವೆ. ಸರಿಯಾದ ಪೋಷಕ ಅಂಶಗಳನ್ನು ಒಳಗೊಂಡ ಆಹಾರವನ್ನು ಕೊಡದೆ ಹೋದರೆ ಮುಟ್ಟಿನ ಸಮಯದಲ್ಲಿ ಕಳೆದುಕೊಳ್ಳುವ ರಕ್ತದಿಂದ ಉಂಟಾಗುವ ಕಬ್ಬಿಣದ ಅಂಶದ ಕೊರತೆಯನ್ನು ನೀಗಿಸಲು ಸಾಧ್ಯವಾಗುವುದಿಲ್ಲ. ಕಬ್ಬಿಣದ ಅಂಶದ ಕೊರತೆಯ ಜೊತೆಗೇ ಹೆಣ್ಣುಮಗು ಬೆಳೆಯುತ್ತಾ ಹೋಗುತ್ತಾಳೆ. ಮುಂದೆ ಮದುವೆಯಾಗಿ ಗರ್ಭಿಣಿಯಾಗುವ ಸಮಯದಲ್ಲೂ ರಕ್ತಹೀನತೆಯಿಂದ ಬಳಲುವ ತಾಯಿಯ ಹೊಟ್ಟೆಯಲ್ಲಿ ಹುಟ್ಟುವ ಮಗು ಕೂಡ ರಕ್ತಹೀನತೆಯಿಂದ ಬಳಲುತ್ತದೆ. ಹೀಗೆ ರಕ್ತಹೀನತೆಯ ಚಕ್ರ ಪುನರಾವರ್ತನೆಯಾಗುತ್ತದೆ.

ಋತುಚಕ್ರದಲ್ಲಿ ವ್ಯತ್ಯಾಸವಾದಾಗ, ರಕ್ತಸ್ರಾವ ಹೆಚ್ಚಾದಾಗ ಇದು ಸಹಜ ಎಂದು ಅನೇಕ ತಿಂಗಳುಗಳ ಕಾಲ ವೈದ್ಯಕೀಯ ನೆರವನ್ನು ಪಡೆಯದೆ ಸುಮ್ಮನಿರುವುದನ್ನು ನೋಡುತ್ತೇವೆ. ಮನೆಯಲ್ಲಿರುವ ಹಿರಿಯರಿಗೂ ಇದನ್ನು ತಿಳಿಸದೆ ರಕ್ತಹೀನತೆಗೆ ಬಲಿಯಾಗುತ್ತಾರೆ. ಗರ್ಭಕೋಶದಲ್ಲಿ ಬೆಳೆಯುವ ಗಡ್ಡೆಯೂ ಹೆಚ್ಚಿನ ರಕ್ತಸ್ರಾವಕ್ಕೆ ಕಾರಣವಾಗಿರಬಹುದು.

ಯೋನಿಯ ಸಮಸ್ಯೆ ಮತ್ತು ಗರ್ಭಕೋಶದ ಕೊರಳಿನ ಸಮಸ್ಯೆಯಿಂದ ಉಂಟಾಗುವ ಬಿಳಿಸ್ರಾವದಿಂದ ಬಳಲುವ ಅನೇಕ ಮಹಿಳೆಯರು ವೈದ್ಯರನ್ನು ಕಾಣಲು ಹಿಂದೇಟು ಹಾಕುತ್ತಾರೆ. ಅದು ಗರ್ಭಕೋಶದ ಸುತ್ತುಮುತ್ತಲಿನ ನಂಜಿನ ಸೂಚನೆಯಾಗಿರಬಹುದು ಅಥವಾ ಗರ್ಭಕೋಶದ ಕೊರಳಿನ ಕ್ಯಾನ್ಸರ್‌ನ ಸೂಚನೆಯೂ ಆಗಿರಬಹುದು.

ಋತುಬಂಧದ ಸಮಯದಲ್ಲೂ ಏರುಪೇರಾಗುವ ಋತುಚಕ್ರವನ್ನು ಸಹಜವೆಂದೇ ಭಾವಿಸಿ, ರಕ್ತಹೀನತೆಯಿಂದ ಬಳಲುವ ಸಾಧ್ಯತೆಯೂ ಇದೆ. ಹಾರ್ಮೋನ್‌ಗಳ ವ್ಯತ್ಯಾಸದಿಂದ ರಕ್ತಸ್ರಾವ ಹೆಚ್ಚಾಗಿರಬಹುದು ಅಥವಾ ಗರ್ಭಕೋಶದ ಒಳಪದರದ ಕ್ಯಾನ್ಸರ್ ಸಮಸ್ಯೆಯ ಪ್ರಾರಂಭದ ಹಂತವೂ ಇದಾಗಿರಬಹುದು.

ಮುಟ್ಟು ನಿಂತು ಆರು ತಿಂಗಳ ಬಳಿಕ ಸ್ವಲ್ಪ ರಕ್ತಸ್ರಾವ ಆದರೂ ತೀವ್ರ ತಪಾಸಣೆ ಅಗತ್ಯ. ಏಕೆಂದರೆ ಅದು ಕ್ಯಾನ್ಸರ್‌ನ ಸೂಚನೆ ಆಗಿರುವ ಸಾಧ್ಯತೆ ಹೆಚ್ಚು.


ಮೂತ್ರ ಮಾಡಲು ತೊಂದರೆ ಎಂದು ವೈದ್ಯರಲ್ಲಿಗೆ ಬರುವ ಬರುವ 60-70 ವರ್ಷಗಳ ಹಿರಿಯ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಾಣುವ ತೊಂದರೆ ಎಂದರೆ ಗರ್ಭಕೋಶ ಮತ್ತು ಮೂತ್ರಕೋಶದ ಜಾರುವಿಕೆ. ಈ ಸಮಸ್ಯೆ ಪ್ರಾರಂಭವಾಗಿ ಅನೇಕ ವರ್ಷಗಳೇ ಕಳೆದಿದ್ದರೂ ನಾಚಿಕೆ ಮುಜುಗರಗಳಿಂದ ಇದನ್ನು ಯಾರಿಗೂ ತಿಳಿಸದೆ ಈ ಹಿರಿಯ ಜೀವಗಳು ಬಳಲುತ್ತಿರುತ್ತವೆ.

ಇಂಥ ಸಮಸ್ಯೆಗಳಿಗೆ ಪರಿಹಾರ ಎಂದರೆ ಹೆಣ್ಣುಮಕ್ಕಳ ಸಮಸ್ಯೆಗಳನ್ನು ಮನೆಯ ಹಿರಿಯರು ಎಲ್ಲರೂ ಅರಿತಿರುವುದು. ಸಕಾಲದಲ್ಲಿ ವೈದ್ಯರನ್ನ ಭೇಟಿಯಾಗಿ ರಕ್ತಹೀನತೆ, ಕ್ಯಾನ್ಸರ್ , ಗರ್ಭಕೋಶದ ಜಾರುವಿಕೆ, ಗಡ್ಡೆ-ಅಂಡಾಶಯದ ನೀರುಗುಳ್ಳೆಗಳನ್ನು ಸರಿಯಾದ ಸಮಯದಲ್ಲಿ ಕಂಡುಹಿಡಿದು ಸೂಕ್ತ ಚಿಕಿತ್ಸೆಯನ್ನು ಕೊಡಿಸಬೇಕು. ಮಹಿಳೆಯರು ದೈಹಿಕವಾಗಿ, ಮಾನಸಿಕವಾಗಿ ಸುಖವಾಗಿ ಬಾಳುವಂತೆ ನೋಡಿಕೊಳ್ಳುವುದರಲ್ಲಿ ಮನೆಯಲ್ಲಿನ ಎಲ್ಲರ ಪಾತ್ರವಿದೆ. ❖

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET - CHEMISTRY

37) Out of the below two compounds the vapour pressure of (B) at a particular temperature is ……



(A) (B)

a) lower than that of (A)
b) higher than that of (A)
c) same as that of (A)
d) higher or lower than (A), depending on the size of the vessel

Ans:- b

38) Adenosine is an example of……….
a) Purine base b) Nucleoside
c) Nucleotide d) Pyrimidine base

Ans: b

Expl:- When adenine (purine base) combines with ribose sugar, adenosine is formed. It is a nucleoside.

39) Graphite is a soft solid lubricant extremely difficult to melt. The reason for this anomalous behavior is that graphite ……….
a) has molecules of variable molecular masses like polymers
b) has carbon atoms arranged in large plates of rings of strongly bound carbon atoms with weak interpolate bonds
c) is a non-crystalline substance
d) is an allotropic form of carbon

Ans:- b

40) In electrophilic aromatic substitution reaction, the nitro group is meta directing because it
a) increases electron density at meta position
b) increases electron density at ortho and para positions
c) decreases electron density at ortho and para positions
d) decreases electron density at meta position

Ans:- c

41) The correct arrangement for the ions in the increasing order of their radii is
a) Na^+, Cl^-, Ca^{2+} b) Ca^{2+}, K^+, S^{2-}
c) Na^+, AL^{3+}, Be^{2+} d) Cl^-, F^-, S^{2-}

Ans:- b

Species	At No.	No. of e^-
Ca^{2+}	20	18
K^+	19	18
S^{2-}	16	18

Expln:- The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

42) 0.06% (w/v) aqueous solution of urea is isotonic with
a) 0.6% glucose solution
b) 0.1 M glucose solution
c) 0.06% glucose solution
d) 0.01 M glucose solution

Ans: **(d)**

Expl: Molarity of urea solution $= \frac{0.06 \times 10}{60} = 0.01$ M.

43) Mercury is a liquid metal because………..
a) it has a completely filled s – orbital
b) it has a small atomic size
c) it has a completely filled d – orbital that prevents d-d overlapping of orbitals
d) it has a completely filled d – orbital that causes d-d overlapping

Ans:- c

44) In $H_2 - O_2$ fuel cell the reaction occurring at cathode is
a) $O_2(g) + 2H_2O\ (l) + 4e^- \rightarrow 4\overline{O}H\ (aq)$
b) $H^+(aq) + \overline{O}H\ (aq) \rightarrow H_2O\ (l)$
c) $2H_2\ (g) + O_2(g) \rightarrow 2\ H_2O\ (l)$
d) $H^+ + e^- \rightarrow \frac{1}{2}H_2$

Ans:- a

45) Which one of the following statements is true?
a) Drying of oil involves hydrolysis
b) Saponification of oil yields a diol
c) Refining of oil involves hydrogenation
d) Addition of antioxidant to oil minimizes rancidity

Ans:- d

46) The distinguishing test between methanoic acid and ethanoic acid is…………
a) Tollen's test b) Sodium bicarbonate test
c) Litmus test d) Esterification test

Ans:- a {Expln:- Methanoic acid is an example for bifunctional compound containing –CHO group,

O
||
H–C–O–H.

hence it reduces Tollen's reagent to shining silver mirror.}

47) Which one of the following is an example for homogeneous catalysis?
a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

48) The equilibrium constant of the reaction: $A_{(s)} + 2B^+_{(aq)} \rightleftharpoons A^{2+}_{(aq)} + 2B_{(s)}$. $E^0_{cell} = 0.0295$ V is $\left[\frac{2.303\,RT}{F} = 0.059\right]$
a) 10 b) 2×10^2
c) 3×10^2 d) 2×10^5

Ans:- a

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2

ELECTROSTATIC POTENTIAL AND CAPACITANCE

1. What is electrostatic potential.

Ans:- Electrostatic potential at a point in the electric field is defined as the work done in moving a unit positive test charge from infinity to that point against the electrostatic force of the electric field of the source charge irrespective of the path followed.

Note: Electrostatic potential:
a) determines the degree of electrification of a body.
b) It is equal to zero at infinity.
c) It is a scalar quantity.

2. When is the Electrostatic potential 1 volt.

Ans:- Electrostatic potential at a point in the electric field is one volt if one joule of work is done in moving one coulomb of charge from infinity to that point in the electric field.

3. What is the difference between the Electrostatic potential and Electric potential?

Ans:- The electrostatic potential is the work done in moving a unit positive charge from infinity to that point against the electrostatic force of the electric field and the electric potential is the flow of charges from one body to another body.

4. Define electrostatic potential difference between two points in an electric field. Is it a scalar or vector?

Ans:- It is the work done in moving a unit positive charge from one point to another point in the electric field. It is a scalar quantity.

5. What is electric potential energy?

Ans:- Work done to bring charges from infinity to their respective positions to form a system.

6. Deduce dimensional formula for potential difference.

$$\text{Ans}:-V = \frac{W}{q} = \frac{ML^2T^{-2}}{AT} \quad \left[\because I = \frac{q}{t}\right]$$
$$= [ML^2T^{-3}A^{-1}]$$

7. How many joules are there in 1 Me V?

Ans:- 1 MeV $= 10^6$ eV
$= 10^6 \times 1.6 \times 10^{-19}$ J
$= 1.6 \times 10^{-13}$ J

8. Write down the relation between potential and potential energy.

$$\text{Ans}:-\ V = \frac{U}{q}$$

9. Name the physical quantity whose SI unit is joule coulomb^{-1}. Is it a scalar or a vector?

Ans:- The physical quantity whose SI unit is joule coulomb^{-1} is electric potential or potential difference. It is a scalar quantity.

10. Show that volt and J C^{-1} are the units of same physical quantity.

Ans:-

$$\text{Electric Potential(V)} = \frac{\text{Work done (J)}}{\text{Charge (C)}} = JC^{-1}$$

Unit of electric potential is volt.

∴ Volt and J C^{-1} are the units of same physical quantity i.e., electric potential.

11. Show that V m^{-1} = N C^{-1}.

$$\text{Ans}:-\ Vm^{-1} = \frac{J}{C}m^{-1} = \frac{Nm}{C}m^{-1} = NC^{-1}$$

12. What is the amount of work done in moving a 200 μC charge between two points 5 cm apart on an equipotential surface?

Ans:- $W = q\,(V_1 - V_2)$.

Since $V_1 = V_2$ on equipotential surface, therefore, W = 0.

13. What is an equipotential surface?

Ans:- A surface whose every point has the same value of electric potential is the equipotential surface.

14. A hollow metal sphere of radius 10 cm is charged such that the potential on its surface is 5 V. What is the potential at the centre of sphere?

Ans:- 5 V

15. What is the nature of equipotential surfaces around a point charge?

Ans:- Concentric spheres with point charge as a centre.

16. What is the relation between electric field intensity and potential gradient?

$$\text{Ans}:-\ E = -\frac{dV}{dr}$$

17. Illustrate a condition in which electric field is zero but potential is not zero.

Ans:- Electric field inside a hollow charged sphere is zero but potential is not zero.

18. Illustrate a condition in which electric field is not zero but potential is zero.

Ans:- Electric field on the equatorial line of a dipole is not zero but potential is zero.

19. A solid copper sphere of radius r has charge q_1 and another hollow copper sphere of same radius r has a charge q_2. What will be the charge on each sphere when they are connected by a conductor?

Ans :– Charge on each sphere will be equal

$$= \frac{q_1 + q_2}{2}.$$

20. How does the value of potential due to dipole varies with distance from the centre of the dipole?

$$\text{Ans}:-\ V \propto \frac{1}{r^2}$$

21. What is the unit of potential gradient?

Ans :– Unit of potential gradient $\left(\frac{dV}{dr}\right)$ is Vm^{-1}.

22. Write dimensional formula of potential gradient. **(Contd………)**

ಹಾಸನದ ಲೈಂಗಿಕ ದೌರ್ಜನ್ಯ ಪ್ರಕರಣ: ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆ ಪ್ರತಿಭಟನೆ • ಪ್ರಜ್ವಲ್ ವಿರುದ್ಧ ಕಠಿಣ ಕ್ರಮಕ್ಕೆ ಮುಖಂಡರ ಆಗ್ರಹ

ತಂದೆ– ಮಗನ ವಿರುದ್ಧ ಭುಗಿಲೆದ್ದ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: ಎಚ್‌.ಡಿ. ರೇವಣ್ಣ ಹಾಗೂ ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಆಕ್ರೋಶ ಭುಗಿಲೆದ್ದಿದ್ದು, 'ಇಬ್ಬರನ್ನೂ ಬಂಧಿಸುವಂತೆ ಆಗ್ರಹಿಸಿ ಜನಪರ ಚಳವಳಿಗಳ ಒಕ್ಕೂಟದ ಸದಸ್ಯರು ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಮಹಾರಾಜ ಉದ್ಯಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ರ‍್ಯಾಲಿ ನಡೆಸಿದ ಸದಸ್ಯರು, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷ ಧರ್ಮೇಶ್ ಮಾತನಾಡಿ, 'ಅಶ್ಲೀಲ ವಿಡಿಯೊಗಳ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ಹಾಗೂ ಎಚ್‌.ಡಿ. ರೇವಣ್ಣ ಅವರನ್ನು ಕೂಡಲೇ ಬಂಧಿಸಬೇಕು. ಅಶ್ಲೀಲ ದೃಶ್ಯಗಳನ್ನು ಪೆನ್‌ಡ್ರೈವ್ ಮೂಲಕ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಪೆನ್‌ಡ್ರೈವ್‌ಗಳಲ್ಲಿ ಅಶ್ಲೀಲ ದೃಶ್ಯಗಳನ್ನು ಹರಿಬಿಡುತ್ತಿರುವುದರಿಂದ ಸಂತ್ರಸ್ತ ಮಹಿಳೆಯರ ಗೌಪ್ಯತೆಗೆ ಧಕ್ಕೆ ಉಂಟಾಗುತ್ತಿದ್ದು, ಸಾರ್ವಜನಿಕವಾಗಿ ಈ ರೀತಿ ಮಾಹಿತಿ ಬಹಿರಂಗವಾದರೆ ಸಂತ್ರಸ್ತ ಕುಟುಂಬದವರಲ್ಲಿ ಆಘಾತ ಉಂಟಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಎಚ್‌.ಡಿ. ರೇವಣ್ಣ ಅವರನ್ನು ಕೂಡಲೇ ಬಂಧಿಸಬೇಕು. ಅವರಿಗೆ ನೀಡಿರುವ ಸರ್ಕಾರದ ಭದ್ರತೆ ಹಿಂಪಡೆಯಬೇಕು' ಎಂದು ದಲಿತ ವಿಮೋಚನಾ ಸಮಿತಿಯ ಮಾನವ ಹಕ್ಕುಗಳ ವೇದಿಕೆಯ ರಾಜ್ಯ ಘಟಕದ ಸಹ ಸಂಚಾಲಕ ಮರಿ ಜೋಸೆಫ್ ಒತ್ತಾಯಿಸಿದರು.

ಯುವ ಕಾಂಗ್ರೆಸ್ ಪ್ರತಿಭಟನೆ(ಹುಬ್ಬಳ್ಳಿ ವರದಿ): 'ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು ಹುಬ್ಬಳ್ಳಿಯ ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರಜ್ವಲ್ ರೇವಣ್ಣ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಕಾರರು, ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮಾತನಾಡಿ, 'ಪ್ರಜ್ವಲ್ ರೇವಣ್ಣ ಕಾಮುಕ. ಆತನಿಗೆ ಕಠಿಣ ಶಿಕ್ಷೆ ಆಗಲೇಬೇಕು. ಆತ ರಾಜ್ಯದ ಮರ್ಯಾದೆಯನ್ನು ಹರಾಜು ಹಾಕಿದ್ದಾನೆ' ಎಂದು ಹರಿಹಾಯ್ದರು.

'ಬೇಟಿ ಬಚಾವೊ ಬೇಟಿ ಪಢಾವೊ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಾರೆ. ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದರೂ ಬಿಜೆಪಿಯ ಶೋಭಾ ಕರಂದ್ಲಾಜೆ, ಶ್ರುತಿ, ತಾರಾ ಅನೂರಾಧ ಸೇರಿದಂತೆ ಯಾರೂ ಧ್ವನಿ ಎತ್ತುತ್ತಿಲ್ಲ' ಎಂದು ಆರೋಪಿಸಿದರು.

'ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ ಎಚ್‌.ಡಿ.ರೇವಣ್ಣ, ಪ್ರಜ್ವಲ್ ರೇವಣ್ಣ ವಿರುದ್ಧ ಪ್ರಕರಣ ದಾಖಲಾಗಿದೆ. ಪ್ರಜ್ವಲ್ ತಪ್ಪು ಮಾಡಿದ್ದರಿಂದ ವಿದೇಶಕ್ಕೆ ಪರಾರಿಯಾಗಿದ್ದಾನೆ. ಅನ್ಯಾಯವಾಗಿರುವ ಮಹಿಳೆಯರಿಗೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ' ಎಂದು ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್, ಶಾಸಕ ಶ್ರೀನಿವಾಸ ಮಾನೆ ಪಾಲ್ಗೊಂಡಿದ್ದರು.



ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಪರಾರಿಯಾಗಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಬಿಜೆಪಿ ನಾಯಕರು ಸಹಾಯ ಮಾಡಿದ್ದಾರೆಂದು ಆರೋಪಿಸಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಬೆಂಗಳೂರಿನಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ದೂರುದಾರ ಮಹಿಳೆ ಸರಿ ಇಲ್ಲ: ಅತ್ತೆಯ ಆರೋಪ

ದೂರುದಾರ ಮಹಿಳೆಯ ಅತ್ತೆ ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ, '5 ವರ್ಷದಿಂದ ಸುಮ್ಮನೆ ಇದ್ದು ಈಗ ದೂರು ನೀಡಿದ್ದಾರೆ. ಭವಾನಿ ಅಮ್ಮ ನಮ್ಮ ಕುಟುಂಬಕ್ಕೆ ತುಂಬಾ ಸಹಾಯ ಮಾಡಿದ್ದಾರೆ. ಅವರು ನಮ್ಮ ಕುಟುಂಬದ ಜೊತೆ ಇದ್ದರು. ಹೆದರಿಸಿ ಇವರನ್ನು ಕರೆದುಕೊಂಡು ಹೋಗಿ ದೂರು ಕೊಡಿಸಿದ್ದಾರೆ' ಎಂದು ಆರೋಪಿಸಿದರು.

'ಚುನಾವಣೆ ಸಮಯದಲ್ಲಿ ಗೌಡರ ಮನೆಗೆ ಕಪ್ಪು ಚುಕ್ಕೆ ತರಲು ಈ ಕೆಲಸ ಮಾಡಿದ್ದಾರೆ. ಇದೆಲ್ಲ ಸುಳ್ಳು ದೂರು. ರೇವಣ್ಣ ಕುಟುಂಬ ನಮಗೆ ಸಂಬಂಧಿಕರು. ದೂರು ನೀಡಿರುವ ಮಹಿಳೆ ಸರಿಯಿಲ್ಲ. ತುಂಬಾ ಸಾಲ ಮಾಡಿಕೊಂಡಿದ್ದರು. ಜಮೀನು ಸಹ ಮಾರಾಟ ಮಾಡಿದ್ದಾರೆ. ಆ ಮಹಿಳೆ ಸುಳ್ಳು ಹೇಳುತ್ತಿದ್ದಾರೆ. ಮಂಜುನಾಥ ಸ್ವಾಮಿ ಮೇಲೆ ಪ್ರಮಾಣ ಮಾಡುತ್ತೇವೆ, ಗೌಡರ ಕುಟುಂಬ ತಪ್ಪು ಮಾಡಿಲ್ಲ' ಎಂದು ಸಮರ್ಥಿಸಿಕೊಂಡರು.

'19 ಶಾಸಕರು ಮುಖ್ಯವಾ? ಪ್ರಜ್ವಲ್, ರೇವಣ್ಣನಾ?'



ಸಮೃದ್ಧಿ ಮಂಜುನಾಥ್

ಕೋಲಾರ: 'ಜೆಡಿಎಸ್‌ನ 19 ಶಾಸಕರ ಭವಿಷ್ಯ ಮುಖ್ಯವೇ ಅಥವಾ ನಿಮ್ಮ ಕುಟುಂಬದ ರೇವಣ್ಣ ಹಾಗೂ ಪ್ರಜ್ವಲ್ ಭವಿಷ್ಯ ಮುಖ್ಯವೋ ತೀರ್ಮಾನಿಸಿ' ಎಂದು ಮುಳಬಾಗಿಲು ಜೆಡಿಎಸ್ ಶಾಸಕ ಸಮೃದ್ಧಿ ಮಂಜುನಾಥ್ ಸೋಮವಾರ ಪಕ್ಷದ ವರಿಷ್ಠರಾದ ಎಚ್‌.ಡಿ.ದೇವೇಗೌಡ ಹಾಗೂ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದ್ದಾರೆ.

ರಾಜ್ಯದ ಜನತೆಯ ಮುಂದೆ ತಲೆ ತಗ್ಗಿಸುವಂಥ ಕೆಲಸ ಮಾಡಿದವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿ ಪಕ್ಷದ ಘನತೆ ಉಳಿಸಬೇಕು ಎಂದು ಒತ್ತಾಯಿಸಿರುವ ಪೋಸ್ಟ್ ಅನ್ನು ಫೇಸ್ ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಪ್ರಜ್ವಲಿಸುತ್ತಿರುವ 'ಹಾಸನ ಲೀಲೆಗಳು' ವರದಿಗಳಿಂದ ಪಕ್ಷದ ಸಾಮಾನ್ಯ ಕಾರ್ಯಕರ್ತರು ಮುಜುಗರಕ್ಕೆ ಒಳಗಾಗಿದ್ದಾರೆ. ಪಕ್ಷದ ಹೆಸರು ಹೇಳಲೂ ಹೇಸಿಗೆ ಎನಿಸುವಂಥ ಸ್ಥಿತಿ ಬಂದಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

'ಮಾಧ್ಯಮದವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಾಗದ ದಯನೀಯ ಪರಿಸ್ಥಿತಿ ಮೊದಲ ಬಾರಿ ಶಾಸಕನಾಗಿರುವ ನನಗೆ ಬಂದಿದೆ. ಈ ಕಷ್ಟಕರ ಸನ್ನಿವೇಶ ಎದುರಿಸುವ ಸಾಮಾನ್ಯ ಕಾರ್ಯಕರ್ತರ ಪರಿಸ್ಥಿತಿ ಬಗ್ಗೆ ಸ್ವಲ್ಪ ಯೋಚಿಸಿ' ಎಂದು ಅವರು ಕೇಳಿದ್ದಾರೆ.

'ಆರೋಪಿಗಳ ಸ್ಥಾನದಲ್ಲಿರುವ ರೇವಣ್ಣ ಮತ್ತು ಪ್ರಜ್ವಲ್ ಅವರನ್ನು ಪಕ್ಷದಿಂದ ಉಚ್ಚಾಟಿಸಿ ಪಕ್ಷದ ಸಿದ್ಧಾಂತಗಳನ್ನು ಉಳಿಸಿ ಕಾರ್ಯಕರ್ತರು ಮತ್ತು ನಮ್ಮನ್ನು ಮುಜುಗರದಿಂದ ಪಾರು ಮಾಡಿ' ಎಂದು ಅವರು ಕೋರಿದ್ದಾರೆ.

'ನಿಮ್ಮ ತೀರ್ಮಾನದ ಮೇಲೆ ಪಕ್ಷದ ಮುಂದಿನ ಭವಿಷ್ಯ ನಿಂತಿದೆ ಎಂಬುದನ್ನು ಮತ್ತೊಮ್ಮೆ ತಿಳಿಸಲು ಬಯಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಅಮಾನತಿಗೆ ಶಾಸಕ ಕಂದಕೂರ ಆಗ್ರಹ

ಯಾದಗಿರಿ: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಪಕ್ಷದಿಂದ ಅಮಾನತುಗೊಳಿಸಬೇಕು ಎಂದು ಗುರುಮಠಕಲ್ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ ಆಗ್ರಹಿಸಿದ್ದಾರೆ.

ಈ ಕುರಿತು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡರಿಗೆ ಪತ್ರ ಬರೆದಿರುವ ಅವರು, 'ಕೆಲ ದಿನಗಳಿಂದ ರಾಜ್ಯದಾದ್ಯಂತ ಹರಿದಾಡುತ್ತಿರುವ ಅಶ್ಲೀಲ ವಿಡಿಯೊ ತುಣುಕುಗಳಿಂದ ಪಕ್ಷಕ್ಕೆ ತೀರಾ ಮುಜುಗರ ಉಂಟಾಗಿದೆ. ಈ ವಿಡಿಯೊ ದೃಶ್ಯಗಳಲ್ಲಿ ಪ್ರಜ್ವಲ್ ರೇವಣ್ಣ ಕಾಣಿಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಅವರು ತಪ್ಪಿತಸ್ಥರು ಎಂಬ ಭಾವನೆ ಉಂಟಾಗಿದೆ. ಹೀಗಾಗಿ ಅವರನ್ನು ಕೂಡಲೇ ಪಕ್ಷದಿಂದ ಅಮಾನತು ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಕಾನೂನಿನ ಅಡಿಯಲ್ಲಿ ಎಲ್ಲರೂ ಸಮಾನರು. ಆದರೆ, ಕಾಂಗ್ರೆಸ್‌ನವರು ತುರ್ತಿನಲ್ಲಿ ಎಸ್‌ಐಟಿ ರಚನೆ ಮಾಡಿದ್ದಾರೆ. ವರದಿ ಏನು ಬರುತ್ತದೆಯೋ, ನ್ಯಾಯಾಲಯ ಏನು ಹೇಳುತ್ತದೆಯೋ ಅದಕ್ಕೆ ತಲೆ ಬಾಗಬೇಕು

ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಬಿಜೆಪಿ ಮೈತ್ರಿಕೂಟದ ಪಾಲುದಾರ, ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ವಿಚಾರವಾಗಿ, ಬಿಜೆಪಿಯವರು ತಮ್ಮ ನಿಲುವು ಸ್ಪಷ್ಟಪಡಿಸಬೇಕು

ಲಕ್ಷ್ಮಿ ಹೆಬ್ಬಾಳಕರ, ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಸಂಸದ ಪ್ರಜ್ವಲ್ ರೇವಣ್ಣನ ಪ್ರಕರಣವನ್ನು 'ಸೆಕ್ಸ್ ಸ್ಕ್ಯಾಮ್' ಎಂದು ಕರೆಯಬೇಡಿ. ಇದು ಅತ್ಯಾಚಾರಕ್ಕೆ ಸಮನಾದ ಪ್ರಕರಣ. ಇಷ್ಟು ದೊಡ್ಡ ಲೈಂಗಿಕ ದೌರ್ಜನ್ಯ ಪ್ರಕರಣ ಎಲ್ಲಿಯೂ ನಡೆದಿಲ್ಲ. ಇದರ ಬಗ್ಗೆ ಯಾಕೆ ಮೋದಿಯವರಿಗೆ ಕಣ್ಣು ಕಾಣುತ್ತಿಲ್ಲ

ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ನಡೆಸಿರುವ ಲೈಂಗಿಕ ದೌರ್ಜನ್ಯ ಗೊತ್ತಿದ್ದರೂ ಅವರ ಕುಟುಂಬದವರು ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ್ದರು ಎಂಬ ಆರೋಪದ ಬಗ್ಗೆಯೂ ತನಿಖೆಯಾಗಬೇಕು

ಡಿ.ಕೆ. ಸುರೇಶ್, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಕಾಂಗ್ರೆಸ್ ಆಡಳಿತದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲ ಎಂದು ಬಿಜೆಪಿಯವರು ಹೇಳಿದ್ದರು. ಈಗ ಹಾಸನ ಜಿಲ್ಲೆಯ ಮಹಿಳೆಯರ ರಕ್ಷಣೆ ಯಾವ ರೀತಿ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು

ಲಕ್ಷ್ಮಣ ಸವದಿ, ಅಥಣಿ ಕ್ಷೇತ್ರದ ಶಾಸಕ

ಹಾಸನದಲ್ಲಿ ನಡೆದ ಲೈಂಗಿಕ ಹಗರಣದಿಂದ ಇಡೀ ಕರ್ನಾಟಕದ ಮಾನ–ಮರ್ಯಾದೆ ಹರಾಜಾಗಿದೆ. ಮಹಿಳೆಯರ ಘನತೆ ಬಗ್ಗೆ ಮಾತನಾಡುವ ಬಿಜೆಪಿಯವರು ಜೆಡಿಎಸ್‌ನೊಂದಿಗೆ ಮೈತ್ರಿ ಮುಂದುವರಿಸುತ್ತಾರಾ. ಪ್ರಕರಣದಲ್ಲಿ ಬಿಜೆಪಿಯವರು ತಮ್ಮ ನಿಲುವೇನು ಎಂಬುದನ್ನು ಸ್ಪಷ್ಟಪಡಿಸಬೇಕು

ತೇಜಸ್ವಿನಿ ಗೌಡ, ಕೆಪಿಸಿಸಿ ವಕ್ತಾರೆ

ಸಂಸದ ಪ್ರಜ್ವಲ್ ರೇವಣ್ಣ ಆರೋಪಿಯಿಂದ ಅಪರಾಧಿ ಅಂತಾದರೆ ಬಹಳ ಅಸಹ್ಯ ಎನಿಸಿಕೊಳ್ಳಲಿದೆ. ಅಂತಹ ಘಟನೆಗಳು ನಡೆದಿರುವುದು ಸತ್ಯವೇ ಆಗಿದ್ದರೆ ಅದನ್ನು ಯಾವುದೇ ಮಹಿಳೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಪ್ರಜ್ವಲ್ ಅವರನ್ನು ಜೆಡಿಎಸ್‌ನಿಂದ ಉಚ್ಚಾಟಿಸುವುದು ಅಥವಾ ಶಿಕ್ಷೆ ಕೊಡುವುದು ಆ ಪಕ್ಷಕ್ಕೆ ಬಿಟ್ಟ ವಿಚಾರ

ತಾರಾ ಅನೂರಾಧ, ಬಿಜೆಪಿ ನಾಯಕಿ

'ಕಾಂಗ್ರೆಸ್ ಮಹನೀಯರೇ ನೀವು ಕಳಂಕರಹಿತರಾ?'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಕಾಂಗ್ರೆಸ್ ಮಹನೀಯರೇ ನೀವು ಕಳಂಕವಿಲ್ಲದವರಾ? ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ದೇವೇಗೌಡ ಮತ್ತು ನನ್ನ ಹೆಸರು ಯಾಕೆ ತರುತ್ತೀರಿ. ತಪ್ಪು ಯಾರು ಮಾಡಿದ್ದಾರೋ ಅವರು ಶಿಕ್ಷೆ ಅನುಭವಿಸಬೇಕು ಎಂದು ನಾನೇ ಸ್ಪಷ್ಟಪಡಿಸಿದ್ದೇನಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹರಿಹಾಯ್ದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಮಾಜದಲ್ಲಿ ಇಂಥದ್ದು ಮತ್ತೆ ನಡೆಯಬಾರದು ಎಂಬುದು ನನ್ನ ಅಭಿಪ್ರಾಯ. ದೇವೇಗೌಡ ಅವರು ಮುಖ್ಯಮಂತ್ರಿ, ಪ್ರಧಾನಿ ಆಗಿದ್ದಾಗ, ನಾನು ಮುಖ್ಯಮಂತ್ರಿ ಆಗಿದ್ದಾಗಲೂ ಲಕ್ಷಾಂತರ ಮಹಿಳೆಯರು ಕಷ್ಟ–ಸುಖ ಹೇಳಿಕೊಂಡು ನಮ್ಮ ಬಳಿಗೆ ಬಂದಿದ್ದಾರೆ. ಅವರ ಜೊತೆ ಗೌರವಯುತವಾಗಿ ನಡೆದುಕೊಂಡಿದ್ದೇವೆ. ಅವರಿಗೆ ನೆರವು ನೀಡಿ ಸಂಕಷ್ಟದಿಂದ ಪಾರು ಮಾಡಿದ್ದೇವೆ' ಎಂದರು.

'ಯಾರು ತಪ್ಪು ಮಾಡಿದ್ದರೂ ಈ ನೆಲದ ಕಾನೂನಿಗೆ ತಲೆಬಾಗಲೇಬೇಕು. ಶಿಕ್ಷೆ ಅನುಭವಿಸಬೇಕು. ಹೀಗಾಗಿ ಮುಂದಿನ ನಡೆಯ ಬಗ್ಗೆ ನನಗೆ ಸಂಬಂಧವಿಲ್ಲ. ಎಸ್‌ಐಟಿ ತನಿಖೆ ವಿಚಾರದಲ್ಲಿ ಯಾರ ಮೇಲೂ ಪ್ರಭಾವ ಬೀರುವ ಪ್ರಶ್ನೆಯೇ ಇಲ್ಲ. ಇಲ್ಲಿ ಯಾರನ್ನೂ ವಹಿಸಿಕೊಳ್ಳುವುದಿಲ್ಲ. ಆದರೆ ಪಾರದರ್ಶಕ ತನಿಖೆ ನಡೆಯಲಿ' ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಲೋಕಸಭಾ ಚುನಾವಣೆ ಫಲಿತಾಂಶದ ಮೇಲೆ ಪೆನ್‌ಡ್ರೈವ್ ವಿಚಾರ ಪರಿಣಾಮ ಬೀರುವುದಿಲ್ಲ ಎಂದು ಪ್ರತಿಕ್ರಿಯಿಸಿದ ಅವರು, 'ಪೆನ್‌ಡ್ರೈವ್ ವಿಚಾರ ವೈಯಕ್ತಿಕವಾಗಿ ನಡೆದ ಸಂಗತಿ. ಮೊದಲೇ ನಮ್ಮ ಗಮನಕ್ಕೆ ಬಂದಿದ್ದರೆ ತಪ್ಪಿಸಬಹುದಿತ್ತು. ಮಕ್ಕಳು ಎಲ್ಲಿಗೆ ಹೋಗುತ್ತಾರೆ, ಏನು ಮಾಡುತ್ತಾರೆ ಎಂದು ಕಾಯಲು ಆಗುತ್ತದೆಯೇ. ಅದೇ ರೀತಿ ಪ್ರಜ್ವಲ್ ವಿದೇಶಕ್ಕೆ ಹೋಗುವಾಗಲೂ ನನ್ನ ಕೇಳಿ ಹೋಗುತ್ತಾನಾ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಪ್ರಜ್ವಲ್‌ನನ್ನು ವಿದೇಶದಿಂದ ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದರು.

'ಕುಮಾರಸ್ವಾಮಿ ತಮ್ಮ ಬಳಿ ಇರುವ ಪೆನ್‌ಡ್ರೈವ್ ಬಿಡುಗಡೆ ಮಾಡಲಿ ಎಂದು ಕಾಂಗ್ರೆಸ್‌ನ ಮಹಾನಾಯಕರೊಬ್ಬರು ಹೇಳಿದ್ದಾರೆ. ಶೀಘ್ರ ಅದನ್ನು ಬಿಡುಗಡೆ ಮಾಡುವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹಾಸನದಲ್ಲಿ ಜೆಡಿಎಸ್ ಅಭ್ಯರ್ಥಿ ಒಳ್ಳೆಯ ಲೀಡ್‌ನಲ್ಲಿ ಗೆಲ್ಲುತ್ತಾರೆ. ಅದರಲ್ಲೇನೂ ಸಂಶಯವಿಲ್ಲ. ಆದರೆ ಚುನಾವಣೆಗೆ ಮೂರು ದಿನ ಮುಂಚೆ ಪೆನ್‌ಡ್ರೈವ್ ಬಿಡಲು ಕಾರಣವೇನು? ಬಿಟ್ಟವರು ಯಾರು? ಹಳೆಯ ವಿಷಯಗಳನ್ನು ಈಗ ಏಕೆ ಎತ್ತಿದ್ದಾರೆ ಎಂಬ ಸತ್ಯಾಂಶವೂ ಎಸ್‌ಐಟಿ ತನಿಖೆಯಿಂದ ಹೊರಬರಲಿ

ಎಚ್‌.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ನಮ್ಮ, ರೇವಣ್ಣ ಕುಟುಂಬ ಬೇರೆ ಬೇರೆ'

'ನಮ್ಮ ಕುಟುಂಬವೇ ಬೇರೆ, ಎಚ್‌.ಡಿ.ರೇವಣ್ಣ ಅವರ ಕುಟುಂಬವೇ ಬೇರೆ. ನಮ್ಮ ಹಾಗೂ ಅವರ ವ್ಯವಹಾರ ಬೇರೆ ಬೇರೆ' ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

'ಹಾಸನದಲ್ಲಿ ರೇವಣ್ಣ, ಅವರ ಪತ್ನಿ ಹಾಗೂ ಇಬ್ಬರು ಮಕ್ಕಳು ನಮ್ಮಿಂದ ಪ್ರತ್ಯೇಕವಾಗಿ ವಾಸವಿದ್ದಾರೆ. ಹೀಗಾಗಿ ಇಲ್ಲಿ ಕುಟುಂಬದ ಹೆಸರು ತರಬೇಡಿ ಎಂದು ಕಾಂಗ್ರೆಸ್ ನಾಯಕರಿಗೆ ಹೇಳುತ್ತಿದ್ದೇನೆ. ಇದು ವ್ಯಕ್ತಿಯ ಪ್ರಶ್ನೆಯೇ ಹೊರತು ಕುಟುಂಬದ ಪ್ರಶ್ನೆ ಅಲ್ಲ. ವ್ಯಕ್ತಿಯ ಬಗ್ಗೆ ಚರ್ಚೆ ಮಾಡಿಕೊಳ್ಳಿ. ವ್ಯಕ್ತಿಗತವಾಗಿ ಒಬ್ಬೊಬ್ಬರದ್ದು ಒಂದೊಂದು ವರ್ತನೆ ಇರುತ್ತದೆ' ಎಂದು ಹೇಳಿದರು.

'ಪ್ರಜಾವಾಣಿ' ಲೇಖನ ಪ್ರಸ್ತಾಪಿಸಿದ ಎಚ್‌ಡಿಕೆ

ಪ್ರಜಾವಾಣಿಯಲ್ಲಿ ಸೋಮವಾರ 'ಆಳ–ಅಗಲ'ದಲ್ಲಿ ಹಾಸನದ ಪೆನ್‌ಡ್ರೈವ್ ವಿಚಾರದಲ್ಲಿ ಬಂದ ಲೇಖನವನ್ನು ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದ ಎಚ್‌.ಡಿ.ಕುಮಾರಸ್ವಾಮಿ, ಆ ಲೇಖನದಲ್ಲಿ ಕೆಲವು ತಜ್ಞರ ಸಂದರ್ಶನ ಮಾಡಿದ್ದಾರೆ. ಆ ತಜ್ಞರು ಪ್ರಸ್ತಾಪಿರುವ ವಿಷಯಗಳ ಬಗ್ಗೆಯೇ ನನ್ನದೂ ಕಳವಳ ಹಾಗೂ ಕಾಳಜಿ ಎಂದು ಹೇಳಿದರು.

'ಸಂತ್ರಸ್ತೆಯರು ಮುಂದೆ ಬಂದು ದೂರು ನೀಡಲಿ'

ಬೆಂಗಳೂರು: 'ಸಂಸದ ಪ್ರಜ್ವಲ್ ರೇವಣ್ಣನಿಂದ ಶೋಷಣೆಗೆ ಒಳಗಾದ ಹೆಣ್ಣುಮಕ್ಕಳು ಮುಂದೆ ಬಂದು ಆರೋಪಿ ತಪ್ಪಿಸಿಕೊಳ್ಳದಂತೆ ದೂರು ನೀಡಬೇಕು. ಈ ಹೆಣ್ಣು ಮಕ್ಕಳ ಗುರುತನ್ನು ಎಸ್‌ಐಟಿ ಗುಪ್ತವಾಗಿ ಇರಿಸಬೇಕು' ಎಂದು ಎಐಸಿಸಿ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ಅಲ್ಕಾ ಲಂಬಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪೊಲೀಸ್ ಠಾಣೆಗೆ ಬಂದು ದೂರು ನೀಡಲು ಹೆದರಿಕೆಯಾದರೆ ಆನ್‌ಲೈನ್ ಮೂಲಕ ದೂರು ದಾಖಲಿಸಿ' ಎಂದು ಸಂತ್ರಸ್ತೆಯರಿಗೆ ಅವರು ಸಲಹೆ ನೀಡಿದರು.

'ಮಹಿಳೆಯರ ಮೇಲೆ ದೌರ್ಜನ್ಯ ಎಸಗಿರುವ ಪ್ರಜ್ವಲ್ ರೇವಣ್ಣ, ಬಿಜೆಪಿಯ ಕುಲ್‌ದೀಪ್ ಸಿಂಗ್, ಉತ್ತರ ಪ್ರದೇಶದ ರಾಮ್ ದುಲ್ಹಾರೆ, ಬ್ರಿಜ್ ಭೂಷಣ್ ಸಿಂಗ್, ಹರಿಯಾಣದ ಸಚಿವ ಸಂದೀಪ್ ಸಿಂಗ್ ಮುಂತಾದವರೇ ನಿಜವಾದ ಮೋದಿ ಪರಿವಾರದವರು. ತಮ್ಮ ಪ್ರತಿ ಭಾಷಣದಲ್ಲಿ ಕುಟುಂಬ ರಾಜಕಾರಣ ಹಾಗೂ ಬೇಟಿ ಬಚಾವೋ, ಬೇಟಿ ಪಡಾವೋ ಎಂದು ಹೇಳುವ ಪ್ರಧಾನಿ ಮಾತಿಗೆ ಏನಾದರೂ ಅರ್ಥವಿದೆಯೇ' ಎಂದೂ ಪ್ರಶ್ನಿಸಿದರು.

'ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ಅನೇಕ ಜನ ಹಣಕಾಸಿನ ವಿಚಾರದಲ್ಲಿ ದೇಶಕ್ಕೆ ಮೋಸ ಮಾಡಿ ಹೋಗಿದ್ದಾರೆ. ಪ್ರಜ್ವಲ್ ರೇವಣ್ಣ ಅದೇ ಹಾದಿ ತುಳಿದಿದ್ದಾರೆ. ಇಷ್ಟೊಂದು ಘೋರ ಘಟನೆ ನಡೆದಿದ್ದರೂ ಬಿಜೆಪಿಯ ಒಬ್ಬನೇ ಒಬ್ಬ ನಾಯಕನೂ ಬಾಯಿ ಬಿಟ್ಟಿಲ್ಲ' ಎಂದು ಟೀಕಿಸಿದರು.

'ಅಧಿಕಾರದ ಮದದಿಂದ ಈ ಕೃತ್ಯಗಳು ನಡೆದಿವೆ. ಅಧಿಕಾರವನ್ನು ಬಳಸಿಕೊಂಡು ಬಡ, ಅಮಾಯಕ ಹೆಣ್ಣು ಮಕ್ಕಳ ಮಾನಹಾನಿಯಾಗಿದೆ. ಪ್ರಧಾನಿಯೇ ಜೊತೆಗಿರುವಾಗ ಆತ ಏಕೆ ಭಯಪಡಬೇಕು. ಅದಕ್ಕೆ ಸಾವಿರಾರು ವಿಡಿಯೊಗಳನ್ನು ಮಾಡಿದ್ದಾನೆ' ಎಂದು ಹೇಳಿದರು.

ತ್ವರಿತ ತನಿಖೆಗೆ ಎಸ್‌ಐಟಿಗೆ ಸೂಚನೆ: ಪರಮೇಶ್ವರ

ಬೆಂಗಳೂರು: 'ಪ್ರಜ್ವಲ್ ರೇವಣ್ಣ ಅವರ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದ ತನಿಖೆಯನ್ನು ತ್ವರಿತವಾಗಿ ನಡೆಸಿ ವರದಿ ಸಲ್ಲಿಸುವಂತೆ ಎಸ್‌ಐಟಿಗೆ ಸೂಚಿಸಲಾಗಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವದ ತಂಡ ಪ್ರಕರಣದ ತನಿಖೆಯನ್ನು ಕೈಗೊಂಡಿದೆ. ಪೆನ್‌ಡ್ರೈವ್‌ಗಳನ್ನು ವಶಪಡಿಸಿಕೊಂಡು ವೈಜ್ಞಾನಿಕ ವರದಿಗಾಗಿ ಎಫ್‌ಎಸ್‌ಎಲ್‌ಗೆ ರವಾನಿಸಲಿದ್ದಾರೆ. ಸಾಕ್ಷಿಗಳ ಹೇಳಿಕೆಯನ್ನೂ ಪಡೆಯಲಿದ್ದಾರೆ' ಎಂದರು. 'ಪ್ರಕರಣದ ವರದಿ ಸಲ್ಲಿಸಲು ಸಮಯ ನಿಗದಿಪಡಿಸಿಲ್ಲ. ವಿಳಂಬ ಆಗಬಾರದು ಎಂಬ ದೃಷ್ಟಿಯಿಂದ ತ್ವರಿತವಾಗಿ ತನಿಖೆ ನಡೆಸುವಂತೆ ಮೌಖಿಕವಾಗಿ ತಿಳಿಸಲಾಗಿದೆ. ಸಂತ್ರಸ್ತರಿಗೆ ಜೀವ ಭಯವಿದ್ದರೆ ಪೊಲೀಸ್ ಭದ್ರತೆ ನೀಡಲಾಗುವುದು' ಎಂದರು.

'ರಾಮಮಂದಿರಕ್ಕೆ ಹೋಗಿದ್ದರೆ ಗಂಗಾಜಲದಿಂದ ಶುದ್ಧಗೊಳಿಸುತ್ತಿದ್ದರು'

ಪ್ರಜಾವಾಣಿ ವಾರ್ತೆ

ಕಮಲಾಪುರ (ಕಲಬುರಗಿ ಜಿಲ್ಲೆ): 'ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ರಾಮಮಂದಿರ ಉದ್ಘಾಟನೆಗೆ ಏಕೆ ಬರಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಶ್ನಿಸುತ್ತಿದ್ದಾರೆ. ರಾಮಮಂದಿರ ಉದ್ಘಾಟನೆಗೆ ಹೋಗಿದ್ದರೆ ನಾನು ಹೊರಬರುತ್ತಿದ್ದಂತೆ ಪೂರ್ತಿ ಮಂದಿರವನ್ನು ಗಂಗಾ ಜಲದಿಂದ ಶುದ್ಧಿಗೊಳಿಸುತ್ತಿದ್ದರು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಪಕ್ಷದ ಅಭ್ಯರ್ಥಿ ರಾಧಾಕೃಷ್ಣ ದೊಡ್ಡಮನಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ರಾಮಮಂದಿರ ವಿಷಯವನ್ನು ಚುನಾವಣೆಗೆ ಬಳಸುತ್ತಿರುವ ನರೇಂದ್ರ ಮೋದಿ ಕಾಂಗ್ರೆಸ್‌ಗೆ ಹಿಂದೂ ವಿರೋಧಿ ಪಟ್ಟ ಕಟ್ಟುತ್ತಿದ್ದಾರೆ' ಎಂದರು.

'ಒಂದು ವೇಳೆ ಅವರು ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವವರಾಗಿದ್ದರೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ರಾಮ ಮಂದಿರ ಉದ್ಘಾಟನೆಗೇಕೆ ಕರೆಯಲಿಲ್ಲ? ಸಾಂವಿಧಾನಿಕವಾಗಿ ನಿಮಗಿಂತ ದೊಡ್ಡ ಸ್ಥಾನದಲ್ಲಿದ್ದ ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗದವರೆಂಬ ತಾರತಮ್ಯದಿಂದ ಕರೆಯಲಿಲ್ಲವೇ ಎಂಬ ಪ್ರಶ್ನೆಗೆ ಮೊದಲು ಉತ್ತರಿಸಿ. ನಂತರ ನಾನು ಯಾಕೆ ಬರಲಿಲ್ಲ ಎಂಬುದನ್ನು ಹೇಳುತ್ತೇನೆ' ಎಂದರು.

'ಪ್ರಧಾನಿ ಮೌನ ವಹಿಸಿರುವುದೇಕೆ'



ಪ್ರಿಯಾಂಕಾ ಗಾಂಧಿ

ಸೇಡಂ (ಕಲಬುರಗಿ ಜಿಲ್ಲೆ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹಿಳೆಯರ ಮಂಗಳಸೂತ್ರ ಕಸಿದುಕೊಳ್ಳಲಿದೆ ಎಂದು ಆರೋಪಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು, 'ಕರ್ನಾಟಕದಲ್ಲಿ ವೇದಿಕೆ ಹಂಚಿಕೊಂಡು ಮತಯಾಚಿಸಿದ್ದ ಮೈತ್ರಿ ಪಕ್ಷದ ಅಭ್ಯರ್ಥಿಯೇ ಸಾವಿರಾರು ಮಹಿಳೆಯರೊಂದಿಗೆ ದೌರ್ಜನ್ಯ ಎಸಗಿದ್ದಾನೆ. ಇದರ ಬಗ್ಗೆ ಪ್ರಧಾನಿ ಹಾಗೂ ಕೇಂದ್ರ ಗೃಹ ಸಚಿವರು ಏಕೆ ಮಾತನಾಡುತ್ತಿಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

ಇಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಹಾಸನದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ಪ್ರಕರಣವನ್ನು ಉಲ್ಲೇಖಿಸಿ ಪ್ರಧಾನಿ ಮೇಲೆ ಹರಿಹಾಯ್ದರು. 'ವಿದೇಶಕ್ಕೆ ಪರಾರಿಯಾದ ಆರೋಪಿಯನ್ನು ಎಲ್ಲಿಯವರೆಗೂ ದೇಶಕ್ಕೆ ವಾಪಸ್ ಕರೆತರುವುದಿಲ್ಲವೋ ಅಲ್ಲಿಯವರೆಗೂ ಮಂಗಳಸೂತ್ರದ ಬಗ್ಗೆ ಮಾತನಾಡುವ ಧೈರ್ಯವನ್ನು ಮೋದೀಜಿ ತೋರದ ಹಾಗೆ ಮಹಿಳೆಯರು ಪ್ರಶ್ನಿಸಬೇಕು' ಎಂದು ಕರೆ ನೀಡಿದರು.

'ನಮೂದಾಗದ ಅತ್ಯಾಚಾರ ಕಲಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಸಂಸದ ಹಾಗೂ ಹೊಳೆನರಸೀಪುರ ಶಾಸಕರ ವಿರುದ್ಧ ಸಂತ್ರಸ್ತ ಮಹಿಳೆ ದೂರು ನೀಡಿದರೂ, ಪೊಲೀಸರು ಅತ್ಯಾಚಾರ ಕಲಂನಡಿ ಪ್ರಕರಣ ದಾಖಲಿಸಿಕೊಂಡಿಲ್ಲ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಮುಖಂಡರು ಪೊಲೀಸ್ ಮಹಾ ನಿರ್ದೇಶಕರಿಗೆ(ಡಿಜಿಐಜಿ) ಸೋಮವಾರ ದೂರು ಸಲ್ಲಿಸಿದ್ದಾರೆ.

47 ವರ್ಷದ ಸಂತ್ರಸ್ತ ಮಹಿಳೆ ಹೊಳೆನರಸೀಪುರ ಠಾಣೆಗೆ ದೂರು ನೀಡಿದ್ದಾರೆ. ದೂರು ಪಡೆದ ಪೊಲೀಸರು ಅತ್ಯಾಚಾರದ ಕಾಲಂನಡಿ ಪ್ರಕರಣ ದಾಖಲಿಸದೇ ಬೇರೆ ಕಲಂಗಳನ್ನು ನಮೂದಿಸಿದ್ದಾರೆ. ಪ್ರಭಾವಿ ರಾಜಕಾರಣಿಗಳ ಕುಟುಂಬದವರನ್ನು ರಕ್ಷಿಸಲು ಹೀಗೆ ಮಾಡಿರುವ ಶಂಕೆ ಇದೆ. ಆರೋಪಿ ಚಿತ್ರೀಕರಿಸಿರುವ ನೂರಾರು ವಿಡಿಯೊಗಳಲ್ಲಿ ಅತ್ಯಾಚಾರ ನಡೆದಿರುವುದೂ ಸ್ಪಷ್ಟವಾಗಿದೆ. ಇವೆಲ್ಲವನ್ನೂ ಸಂತ್ರಸ್ತ ಮಹಿಳೆ ನೀಡಿರುವ ದೂರಿನ ಜತೆಗೇ ವಿಚಾರಣೆ ನಡೆಸಬೇಕು ಎಂದು ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಉಪಾಧ್ಯಕ್ಷೆ ಕೆ.ನೀಲಾ, ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಬಿಹಾ ಭೂಮಿಗೌಡ, ಡಿವೈಎಫ್‌ಐ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಪ್ರಗತಿಪರ ಚಳವಳಿ ಮುಖಂಡರಾದ ನವೀನ್ ಸೂರಿಂಜೆ, ಅಖಿಲಾ ವಿದ್ಯಾಸಂದ್ರ, ಜ್ಯೋತಿ ಅನಂತ ಸುಬ್ಬರಾವ್, ವಿನಯ್ ಶ್ರೀನಿವಾಸ್ ಮತ್ತಿತರರು ಒತ್ತಾಯಿಸಿದ್ದಾರೆ.

ಹೊಳೆನರಸೀಪುರದ ಇನ್‌ಸ್ಪೆಕ್ಟರ್ ಅಮಾನತು ಮಾಡಬೇಕು. ಸಂತ್ರಸ್ತ ಮಹಿಳೆಯರ ಹೇಳಿಕೆ ದಾಖಲಿಸಿಕೊಳ್ಳುವಾಗ ಮಹಿಳಾ ಆಪ್ತಸಮಾಲೋಚಕರು ಇರಬೇಕು. ಸೂಕ್ತ ಭದ್ರತೆ ಒದಗಿಸಬೇಕು. ವಿಡಿಯೊದಲ್ಲಿನ ಮಹಿಳೆಯರನ್ನು ಪೊಲೀಸರೇ ಪತ್ತೆ ಹಚ್ಚಿ ಹೇಳಿಕೆ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಂಧನಕ್ಕೆ ಆಗ್ರಹ: ಆರೋಪಿಗಳಾದ ಎಚ್‌.ಡಿ. ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಕೂಡಲೇ ಬಂಧಿಸಬೇಕು ಎಂದು ಭಾರತ ಮಹಿಳಾ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಐಡಬ್ಲ್ಯು) ಒತ್ತಾಯಿಸಿದೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಸಮಗ್ರವಾಗಿ ತನಿಖೆ ನಡೆಸಬೇಕು. ಸಂತ್ರಸ್ತರಿಗೆ ನ್ಯಾಯ ದೊರಕಿಸಬೇಕು ಎಂದು ಸಂಘಟನೆಯ ಅಧ್ಯಕ್ಷೆ ಎ. ಜ್ಯೋತಿ, ಕಾರ್ಯದರ್ಶಿ ಕೆ. ರೇಣುಕಾ, ದಿವ್ಯಾ ಎಸ್. ಬಿರಾದಾರ ಒತ್ತಾಯಿಸಿದ್ದಾರೆ.

ನಿಧನ ವಾರ್ತೆ

ರುದ್ರಾಂಬಾ



ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಮಾಜಿ ಉಪಮುಖ್ಯಮಂತ್ರಿ ದಿವಂಗತ ಎಂ.ಪಿ. ಪ್ರಕಾಶ್ ಅವರ ಪತ್ನಿ ಎಂ.ಪಿ.ರುದ್ರಾಂಬಾ ಪ್ರಕಾಶ್ (83) ಸೋಮವಾರ ಇಲ್ಲಿ ವಯೋಸಹಜ ಕಾಯಿಲೆಯಿಂದ ನಿಧನರಾದರು.

ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್‌ನ ಗೌರವಾಧ್ಯಕ್ಷರಾಗಿದ್ದ ಅವರಿಗೆ ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ, ರಂಗಭಾರತಿ ಅಧ್ಯಕ್ಷೆ ಎಂ.ಪಿ.ಸುಮಾ, ಎಂ.ಪಿ.ವೀಣಾ ಸೇರಿ ಮೂವರು ಪುತ್ರಿಯರು ಇದ್ದಾರೆ. ಅವರ ಪುತ್ರ ಹಾಗೂ ಹರಪನಹಳ್ಳಿ ಕ್ಷೇತ್ರದ ಮಾಜಿ ಶಾಸಕ ಎಂ.ಪಿ.ರವೀಂದ್ರ ಆರು ವರ್ಷದ ಹಿಂದೆ ನಿಧನರಾಗಿದ್ದರು.

'ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಇಲ್ಲಿನ ಎಂ.ಪಿ.ಪ್ರಕಾಶ್ ಸಮಾಧಿ ಬಳಿ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ' ಎಂದು ಕುಟುಂಬದವರು ತಿಳಿಸಿದ್ದಾರೆ.

ಚುನಾವಣೆ: ಮತದಾರರಿಗೆ ಉಚಿತ ವಿಮಾನ ಟಿಕೆಟ್

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮೇ 7ರಂದು ನಡೆಯುವ ಉತ್ತರ ಕನ್ನಡ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಗಲ್ಫ್ ರಾಷ್ಟ್ರದಿಂದ ಭಾರತಕ್ಕೆ ಬರುವ ಭಟ್ಕಳ ಜನರಿಗೆ ಉಚಿತ ವಿಮಾನ ಟಿಕೆಟ್ ನೀಡುವುದಾಗಿ ವಿವಿಧ ಮುಸ್ಲಿಂ ಜಮಾತೆಗಳು ತಿಳಿಸಿವೆ.

ಈಗಾಗಲೇ ಸೌದಿ ಅರೇಬಿಯಾದಲ್ಲಿರುವ ಭಟ್ಕಳ ಮುಸ್ಲಿಂ ಜಮಾತೆ ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಉಳಿದ ಅರಬ್ ದೇಶಗಳ ಜಮಾತೆಗಳು ಈ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿವೆ.

ಸೌದಿ ಅರೇಬಿಯಾದ ರಿಯಾದ್, ದಮಾಮ್ ಹಾಗೂ ಜೆಡ್ಡಾದಲ್ಲಿ 1,250 ಭಟ್ಕಳದ ಮತದಾರರಿದ್ದಾರೆ. ಈ ಬಾರಿಯ ಕೆನರಾ ಕ್ಷೇತ್ರದಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಬಾರದು ಎಂದು ನಿರ್ಧರಿಸಿರುವ ಮುಸ್ಲಿಂ ಜಮಾತ್‌ಗಳು ಒಂದು ಕುಟುಂಬಕ್ಕೆ ಎರಡು ಟಿಕೆಟ್ ಆಫರ್ ನೀಡಿವೆ.

ಸೌದಿಅರೇಬಿಯಾದ ಭಟ್ಕಳ ಮುಸ್ಲಿಂ ಸಂಘಟನೆಗಳ ನಿರ್ಧಾರದಿಂದ ಉತ್ತೇಜಿತರಾಗಿರುವ ದುಬೈನಲ್ಲಿರುವ ಭಟ್ಕಳ ಮುಸ್ಲಿಂ ಜಮಾತ್‌ಗಳೂ ಈ ಬಗ್ಗೆ ಒಂದೆರಡು ದಿನಗಳಲ್ಲಿ ತನ್ನ ಸದಸ್ಯರಿಗೆ ಉಚಿತ ಟಿಕೆಟ್ ನೀಡುವ ಬಗ್ಗೆ ನಿರ್ಧರಿಸುವುದಾಗಿ ತಿಳಿಸಿವೆ.

'ಈ ಬಾರಿ ಭಾರತದಲ್ಲಿ ನಡೆಯುತ್ತಿರುವ ಲೋಕಸಭೆ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಮುಸ್ಲಿಂ ಜಮಾತೆಗಳು ವಿದೇಶಗಳಲ್ಲಿ ನೆಲೆಸಿರುವ ಎಲ್ಲ ಭಟ್ಕಳದ ಮತದಾರರು ಮತದಾನದಲ್ಲಿ ಪಾಲ್ಗೊಳ್ಳಬೇಕು. ಅಲ್ಲದೇ, ಮನುಷ್ಯತ್ವದ ಬಗ್ಗೆ ಕಾಳಜಿ ಇರುವ ಜಾತ್ಯತೀತ ವ್ಯಕ್ತಿ, ಪಕ್ಷಗಳ ಪರವಾಗಿ ಮತದಾನ ಮಾಡಬೇಕು' ಎಂದು ಮುಖಂಡರು ಮತದಾರರನ್ನು ವಿನಂತಿಸಿಕೊಳ್ಳುತ್ತಿದ್ದಾರೆ.

ಎಸ್.ಎಂ. ಕೃಷ್ಣ ಆರೋಗ್ಯ ಸ್ಥಿರ

ಬೆಂಗಳೂರು: ಕೇಂದ್ರದ ಮಾಜಿ ಸಚಿವ ಎಸ್.ಎಂ. ಕೃಷ್ಣ ಅವರು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ಇಲ್ಲಿನ ಮಣಿಪಾಲ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಹಿರಿಯ ನಾಯಕ ಎಸ್.ಎಂ. ಕೃಷ್ಣ ಅವರು ವಯೋ ಸಹಜ ಕಾಯಿಲೆಗೆ ಚಿಕಿತ್ಸೆ ಪಡೆಯಲು ವೈದೇಹಿ ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿ ಮೂರು ದಿನ ಚಿಕಿತ್ಸೆ ನೀಡಿದ ಬಳಿಕ ಮಣಿಪಾಲ್ ಆಸ್ಪತ್ರೆಗೆ ಅವರನ್ನು ಸ್ಥಳಾಂತರ ಮಾಡಲಾಗಿತ್ತು.

ಡಾ. ಸತ್ಯನಾರಾಯಣ ಮೈಸೂರು ಮತ್ತು ವೈದ್ಯಕೀಯ ತಜ್ಞರ ತಂಡ ಚಿಕಿತ್ಸೆ ನೀಡುತ್ತಿದೆ. ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಆಕ್ರೋಶ ಪ್ರಜ್ವಲ: ತನಿಖೆ ಚುರುಕು

ಒಂದನೇ ಪುಟದಿಂದ...

ಜೆಡಿಎಸ್‌ನ ಯುವ ಶಾಸಕರಾದ ಗುರಮಠಕಲ್‌ನ ಶರಣ ಕಂದಕೂರ ಹಾಗೂ ಮುಳಬಾಗಿಲಿನ ಸಮೃದ್ಧಿ ಮಂಜುನಾಥ್ ಅವರು ಪ್ರಜ್ವಲ್ ವಿರುದ್ಧ ಸಿಡಿದೆದ್ದಿದ್ದು, ' ಹರಿದಾಡುತ್ತಿರುವ ವಿಡಿಯೊಗಳಿಂದ ತಲೆತಗ್ಗಿಸುವಂತಾಗಿದ್ದು, ಕೂಡಲೇ ಪಕ್ಷದಿಂದ ಅಮಾನತು ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಮಂಗಳವಾರ (ಇದೇ 30) ಹುಬ್ಬಳ್ಳಿಯಲ್ಲಿ ಜೆಡಿಎಸ್ ಪ್ರಮುಖರ ಸಮಿತಿ ಸಭೆ ನಡೆಯಲಿದ್ದು, ಅಲ್ಲಿ ಶಿಸ್ತುಕ್ರಮ ಕುರಿತು ನಿರ್ಣಯ ಘೋಷಿಸಲಾಗುತ್ತದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಬಿಜೆಪಿ ಮೌನ: ಪ್ರಜ್ವಲ್ ವಿಷಯದಲ್ಲಿ ಬಿಜೆಪಿ ನಾಯಕರು ಅಂತರ ಕಾಯ್ದುಕೊಂಡಿದ್ದಾರೆ. 'ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ್ದು, ಸಮರ್ಥಿಸಿಕೊಂಡರೆ ಪಕ್ಷದ ವರ್ಚಸ್ಸಿಗೆ ಧಕ್ಕೆ ಬರಲಿದೆ. ಹೀಗಾಗಿ, ಮೌನವೇ ಸೂಕ್ತ ಎಂಬ ತೀರ್ಮಾನ ಪಕ್ಷದ್ದಾಗಿದೆ' ಎಂದು ಮೂಲಗಳು ಹೇಳಿವೆ.

'ವಿಡಿಯೊದಲ್ಲಿರುವ ಸಂತ್ರಸ್ತೆಯರು ಹಿಂದೂಗಳಲ್ಲವೇ? ಈ ಬಗ್ಗೆ ಬಿಜೆಪಿ ಏಕೆ ಹೋರಾಟ ಮಾಡುತ್ತಿಲ್ಲ' ಎಂದು ಕಾಂಗ್ರೆಸ್ ನಾಯಕರು ಟೀಕಿಸಿದ್ದಾರೆ.

ಪ್ರಜ್ವಲ್‌ಗೆ ಸಂಬಂಧಿಸಿದ್ದು ಎನ್ನಲಾಗುತ್ತಿರುವ ವಿಡಿಯೊಗಳು ವಾರದ ಹಿಂದಷ್ಟೇ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಇದರ ತನಿಖೆಗಾಗಿ ಸರ್ಕಾರ ಎಸ್‌ಐಟಿ ರಚಿಸುತ್ತಿದ್ದಂತೆಯೇ ಸಂಸದರ ವರ್ತನೆ ಬಗ್ಗೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಹಾಸನ, ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ಪ್ರತಿಭಟನೆ ನಡೆದಿದ್ದು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂಬ ಹಕ್ಕೊತ್ತಾಯವೂ ಮಂಡನೆಯಾಗಿದೆ.

ದೇಶ ಬಿಟ್ಟಿದ್ದು ಹೇಗೆ: ಪ್ರಿಯಾಂಕಾ

ಒಂದನೇ ಪುಟದಿಂದ...

'ಕೆಲ ದಿನಗಳ ಹಿಂದೆ ಮೂರು ದಿನಗಳ ಸಲುವಾಗಿ ನನ್ನ ಮಗಳನ್ನು ಭೇಟಿ ಮಾಡಲು ಹೋಗಿದ್ದಾಗ ಪ್ರಧಾನಿ ಹಾಗೂ ಗೃಹ ಸಚಿವರು ಪ್ರಿಯಾಂಕಾ ಗಾಂಧಿ ವಿದೇಶಕ್ಕೆ ಹೋಗಿದ್ದಾರೆ ಎಂದು ಅಪಪ್ರಚಾರ ಮಾಡಿದ್ದರು. ನಾನು ಎಲ್ಲಿಗೆ ಹೋಗುತ್ತೇನೆ, ವಿರೋಧ ಪಕ್ಷದ ನಾಯಕರು ಎಲ್ಲಿಗೆ ಹೋಗುತ್ತಾರೆ ಎಂಬುದು ಇವರಿಗೆ ಗೊತ್ತಿರುತ್ತದೆ. ಆದರೆ, ಇಂಥ ಆರೋಪಿ, ರಾಕ್ಷಸ ಈ ದೇಶವನ್ನು ಬಿಟ್ಟು ಹೋಗಿರುವುದು ಇವರಿಗೆ ಗೊತ್ತಾಗುವುದಿಲ್ಲ ಎಂಬುದನ್ನು ಹೇಗೆ ನಂಬಲು ಸಾಧ್ಯ' ಎಂದು ಕೇಳಿದರು.

ಪಾಪದ ಕೊಡ ತುಂಬಿದಾಗ...

ಒಂದನೇ ಪುಟದಿಂದ...

ಪ್ರತಿಭಟನಕಾರರ ಮನವಿ ಸ್ವೀಕರಿಸಿ ಮಾತನಾಡಿದ ಅವರು,'ಎಲ್ಲ ರೀತಿಯಲ್ಲೂ ನ್ಯಾಯ ಸಿಗುತ್ತದೆ. ಮನವಿಯನ್ನು ಪರಿಗಣಿಸಿದ್ದೇನೆ, ಸೂಕ್ತ ತನಿಖೆಯಾಗಿ ನ್ಯಾಯ ಸಿಗುತ್ತದೆ. ಇಂತಹ ಘಟನೆಯಾದಾಗ ನಾವು ಪ್ರತಿಭಟಿಸಬೇಕು. ತಮ್ಮನ್ನು ತಾವು ರಕ್ಷಣೆ ಮಾಡುವಷ್ಟು ಮಹಿಳೆ ಮುಂದುವರಿದಿದ್ದಾರೆ. ನಾವು ನಿಮ್ಮ ಜೊತೆ ಇದ್ದೇವೆ' ಎಂದು ಹೇಳಿದರು.

ಹಳೆ ವಿಡಿಯೊ: ರೇವಣ್ಣ

ಒಂದನೇ ಪುಟದಿಂದ...

'ತನಿಖೆಗೆ ಅಡ್ಡಿಯಾಗಬಾರದು ಎಂದು ಪ್ರಜ್ವಲ್‌ನನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ನಿರ್ಧಾರ ತೆಗೆದುಕೊಂಡಿರಬಹುದು. ನನ್ನ ವಿರುದ್ಧ ದಾಖಲಾದ ಪ್ರಕರಣದಲ್ಲೂ ರಾಜಕೀಯ ಕಾರಣಗಳಿವೆ. ತನಿಖೆಯಿಂದ ಸತ್ಯಾಂಶ ಹೊರಬರಲಿದೆ. 50 ವರ್ಷಗಳಿಂದ ಇಂತಹ ಹೋರಾಟ ನಡೆಸುತ್ತಾ ಬಂದಿದ್ದೇವೆ. ಈಗಲೂ ಕಾನೂನು ಹೋರಾಟ ಮುಂದುವರಿಸುತ್ತೇವೆ. ತನಿಖೆ ಆರಂಭವಾಗಿರುವುದರಿಂದ ಈ ಕುರಿತು ಹೆಚ್ಚು ಮಾತನಾಡುವುದಿಲ್ಲ' ಎಂದು ಹೇಳಿದರು.

'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡರ ಬಳಿ ಈ ವಿಚಾರ ಮಾತನಾಡಿಲ್ಲ. ಕಾನೂನು ರೀತಿ ತನಿಖೆ ನಡೆದು ಕ್ರಮವಾಗಲಿ ಎಂದು ಅವರು ಹೇಳಿದ್ದಾರೆ' ಎಂದರು.



❦ ಸುಭಾಷಿತ ❦

ಪ್ರೀತಿಯು ಪರಿಪೂರ್ಣವಾಗಿ ಇರಬೇಕೆಂದಿಲ್ಲ. ಅದು ನಿಜವಾದದ್ದಾಗಿರಬೇಕು.

–ಗೌತಮ ಬುದ್ಧ

ಇವಿಎಂ ಕುರಿತ 'ಸುಪ್ರೀಂ' ತೀರ್ಪು ಕೊನೆಯಾಗದ ಅನುಮಾನ

ವಿದ್ಯುನ್ಮಾನ ಮತಯಂತ್ರಗಳಿಗೆ (ಇವಿಎಂ) ಸಂಬಂಧಿಸಿದ ಪ್ರಕರಣದಲ್ಲಿ ಕೆಲವು ಬೇಡಿಕೆಗಳ ಪೈಕಿ, ಇವಿಎಂಗಳಲ್ಲಿನ ಮತಗಳು ಮತ್ತು ಶೇಕಡ 100ರಷ್ಟು ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಚೀಟಿಗಳನ್ನು ಪರಸ್ಪರ ಹೋಲಿಸಿ ನೋಡಬೇಕು ಎಂದು ಕೋರಿದ್ದ ಅರ್ಜಿಯನ್ನು ತಿರಸ್ಕರಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅನಿರೀಕ್ಷಿತವೇನೂ ಅಲ್ಲ. ಇವಿಎಂಗಳ ಮೂಲಕ ಮತದಾನದ ವ್ಯವಸ್ಥೆಗೆ ನ್ಯಾಯಾಲಯವು ಈ ಹಿಂದೆಯೇ ಒಪ್ಪಿಗೆ ನೀಡಿದೆ. ಅಷ್ಟೇ ಅಲ್ಲದೆ, ಶೇಕಡ 100ರಷ್ಟು ಒಪ್ಪುಗೆಯಿಲ್ಲದೆ, ವಿವಿ-ಪ್ಯಾಟ್ ಯಂತ್ರಗಳಲ್ಲಿ ಶೇಕಡ 50ರಷ್ಟು ಮತಚೀಟಿಗಳನ್ನಾದರೂ ತಾಳೆ ನೋಡಲು ಅನುಮತಿಸಬೇಕು ಎಂಬ ಬೇಡಿಕೆಗಳನ್ನು ತಿರಸ್ಕರಿಸಿದೆ. ಮತ್ತೊಂದೆಡೆ, ಪ್ರತಿ ಕ್ಷೇತ್ರದ ಒಂದು ಮತಗಟ್ಟೆಯಲ್ಲಿ ಮಾತ್ರ ವಿವಿ-ಪ್ಯಾಟ್ ತಾಳೆ ಮಾಡಿ ನೋಡಲು ಇದ್ದ ಮಿತಿಯನ್ನು ಐದು ಮತಗಟ್ಟೆಗಳಿಗೆ ಹೆಚ್ಚಿಸುವುದನ್ನು ನ್ಯಾಯಾಲಯ ಈ ಹಿಂದೆ ಬೆಂಬಲಿಸಿತ್ತು. 'ಇಂತಹ ಮತಗಟ್ಟೆಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಲು ಅವಕಾಶವಿದೆ. ಅಂದರೆ, ಇವಿಎಂಗಳ ಕಾರ್ಯಾಚರಣೆ ಬಗ್ಗೆ ಇದ್ದ ಅನುಮಾನಗಳನ್ನು ಹೋಗಲಾಡಿಸುವ ಉದ್ದೇಶದಿಂದ ವಿವಿ-ಪ್ಯಾಟ್ ಮತಚೀಟಿ ಸೌಲಭ್ಯವು 2013ರಲ್ಲಿ ಜಾರಿಗೆ ಬಂದಿತು. ನ್ಯಾಯಾಲಯವು ಈಗ ತನ್ನ ಈ ಹಿಂದಿನ ತೀರ್ಪುಗಳನ್ನು ಪುನರ್ ದೃಢೀಕರಿಸುವ ಮೂಲಕ ಇವಿಎಂ ಮತದಾನ ವ್ಯವಸ್ಥೆಗೆ ಮತ್ತೆ ತನ್ನ ಒಪ್ಪಿಗೆಯ ಮುದ್ರೆ ಒತ್ತಿದೆ.




ನ್ಯಾಯಾಲಯವು ಈಗ ಎರಡು ಪರಿಹಾರ ಕ್ರಮಗಳನ್ನು ಒಳಗೊಂಡ ನಿರ್ದೇಶನಗಳನ್ನು ನೀಡಿದೆ. ಇವು ಇವಿಎಂ ವ್ಯವಸ್ಥೆಯು ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸುವ ಉದ್ದೇಶ ಹೊಂದಿವೆ. ಚಿಹ್ನೆಗಳನ್ನು ಅಪ್‌ಲೋಡ್ ಮಾಡುವ ಘಟಕಗಳನ್ನು ಫಲಿತಾಂಶ ಬಂದ ನಂತರದ 45 ದಿನಗಳವರೆಗೆ ಭದ್ರತಾ ಕೊಠಡಿಯಲ್ಲಿ ಇರಿಸುವುದನ್ನು ಖಾತರಿಗೊಳಿಸಬೇಕು ಎಂಬುದು ಮೊದಲನೆಯ ಕ್ರಮವಾಗಿದೆ. ಮತಗಳ ಮರು ಎಣಿಕೆಗೆ ಅಗತ್ಯ ನೀಡಲಿರುವುದನ್ನು ಖಚಿತಗೊಳಿಸುವುದು ಇದರ ಉದ್ದೇಶ. ಸೋಲು ಕಂಡವರ ಪೈಕಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿ ಇರುವ ಅಭ್ಯರ್ಥಿಗಳಿಗೆ ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟವಾದ ಏಳು ದಿನಗಳ ಒಳಗೆ ಕ್ಷೇತ್ರ ವ್ಯಾಪ್ತಿಯಲ್ಲಿನ ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಆಯಾ ಕ್ಷೇತ್ರದ ಶೇ 5ರಷ್ಟು ಇವಿಎಂಗಳಲ್ಲಿನ ಮೈಕ್ರೊ ಕಂಟ್ರೋಲರ್‌ಗಳನ್ನು ಎಂಜಿನಿಯರುಗಳ ಪರಿಶೀಲನೆಗೆ ಕೋರಲು ಅವಕಾಶ ಕಲ್ಪಿಸಬೇಕು ಎಂಬುದು ಎರಡನೇ ಕ್ರಮವಾಗಿದೆ. ಪ್ರಸ್ತುತ ಜಾರಿಯಲ್ಲಿರುವ ನಿಯಂತ್ರಣಗಳ ಜೊತೆಗೆ ಈ ಕ್ರಮಗಳ ಅಳವಡಿಕೆಯು ದೋಷರಹಿತ ಮತ್ತು ಸಮಗ್ರತೆಯುಳ್ಳ ಮತ ಚಲಾವಣೆ ವ್ಯವಸ್ಥೆಯನ್ನು ಖಾತರಿಗೊಳಿಸುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಇವಿಎಂ ಮತ ಚಲಾವಣೆ ಪ್ರಕ್ರಿಯೆಯು ಸಂಪೂರ್ಣ ವಿಶ್ವಾಸಾರ್ಹ ಮತ್ತು ಲೋಪರಹಿತವಾಗಿ ಇರುವುದು ಅತ್ಯಗತ್ಯ

ಆದರೆ, ನ್ಯಾಯಾಲಯದ ತೀರ್ಪು ಇವಿಎಂಗಳ ಕಾರ್ಯಾಚರಣೆ ಬಗ್ಗೆ ಇರುವ ಅನುಮಾನಗಳನ್ನು ಕೊನೆಗಾಣಿಸಿ ಈ ಕುರಿತ ಚರ್ಚೆಗಳಿಗೆ ಇತಿಶ್ರೀ ಹಾಡುವ ಸಾಧ್ಯತೆಗಳು ಕಂಡುಬರುತ್ತಿಲ್ಲ. ಎಲೆಕ್ಟ್ರಾನಿಕ್ ಮತಯಂತ್ರಗಳ ಬಗ್ಗೆ ತಮ್ಮದೇ ಸಂಶಯಗಳನ್ನು ಹೊಂದಿ ವಿರೋಧಿಸುತ್ತಿರುವವರನ್ನು ನ್ಯಾಯಾಲಯದ ತೀರ್ಪನ್ನು ನಿರಾಶಾದಾಯಕ ಎಂದು ಅಭಿಪ್ರಾಯಪಟ್ಟಿದ್ದಾರೆ. ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ವಿವಿ-ಪ್ಯಾಟ್ ಹೆಚ್ಚಿನ ಬಳಕೆಗಾಗಿ ಅಭಿಯಾನ ಮುಂದುವರಿಸುವುದಾಗಿ ಹೇಳಿವೆ. ಎಲ್ಲ ವಿವಿ-ಪ್ಯಾಟ್ ಮತಚೀಟಿಗಳನ್ನು ಇವಿಎಂ ಮತಗಳೊಂದಿಗೆ ತಾಳೆ ನೋಡುವುದು ಬಹಳ ಪ್ರಯಾಸದಾಯಕ ಕೆಲಸವಾಗಿದ್ದು, ಚುನಾವಣಾ ಫಲಿತಾಂಶ ವಿಳಂಬಗೊಳ್ಳಲು ಕಾರಣವಾಗಬಹುದು ಎಂದು ನ್ಯಾಯಾಲಯ ಪ್ರತಿಪಾದಿಸಿದೆ. ನ್ಯಾಯಾಲಯದ ಈ ಪ್ರತಿಪಾದನೆಯನ್ನು ಅತ್ಯುತ್ತಮ ತರ್ಕವೆಂದು ಹೇಳಲಾಗದು. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನಂತಹ (ಎಡಿಆರ್) ಅತ್ಯುತ್ತಮ ವಿಶ್ವಾಸಾರ್ಹ ಸಂಸ್ಥೆಗಳು ಈ ಪ್ರಕರಣದಲ್ಲಿ ಅರ್ಜಿದಾರ ಆಗಿದ್ದವು ಎಂಬುದು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಾಗಿದೆ. ಅರ್ಜಿದಾರರ ಆಶಯಗಳು ದೋಷಪೂರಿತವಾಗಿರಬಹುದು, ಅರ್ಜಿದಾರರು ದುರುದ್ದೇಶ ಹೊಂದಿರಬಹುದು ಅಥವಾ ದೇಶದ ಸಾಧನೆಗಳನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿರಬಹುದು ಎಂದೂ ಕೋರ್ಟ್ ಉದ್ಗರಿಸಿದೆ. ನ್ಯಾಯಾಲಯದ ಈ ರೀತಿಯ ವ್ಯಾಖ್ಯಾನವು ದುರದೃಷ್ಟಕರ. ವ್ಯವಸ್ಥೆಯ ಬಗೆಗೆ ಅನುಮಾನಗಳು ಇರುವತನಕ ಇದನ್ನು ಇತ್ಯರ್ಥಗೊಂಡ ಪ್ರಕರಣ ಎಂದು ಭಾವಿಸಲಾಗದು. ದೇಶದಲ್ಲಿ ಇವಿಎಂ ಇತಿಹಾಸವು ಕ್ರೋಡೀಕೃತ ಸುರಕ್ಷಾ ಕ್ರಮಗಳನ್ನು ಮತ್ತು ವಿಶ್ವಾಸಾರ್ಹತೆ ಕಾಪಾಡಿಕೊಳ್ಳಲು ಹೆಚ್ಚೆಚ್ಚು ಕ್ರಮಗಳ ಅಳವಡಿಕೆಯನ್ನು ಒಳಗೊಂಡಿದ್ದಾಗಿದೆ. ಭವಿಷ್ಯದಲ್ಲಿ, ಇಂತಹ ಇನ್ನಷ್ಟು ಕ್ರಮಗಳ ಜಾರಿಯನ್ನು ಕೂಡ ಅಲ್ಲಗಳೆಯಲಾಗದು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಇವಿಎಂ ಮತ ಚಲಾವಣೆ ಪ್ರಕ್ರಿಯೆಯು ಸಂಪೂರ್ಣ ವಿಶ್ವಾಸಾರ್ಹವಾಗಿ ಮತ್ತು ಲೋಪರಹಿತವಾಗಿ ಇರುವುದು ಅತ್ಯಗತ್ಯ.

ಬಲವಂತದಿಂದ ಕಸಿದು ಕೊಟ್ಟರೆ ದರೋಡೆ, ಒಲಿದು ಕೊಟ್ಟರೆ ದಾನ

ಹಂಚಿಕೆ ಎಂಬುದು ಹೊಚ್ಚ ಹೊಸತಲ್ಲ!



ಅನುಸಂಧಾನ

ರವೀಂದ್ರ ಭಟ್ಟ

'ಸಂಪತ್ತಿನ ಸಮಾನ ಹಂಚಿಕೆ' ಎಂಬ ಪದಗುಚ್ಛ ಒಂದು ಮಾಯೆ ಇದ್ದಂತೆ. ವಾಸ್ತವದಲ್ಲಿ ಅದು ಕಾರ್ಯಸಾಧುವೇ, ಕಾರ್ಯಸಾಧು ಎಂದಾದರೆ ಎಷ್ಟರಮಟ್ಟಿಗೆ ಎಂಬ ಪ್ರಶ್ನೆಗಳು ಮೂಡುತ್ತವೆ. ಅದರ ಉದ್ದೇಶವು ಮನುಷ್ಯ ಸ್ವಭಾವಕ್ಕೆ ಒಗ್ಗುವಂಥದ್ದೇ? ಮನುಷ್ಯ ಸಂಪತ್ತನ್ನು ಗಳಿಸುವುದೇ ಅದು ತನಗೆ, ತನ್ನ ಮುಂದಿನವರಿಗೆ, ಅವರ ಮುಂದಿನವರಿಗೆ ಇರಲಿ ಎಂಬ ಉದ್ದೇಶದಿಂದ. ಮನುಷ್ಯನ ಆ ಗುಣವು ಒಳಿತನ್ನು ಮಾಡಿದೆ, ಮನುಷ್ಯ ಅಸಾಧ್ಯ ಎಂಬಂತಹ ಸಾಹಸಗಳನ್ನು ಕೈಗೊಳ್ಳುವಂತೆ ಮಾಡಿದೆ. ಹಾಗೆಯೇ, ಸಂಪತ್ತಿನ ಸಂಗ್ರಹವು ಮನುಷ್ಯನನ್ನು ಲೋಭಿಯನ್ನಾಗಿಯೂ ಕ್ರೂರಿಯನ್ನಾಗಿಯೂ ಮಾಡಿದೆ. ಇತಿಹಾಸ ಇವುಗಳಿಗೆಲ್ಲ ಅಸಂಖ್ಯ ನಿದರ್ಶನಗಳನ್ನು ನೀಡುತ್ತದೆ.

ಈ ಚುನಾವಣಾ ಪರ್ವದಲ್ಲಿ, 'ದೇಶದ ಸಂಪತ್ತನ್ನು ಎಲ್ಲರಿಗೂ ಸಮಾನವಾಗಿ ಹಂಚುತ್ತೇವೆ' ಎಂದು ಕಾಂಗ್ರೆಸ್ಸಿನ ಮುಖಂಡರು ಹೇಳಿದ್ದಾರೆ ಎಂದು ಆರೋಪಿಸಿ, ಬಿಜೆಪಿ ನಾಯಕರು ಆ ಮಾತಿಗೆ ಪ್ರತಿಮಾತು ಹೊಸೆದ ನಂತರದಲ್ಲಿ ದೇಶದಲ್ಲಿ ಭೂಕಂಪನವೇ ಆದಂತಿದೆ! 'ಸಂಪತ್ತಿನ ಸಮಾನ ಹಂಚಿಕೆ' ಎಂಬುದು ಈಗ ದೊಡ್ಡ ವಿವಾದದ ಸ್ವರೂಪವನ್ನೂ ಪಡೆದುಕೊಂಡಿದೆ. ಈ ಬಗೆಯ ಪ್ರಸ್ತಾಪ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಇಲ್ಲ ಎಂದು ಆ ಪಕ್ಷದ ಮುಖಂಡರು ಪದೇಪದೇ ಸ್ಪಷ್ಟಪಡಿಸಿದ್ದರೂ ವಿವಾದ ಕಾವು ಕಳೆದುಕೊಂಡಿಲ್ಲ. ಸಂಪತ್ತಿನ ಸಮಾನ ಹಂಚಿಕೆಯ ಮಾತನ್ನು ಯಾವ ಪಕ್ಷವೇ ಹೇಳಲಿ, ಅದು ಹೇಳಿದಂತೆಯೇ ನಡೆದುಕೊಳ್ಳುವುದೇ?! ಅದೇನೇ ಇರಲಿ, ಸಂಪತ್ತಿನ ಸಮಾನ ಹಂಚಿಕೆ ಎಂಬ ಮಾತನ್ನು ಒಮ್ಮೆ ಸದಾಶಯದಿಂದ ಸ್ವೀಕರಿಸಲು ಅಡ್ಡಿಯೇನೂ ಇಲ್ಲ. ಏಕೆಂದರೆ ಸಂಪತ್ತನ್ನು ಸಮಾನವಾಗಿ ಹಂಚುವುದು ಒಂದು ಆದರ್ಶ. ಹಂಚುವುದು ಎಂದರೆ ಅದು ಕಸಿದುಕೊಳ್ಳುವುದಲ್ಲ. ಇದ್ದವರು ಇಲ್ಲದವರಿಗೆ ಕೊಡುವುದು ಅಷ್ಟೆ. ಬಡವರನ್ನು ಕೈಹಿಡಿದು ಮೇಲೆತ್ತುವುದು. ಅವರೂ ಒಂದು ಹೆಜ್ಜೆ ಮುಂದೆ ಬರುವಂತೆ ಮಾಡುವುದು. ಹಾಗೆ ಮಾಡಿದರೆ ದೇಶಕ್ಕೆ ಕ್ಷೇಮ. ಸ್ವಾರ್ಥವೇ ತುಂಬಿತುಳುಕಾಡುತ್ತಿರುವ ಸಮಾಜದಲ್ಲಿ ಇದು ಬರೀ ಕನಸು ಎಂದು ಕೈತೊಳೆದುಕೊಳ್ಳುವುದು ಬೇಡ. ಶ್ರೀಮಂತರ ಮನವೊಲಿಸಿ ಸಂಪತ್ತನ್ನು ಸಮಾನವಾಗಿ ಹಂಚುವ ಪ್ರಯತ್ನ ಈ ದೇಶದಲ್ಲಿ ಈಗಾಗಲೇ ಕೆಲವು ಬಾರಿ ನಡೆದಿದೆ. ಅದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ವಿನೋಬಾ ಭಾವೆ ಅವರ ಭೂದಾನ ಚಳವಳಿ.

1951ರ ಏಪ್ರಿಲ್ 18ರಂದು ಅವರು ಭೂದಾನ ಚಳವಳಿ ಆರಂಭಿಸಿದರು. ಸುಮಾರು 13 ವರ್ಷ ಪಾದಯಾತ್ರೆ ನಡೆಸಿದ ಅವರು ಭೂಮಾಲೀಕರಿಂದ ದಾನವಾಗಿ ಪಡೆದ 5 ಕೋಟಿ ಎಕರೆಗೂ ಹೆಚ್ಚಿನ ಭೂಮಿಯನ್ನು ಭೂರಹಿತರಿಗೆ ಹಂಚಿದರು. ಇದರಲ್ಲಿ ಯಾವ ಸಂಘರ್ಷವೂ ಇರಲಿಲ್ಲ. ಭೂಮಾಲೀಕರು ಸ್ವಇಚ್ಛೆಯಿಂದಲೇ ದಾನ ಕೊಟ್ಟಿದ್ದರು. ಕರ್ನಾಟಕದಲ್ಲಿಯೂ ಇದು ಯಶಸ್ವಿಯಾಗಿಯೇ ನಡೆದಿತ್ತು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಎಣ್ಣೆಕೊಪ್ಪದ ಮಲ್ಲಿಕಾರ್ಜುನಪ್ಪ ಗೌಡ ತಮ್ಮ ಒಂದು ಸಾವಿರ ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದರು. 70ರ ದಶಕದಲ್ಲಿ ಕರ್ನಾಟಕದಲ್ಲಿ ಭೂಸುಧಾರಣೆ ಕಾಯ್ದೆ ಜಾರಿಗೆ ಬಂದಾಗಲೂ ಇಂತಹದೇ ಚಳವಳಿ ನಡೆಯಿತು. ಲಕ್ಷಾಂತರ ಮಂದಿ ಭೂರಹಿತರು ಭೂಮಾಲೀಕರಾದರು. ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚುವ ಹೃದಯವಂತಿಕೆಯಿಂದ ನಾವು ಈಗ 'ಸಂಪತ್ತಿನ ಸಮಾನ ಹಂಚಿಕೆ' ಎಂಬ ಶಬ್ದವನ್ನು ಕೇಳಿದರೇ ಬೆಚ್ಚಿಬೀಳುವ ಹಂತಕ್ಕೆ ಬಂದು ನಿಂತಿದ್ದೇವೆ.

ದೇಶದ ಸಂಪತ್ತನ್ನು ಹಂಚಿಕೆ ಮಾಡುತ್ತೇವೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ ಎಂಬುದಾಗಿ ಭಾವಿಸಿ, ಆ ಮಾತನ್ನು ಖಂಡಿಸುವ ಭರದಲ್ಲಿ ಪ್ರಧಾನಿ ನರೇಂದ್ರ ಮೋದಿ 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮ್ಮ ಮಂಗಳ ಸೂತ್ರವನ್ನೂ ಕಸಿದುಕೊಳ್ಳಲಾಗುತ್ತದೆ' ಎಂದು ಆರೋಪಿಸಿದರು. ಪ್ರಧಾನಿಯೊಬ್ಬರ ಬಾಯಿಯಿಂದ ಇಂತಹ ಮಾತು ಬರಬಾರದಿತ್ತು.ಆದರೂ ಬಂದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಮಂಗಳ-ಸೂತ್ರಕ್ಕೆ ಅತ್ಯಂತ ಪೂಜ್ಯ ಭಾವನೆ ಇದೆ. ಭಾರತೀಯ ಮಹಿಳೆಯರಿಗೆ ಚಿನ್ನದ ಆಭರಣದ ಹುಚ್ಚು ಇದೆ ಎನ್ನುವುದನ್ನು ಒಪ್ಪಿಕೊಳ್ಳೋಣ. ಅದನ್ನು ಹೊಂದುವುದು ಮಹಿಳೆಯರಿಗೆ ಸಹಜವಾದ ಆಸೆ ಎನ್ನುವುದನ್ನೂ ಮನ್ನಿಸೋಣ. ಆದರೆ ಈ ಆಸೆ ಬಹುತೇಕ ಸಂದರ್ಭದಲ್ಲಿ ಕುಟುಂಬದ ರಕ್ಷಣೆಯನ್ನು ಮಾಡಿದೆ. ಬಹಳಷ್ಟು ಬಾರಿ ಕುಟುಂಬ ಸಂಕಷ್ಟಕ್ಕೆ ಸಿಲುಕಿದಾಗ ಗಂಡಿನ ಆಸರೆಗೆ ಬಂದಿದ್ದು ಮಹಿಳೆಯರ ಈ ಚಿನ್ನದ ಆಭರಣಗಳು ಎನ್ನುವುದರಲ್ಲಿ ಸಂಶಯವಿಲ್ಲ. ದೇಶ ಸಂಕಷ್ಟಕ್ಕೆ ಸಿಲುಕಿದಾಗಲೂ ನಮ್ಮ ಹೆಣ್ಣುಮಕ್ಕಳು ತಮ್ಮ ಆಭರಣಗಳನ್ನು ದೇಶಕ್ಕಾಗಿ ವಿನಿಯೋಗಿಸಿದ ಉದಾಹರಣೆಗಳೂ ಬಹಳಷ್ಟಿವೆ.

ಭಾರತ ಇನ್ನೂ ಸ್ವತಂತ್ರವಾಗದೇ ಇದ್ದ ಸಂದರ್ಭದಲ್ಲಿ ಗಾಂಧೀಜಿ ಅವರು ಹರಿಜನೋದ್ಧಾರಕ್ಕೆ ಮತ್ತು ಭೂಕಂಪ ಸಂತ್ರಸ್ತರಿಗೆ ಪರಿಹಾರ ನೀಡುವುದಕ್ಕಾಗಿ ದೇಣಿಗೆ ಸಂಗ್ರಹಕ್ಕೆ ಮುಂದಾದಾಗ ಅನೇಕ ಮಹಿಳೆಯರು ತಮ್ಮ ಮೈಮೇಲೆ ಇದ್ದ ಬಂಗಾರವನ್ನು ದೇಣಿಗೆಯಾಗಿ ನೀಡಿದ್ದರು. ಕನ್ನಡದ ಖ್ಯಾತ ಕತೆಗಾರ್ತಿ ಕೊಡಗಿನ ಗೌರಮ್ಮ ಕೂಡ ತಮ್ಮಲ್ಲಿರುವ ಚಿನ್ನದ ಎಲ್ಲ ಆಭರಣಗಳನ್ನೂ ಗಾಂಧೀಜಿಗೆ ಒಪ್ಪಿಸಿದ್ದರು.

ಸ್ವಾತಂತ್ರ್ಯಾನಂತರ ಕೂಡ ಇಂತಹ ಘಟನೆಗಳು ನಡೆದಿವೆ. 1962ರಲ್ಲಿ ಚೀನಾ ಜೊತೆಗಿನ ಯುದ್ಧದಲ್ಲಿ ಭಾರತ ಸೋತಿತು. ಅದಕ್ಕೆ ಮುಖ್ಯ ಕಾರಣ, ನಮ್ಮ ರಕ್ಷಣಾ ವ್ಯವಸ್ಥೆ ಆಧುನೀಕರಣಗೊಂಡಿರಲಿಲ್ಲ. ಸೈನಿಕರಿಗೆ ಸೂಕ್ತ ಮೂಲ ಸೌಲಭ್ಯಗಳೂ ಇರಲಿಲ್ಲ. ಆಗ ಪ್ರಧಾನಿ ಆಗಿದ್ದ ಜವಾಹರಲಾಲ್ ನೆಹರೂ ರಾಷ್ಟ್ರೀಯ ರಕ್ಷಣಾ ನಿಧಿ ಸಂಗ್ರಹಣಾ ಪರಿಷತ್ ಸ್ಥಾಪಿಸಿದರು. ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೂ ದೇಣಿಗೆ ಸಂಗ್ರಹಕ್ಕೆ ಮುಂದಾದರು.



ಕರ್ನಾಟಕದ ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರೂ ಈ ನಿಧಿಗೆ ರಾಜ್ಯದಿಂದ ಸಾಕಷ್ಟು ಹಣವನ್ನು ಸಂಗ್ರಹಿಸಲು ಬಯಸಿದ್ದರು. ಅದಕ್ಕಾಗಿ ವಿಜಾಪುರದಲ್ಲಿ ಸಮಾರಂಭ ನಡೆಸಲಾಯಿತು. ಅದರಲ್ಲಿ ಕಾಂಗ್ರೆಸ್ ಪಕ್ಷದ ಆಗಿನ ಅಧ್ಯಕ್ಷೆ ಇಂದಿರಾ ಗಾಂಧಿ ಅವರೂ ಭಾಗಿಯಾಗಿದ್ದರು. ಆಗ ಬಾದಾಮಿ ತಾಲ್ಲೂಕಿನ ಜಮೀನ್ದಾರ ಮಲ್ಲನಗೌಡರ ಪತ್ನಿ ನೀಲಮ್ಮ ಗೌಡತಿ ವೇದಿಕೆಗೆ ಬಂದು ತಮ್ಮ ಕೊರಳಿನಲ್ಲಿದ್ದ ಬಂಗಾರದ ಗುಂಡಿಗಡಿಗೆಯನ್ನು ಇಂದಿರಾ ಗಾಂಧಿ ಅವರ ಕೊರಳಿಗೆ ಹಾಕಿದರು. ಅಲ್ಲದೆ ತಮ್ಮ ಮೈಮೇಲೆ ಇದ್ದ ಎಲ್ಲ ಆಭರಣಗಳನ್ನೂ ರಕ್ಷಣಾ ನಿಧಿಗೆ ನೀಡಿದರು. ಅವರು ನೀಡಿದ ಆಭರಣಗಳ ತೂಕ 1,150 ಗ್ರಾಂ ಇತ್ತು. ಸಂಕಷ್ಟ ಬಂದಾಗ ನಮ್ಮ ಹೆಣ್ಣುಮಕ್ಕಳು ಚಿನ್ನದ ಮೋಹ ತೊರೆಯುತ್ತಾರೆ ಎನ್ನುವುದಕ್ಕೆ ಇದು ಮತ್ತೊಂದು ನಿದರ್ಶನವಾಯಿತು. ನಮ್ಮ ಮಹಿಳೆಯರಿಗೆ ಬಂಗಾರದ ಮೇಲೆ ಆಸೆ ಇದೆ ನಿಜ, ಆದರೆ ಅದು ಕುಟುಂಬದ ಮಾನ, ದೇಶದ ಘನತೆ ರಕ್ಷಣೆಗೆ ಬಳಕೆಯಾದರೆ ಅದಕ್ಕಿಂತ ಧನ್ಯತೆ ಅವರಿಗೆ ಬೇರೊಂದಿಲ್ಲ.

ವಿಜಾಪುರದ ಈ ಕಾರ್ಯಕ್ರಮ ಇನ್ನೂ ಹಲವಾರು ಕಾರಣಗಳಿಗೆ ವಿಶಿಷ್ಟವಾಗಿತ್ತು. ನಿಜಲಿಂಗಪ್ಪ ಅವರು ರಕ್ಷಣಾ ನಿಧಿಗೆ ಸಂಬಂಧಿಸಿದಂತೆ ಒಂದು ಸಭೆಯನ್ನು ಕರೆದಿದ್ದರು. ಅದರಲ್ಲಿ ಭಾಗವಹಿಸಿದ್ದ ಬಹುತೇಕ ಮಂದಿ 'ರಾಜ್ಯದಲ್ಲಿ ಬರಗಾಲವಿದೆ. ಜನರಲ್ಲಿ ಹಣವೇ ಇಲ್ಲ. ಈ ಸಂದರ್ಭದಲ್ಲಿ ದೇಣಿಗೆ ನೀಡುವಂತೆ ಕೇಳಿದರೆ ಕೊಡುವುದು ಕಷ್ಟ' ಎಂದರು. ಆಗ ನಿಜಲಿಂಗಪ್ಪ ಅವರು ಸಭೆಯಲ್ಲಿ ಹಾಜರಿದ್ದ ವಿಧಾನ ಪರಿಷತ್ ಸದಸ್ಯ ಪಿ.ಎಂ.ನಾಡಗೌಡರಿಗೆ 'ಏನ್ ಗೌಡ್ರೇ, ರಕ್ಷಣಾ ನಿಧಿಗೆ ಹಣ ಕೊಡಿಸುವ ವಿಚಾರದಲ್ಲಿ ಮೌನವಾಗಿದ್ದೀರಿ. ನಿಮ್ಮ ನಿಲುವೇನು?' ಎಂದು ಪ್ರಶ್ನಿಸಿದರು. ಆಗ ಗೌಡರು 'ದೇಶ ಕಾಯುವ ಸೇನೆ ಬಲಪಡಿಸಲು ಎಷ್ಟು ಕೊಟ್ಟರೂ ಸಾಲದು. ನಾನು ನಿಮ್ಮ ತೂಕದಷ್ಟು ಬಂಗಾರ ಕೊಡುತ್ತೇನೆ' ಎಂದರು. ಅದನ್ನು ಕೇಳಿ ಸಭೆಯಲ್ಲಿದ್ದ ಕಾಂಗ್ರೆಸ್ ಮುಖಂಡರಿಗೆ ಅಚ್ಚರಿ. ನಿಜಲಿಂಗಪ್ಪನವರು 'ಗೌಡ್ರೇ ಆ ದಿನ ಇಂದಿರಾ ಗಾಂಧಿ ಅವರು ಸಭೆಯಲ್ಲಿ ಇರುತ್ತಾರೆ. ಅವರ ಮುಂದೆ ನನಗೆ ಬಂಗಾರದಲ್ಲಿ ತುಲಾಭಾರ ಮಾಡಿದರೆ ಸರಿಯಾಗುವುದಿಲ್ಲ' ಎಂದರು. ಅದಕ್ಕೆ ಗೌಡರು 'ದೇಶದ ಹಿತಕ್ಕಿಂತ ಬಂಗಾರ ದೊಡ್ಡದಲ್ಲ. ದುಡಿದ ಹಣದಲ್ಲಿ ಒಂದು ಭಾಗವನ್ನು ದೀನದಲಿತರ ಉದ್ಧಾರಕ್ಕೆ ಮೀಸಲಿಡಬೇಕು ಎಂಬ ಬಸವಣ್ಣನ ಸಿದ್ಧಾಂತದಲ್ಲಿ ನಂಬಿಕೆ ಇಟ್ಟವರು ನಾವು. ನಿಮ್ಮ ತೂಕದ ಬಂಗಾರ ಕೊಟ್ಟ ಹಾಗೆ ಇಂದಿರಾ ಗಾಂಧಿ ಅವರಿಗೂ ತುಲಾಭಾರ ಮಾಡಿ ಅವರ ತೂಕದಷ್ಟು ಬಂಗಾರವನ್ನು ನೀಡುತ್ತೇವೆ. ದೇಶ ಉಳಿದರೆ, ವಿಜಾಪುರವೂ ಉಳಿಯುತ್ತದೆ' ಎಂದರು.

1963ರ ಜುಲೈ 2ರಂದು ವಿಜಾಪುರದ ಆದಿಲ್ ಶಾಹಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಇಬ್ಬರಿಗೂ ಚಿನ್ನದ ತುಲಾಭಾರ ನಡೆಸಲಾಯಿತು. ವಿಜಾಪುರದ ಜನ 120 ಕೆ.ಜಿ. ತೂಕದ ಬಂಗಾರವನ್ನು ದೇಣಿಗೆ ನೀಡಿದರು. ನಾಡಗೌಡರು ಹೇಳಿದ ಹಾಗೆ ಈಗಲೂ ಜನಕ್ಕೆ ದೇಶ ಮುಖ್ಯ. ದೇಶ ಉಳಿದರೆ ನಾವು ಉಳಿಯುತ್ತೇವೆ ಎಂಬ ಜ್ಞಾನ ಅವರಿಗೆ ಇದೆ. ದೇಶ ಉಳಿಸಿಕೊಳ್ಳಲು ಜನರು ಸಿದ್ಧರಿದ್ದಾರೆ. ನಾಯಕರ ಬಗ್ಗೆಯೇ ಕೊಂಚ ಡೌಟು!

ಚುರುಮುರಿ



ನನ್ನ ಚರಿಗೆ ನನ್ನ ಹಕ್ಕು

• ಲಿಂಗರಾಜು ಡಿ.ಎಸ್.

ಕಮಲಕ್ಕ ಬೇಕುಬೇಕಾದೋರಿಗೆ ಮಾತ್ರ ಪಂಚಾಯಿತಿ ಬಾವಿ ನೀರು ಬುಡ್ತಳೆ ಅಂತ ಕಾಂಗಕ್ಕನಿಗೂ ಕಮಲಕ್ಕನಿಗೂ ದಿನಾ ಜಗಳ ನಡೀತಿತ್ತು. ಒಂದಿನ ಕಮಲಕ್ಕ ಕಾಂಗಕ್ಕನ ಕೊಡ ಅಂದ್ರೆ ಚರಿಗೇಗೆ ನೀರು ತುಂಬದೇ ಖಾಲಿ ಮಡಗಿದ್ದಳು.

'ಅಲ್ಲ ಕನೆ ಬಿತ್ತರಿ, ನಮ್ಮನೆ ದನ-ಕರ, ಜನಿಗೆ ಅನುಕೂಲಾಗಲಿ ಅಂತ ನಾನು ಚರಿಗೆ ಮಡಗಿದ್ರೆ ನೀನು ಒಂದು ಚೊಂಬು ನೀರು ಮಾತ್ರ ತುಂಬಿಸ್ತೀಯ. ನಾವೇನು ಮಾಡಿದ್ದವು ನಿನಗೆ?' ಕಾಂಗಕ್ಕ ಜಗಳಕ್ಕೆ ಬಿದ್ದಿದ್ದಳು.

'ನಾನೇನು ನಿನ್ನ ಚರಿಗೆ ನೀರು ತಕ್ಕೋಗಿ ಕುಡೀತಿಲ್ಲ ಕನೇ. ನಿನಗೇ ಎಲ್ಲಾ ನೀರು ಹುಯ್ಯಕ್ಕಾದದೇ' ಅಂತ ಕಮಲಕ್ಕ ಗರ್ಜಿಸಿದಳು.

'ನೋಡಮ್ಮೋ ನಮ್ಮನೆ ಬೋರಲ್ಲಿ ನೀರಿಲ್ಲ. ನಲ್ಲಿ ನೀರು ಬತ್ತಿಲ್ಲ. ದನಕರೀಗೆ, ಕುಡಿಯ ನೀರಿಗೆ ನಾವೆಲ್ಲಿಗೋಗನೇ? ನಮ್ಮ ಪಾಲಿನ ನೀರು ನಮಿಗೆ ಕೊಟ್ರೆ ಸರಿ' ಕಾಂಗಕ್ಕ ಕಿರುಚಿದಳು.

'ನಿನ್ನ ಪಾಲಿನ ನೀರು ಯಾವುದೇ? ಊರೋರೆಲ್ಲ ನೀರಿಲ್ದೆ ಖಾಲಿ ಚರಿಗೆ ಮಡಿಕಂದು ಕುತ್ತವ್ರೆ. ಎಲ್ಲಾರಿಗೂ ನೀರು ಹಂಚಬೇಕಲ್ಲವಾ!' ಕಮಲಕ್ಕ ವಿವರಿಸಿದಳು.

'ನಾನು ಕೇಳ್ತಿರದು ನಮಿಗೆ ಬರಬೇಕಾದ ನಮ್ಮ ಪಾಲಿನ ನೀರು ಯಾಕೆ ಕೊಡ್ತಿಲ್ಲ ಅಂತ. ನೀರು ಕೊಟ್ಟೀಯಾ ಇಲ್ವಾ ಅಷ್ಟೇಳು' ಕಾಂಗಕ್ಕ ಜಿದ್ದಿಗೆ ಬಿದ್ದಳು.

'ಚರಿಗೆ ನೀರಲ್ಲಿ ಎಲ್ಲರದೂ ಪಾಲದೆ ಕಾಬುಡೇ. ಹೆಚ್ಚು-ಕಮ್ಮಿ ನೋಡಿ ಕೊಡಬೇಕಾಯ್ತದೆ ಕವ್ವಾ. ಅನಿಷ್ಟಕ್ಕೆಲ್ಲಾ ಶನೀಶ್ವರನೇ ಕಾರಣ ಅಂತ ನನ್ನ ಬೋದ್ರೆ ಯಂಗೆ?' ಕಮಲಕ್ಕನೂ ಸಿಟ್ಟಾದಳು.

'ನನ್ನ ಚರಿಗೆ ನೀರು ಹಂಚಿ ನಿನ್ನ ದೊಡ್ಡಸ್ತಿಕೆ ತೋರದು ನಾನು ಕಾಣೆನೆ. ಒಂದು ತಿಳಕಮ್ಮಿ, ನನ್ನ ಚರಿಗೆ ನನ್ನ ಹಕ್ಕು! ನನ್ನ ಚರಿಗೆ ಕಡೆ ನಿನ್ನ ಲುಕ್ಕು ಬ್ಯಾಡ' ಕಾಂಗಕ್ಕ ಬಾಯಿ ಜೋರು ಮಾಡಿದಳು. ಈ ಉಸಾಬರಿ ಬ್ಯಾಡಾಂತ ಕಮಲಕ್ಕ ಒಸಿ ಜಾಸ್ತಿ ನೀರು ಬುಟ್ಟವ್ಳಂತೆ.

ದಿನದ ಟ್ವೀಟ್

ಮುಚ್ಚಿಟ್ಟಿದ್ದೇಕೆ?




ವ್ಹಾವ್! ಹಾಗಿದ್ದರೆ, ಈ ಸಾವಿರಾರು ವಿಡಿಯೊಗಳ ವಿಷಯ ಪ್ರಜ್ವಲ್ ರೇವಣ್ಣ ಅವರ ತಂದೆಗೆ ನಾಲ್ಕೈದು ವರ್ಷಗಳ ಮೊದಲೇ ಗೊತ್ತಿತ್ತು ಎಂದಾಯಿತು. ಹಾಗಿದ್ದರೂ ಹಾಸನದಿಂದ ಅವರನ್ನು ಲೋಕಸಭಾ ಚುನಾವಣೆಯ ಅಭ್ಯರ್ಥಿಯನ್ನಾಗಿ ಮಾಡಿದರು. ಈ ಮೊದಲು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದಕ್ಕೆ, ಈ ನಾಲ್ಕೈದು ವರ್ಷಗಳಲ್ಲಿ ಇಂತಹುದೇ ಎಷ್ಟು ಪ್ರಕರಣಗಳು ನಡೆದಿರಬಹುದು ಎಂಬುದನ್ನು ಊಹಿಸಿ.

(ಪ್ರಜ್ವಲ್ ರೇವಣ್ಣ ಕುರಿತು ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದ ವಿಡಿಯೊ ತುಣುಕುಗಳು 'ನಾಲ್ಕೈದು ವರ್ಷ ಹಳೆಯವು' ಎಂಬ ಎಚ್.ಡಿ.ರೇವಣ್ಣ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಮಹಮದ್ ಜುಬೇರ್, ಸಹಸಂಸ್ಥಾಪಕ, ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಸಂಸ್ಥೆ

ಕಿಡಿನುಡಿ



ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿಯ ಹೊಸ 'ಸೂರತ್' ಸೂತ್ರ: ವಿರೋಧ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ ಬಳಿಕ ಆಮಿಷ ಅಥವಾ ಬೆದರಿಕೆ ಒಡ್ಡಿ ಅವರು ಅದನ್ನು ಹಿಂಪಡೆಯುವಂತೆ ಮಾಡುವುದು. ನಾಚಿಕೆಗೇಡು! #Indore

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಶುಕ್ರವಾರ, 30-4-1999

• **ಬೊಫೋರ್ಸ್ ಹಗರಣಕ್ಕೆ ಮತ್ತೆ ಜೀವ ಭಟ್ನಾಗರ್ ವಿರುದ್ಧ ತನಿಖೆಗೆ ಅಸ್ತು**

ನವದೆಹಲಿ, ಏ. 29 (ಪಿಟಿಐ)– ಮಾಜಿ ರಕ್ಷಣಾ ಕಾರ್ಯದರ್ಶಿ ಎಸ್.ಕೆ. ಭಟ್ನಾಗರ್ ಅವರನ್ನು ವಿಚಾರಣೆಗೆ ಗುರಿಪಡಿಸಲು ಕೇಂದ್ರದ ಅನುಮತಿ ಪಡೆಯುವುದರೊಂದಿಗೆ ಬೊಫೋರ್ಸ್ ಲಂಚ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ಕೈಗೆತ್ತಿಕೊಂಡಿರುವ ಸತ್ಯಶೋಧನಾ ಕಾರ್ಯಾಚರಣೆಗೆ ಮಹತ್ವದ ಚಾಲನೆ ದೊರೆತಿದೆ.

ಭಟ್ನಾಗರ್ ವಿರುದ್ಧ ಶೀಘ್ರವೇ ಆರೋಪ-ಪಟ್ಟಿಯೊಂದನ್ನು ಸಿಬಿಐ ಸಲ್ಲಿಸಲಿದ್ದು, ಇದು ಲಂಚ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಇಡುವ ಪ್ರಥಮ ಬಹುಮುಖ್ಯ ಹೆಜ್ಜೆ ಎಂದು ಸಿಬಿಐ ಮೂಲಗಳು ತಿಳಿಸಿವೆ.

• **ದುಡಿಮೆಗೆ ಮೈ-ಮನ ಒಡ್ಡಿದ ಬಾಲಕಾರ್ಮಿಕರು**

ಬೆಂಗಳೂರು, ಏ. 29– 'ವಿಶ್ವ ಬಾಲಕಾರ್ಮಿಕ ದಿನಾಚರಣೆ' (ಏಪ್ರಿಲ್ 30) ಮತ್ತೆ ಬಂದಿದೆ. ಆದರೆ ಬಾಲಕಾರ್ಮಿಕರ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲ.

ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ಇರುವ ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳು ಕೇವಲ ಘೋಷಣೆಗಳಾಗಿ ಉಳಿದಿವೆಯೇನೋ ಎಂಬಂತೆ, ರಾಜ್ಯದಲ್ಲಿ ಕಾಯಂ ಬಾಲಕಾರ್ಮಿಕರಾಗಿ ಜೀವನ ಕಳೆಯುತ್ತಿರುವ ಎಳೆಯರ ಸಂಖ್ಯೆಯು ಕಾರ್ಮಿಕ ಇಲಾಖೆ ವರದಿ ಪ್ರಕಾರ ಒಂದು ಲಕ್ಷ ದಾಟಿದೆ.

50 ವರ್ಷಗಳ ಹಿಂದೆ

ಮಂಗಳವಾರ, 30-4-1974

• **ಚೆಕ್‌ಪೋಸ್ಟ್ ವ್ಯವಸ್ಥೆ ಸುಧಾರಣೆಗೆ ಸಭೆ**

ಬೆಂಗಳೂರು, ಏ. 29– ರಾಜ್ಯದ ಚೆಕ್‌ಪೋಸ್ಟ್ ವ್ಯವಸ್ಥೆಯನ್ನು ಸುಧಾರಿಸಿ, ದಕ್ಷಗೊಳಿಸುವ ದಿಸೆಯಲ್ಲಿ ಚರ್ಚಿಸಲು ಸಂಬಂಧಪಟ್ಟವರ ಸಭೆಯನ್ನು ಸದ್ಯದಲ್ಲಿಯೇ ತಾವು ಕರೆಯಲಿರುವುದಾಗಿ ಅರ್ಥಮಂತ್ರಿ ಎಂ.ವೈ. ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಪ್ಲಾಸ್ಟಿಕ್ ಕೈಬಳೆಗಳ ಮೇಲೆ ವಿಧಿಸಲಾಗಿರುವ ಮಾರಾಟ ತೆರಿಗೆಯನ್ನು ರದ್ದುಗೊಳಿಸುವ ಸೂಚನೆಯನ್ನು ತಾವು ಪರಿಶೀಲಿಸುವುದಾಗಿ ಅವರು ಹೇಳಿದರು.

ತಮಗೆ ಸಂಬಂಧಿಸಿದ ಇಲಾಖೆಗಳ ಬೇಡಿಕೆ ಮೇಲಿನ ಚರ್ಚೆಗೆ ಉತ್ತರ ನೀಡಿದ ಸಚಿವರು, ಆಹಾರಧಾನ್ಯಗಳ ಮೇಲಿನ ಅತ್ಯಲ್ಪ ಮಾರಾಟ ತೆರಿಗೆ 5–6 ಕೋಟಿ ರೂಪಾಯಿ ವರಮಾನ ತರುವುದರಿಂದ, ಸದ್ಯದ ಪರಿಸ್ಥಿತಿಯಲ್ಲಿ ಅದರ ರದ್ದು ಸಾಧ್ಯವಿಲ್ಲ ಎಂದರು.

• **ನ್ಯಾಯಾಲಯಗಳಲ್ಲಿ ಎಲ್ಲ ಹಂತದಲ್ಲಿ ಕನ್ನಡ**

ಬೆಂಗಳೂರು, ಏ. 29– ಇನ್ನೆರಡು ವರ್ಷಗಳಲ್ಲಿ ಹೈಕೋರ್ಟನ್ನುಳಿದು ಇತರ ಎಲ್ಲ ಹಂತಗಳಲ್ಲಿ ಕನ್ನಡವೇ ನ್ಯಾಯಾಲಯದ ಭಾಷೆಯಾಗಲಿದೆ.

ಕಾನೂನು ಮತ್ತು ಪೌರಾಡಳಿತ ಬಾಬುಗಳ ಬೇಡಿಕೆ ಮೇಲಿನ ಚರ್ಚೆಗೆ ವಿಧಾನಸಭೆಯಲ್ಲಿ ಇಂದು ಉತ್ತರ ನೀಡಿದ ಪೌರಾಡಳಿತ ಸಚಿವ ಡಿ.ಕೆ. ನಾಯ್ಕರ್ ಅವರು, ಜನಭಾಷೆಯಲ್ಲೇ ನ್ಯಾಯದಾನ ನೀಡುವ ಬಗ್ಗೆ, ಭಾಷಾಂತರ ಆಯೋಗವು ತನ್ನ ಕೆಲಸ ಮುಗಿಸಿದ ತತ್‌ಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ಹೇಳಿ, ಇನ್ನೆರಡು ವರ್ಷಗಳಲ್ಲಿ ಅದು ಪೂರೈಕೆಯಾಗುವ ಆಶಾಭಾವನೆ ವ್ಯಕ್ತ ಮಾಡಿದರು.

ಸಂಗತ

ಬೇಕಾಗಿದೆ ಸ್ತ್ರೀಶಕ್ತಿ ಮಹಿಳಾ ಪಕ್ಷ!

ರಾಜಕೀಯವು ಪುರುಷಕೇಂದ್ರಿತ ಅಖಾಡ ಎಂಬ ನಂಬಿಕೆಯನ್ನು ಹುಸಿಗೊಳಿಸಬೇಕಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

'ಕೆರೆಗೆ ಹಾರ' ಎಂಬುದು ಜನಪದ ಕಥನ ಕವನ. ಊರ ಗೌಡ ಕೆರೆ ಕಟ್ಟಿಸುತ್ತಾನೆ. ಅಲ್ಲಿ ಒಂದು ಹನಿಯೂ ನೀರು ಬರುವುದಿಲ್ಲ. ಕೆರೆ ತುಂಬಿ ನಳನಳಿಸುವಂತೆ ಆಗಲು, ಸೊಸೆಯಾಗಿರುವ ಹೆಣ್ಣಿನ ನರಬಲಿ ಕೊಡಬೇಕು ಎಂದು ಜ್ಯೋತಿಷಿ ಪರಿಹಾರ ಹೇಳುತ್ತಾನೆ. ಕುಟುಂಬದ ಕಿರಿಯ ಸೊಸೆಯನ್ನು ಬಲಿ ಕೊಡಲು ನಿರ್ಧಾರವಾಗುತ್ತದೆ. ಸಂಗತಿಯು ಪರೋಕ್ಷವಾಗಿ ಸೊಸೆಗೆ ತಿಳಿಯುತ್ತದೆ. ಆಕೆ ಅನುಭವಿಸುವ ಸಂಕಟ, ತಲ್ಲಣ, ತಳಮಳ ಅಷ್ಟಿಷ್ಟಲ್ಲ. ಗೆಳತಿಯರ ಮುಂದೆ 'ಕೆರೆಗೆ ನನ ಹಾರ ಕೊಡ್ತಾರಂತೆ' ಎಂದು ಹೇಳುತ್ತಾ ಬಿಕ್ಕುತ್ತಾಳೆ. 'ಕೊಟ್ಟರೆ ಕೊಡಲೇಳು, ಇಟ್ಟಂಗ ಇರಬೇಕು' ಎಂದು ಗೆಳತಿಯರು ಸ್ಥಾಪಿತ ಮೌಲ್ಯಗಳ ದರ್ಶನ ಮಾಡಿಸುತ್ತಾರೆ. ಬದುಕಿ ಉಳಿಯುವ ಎಲ್ಲ ಮಾರ್ಗಗಳೂ ಮುಚ್ಚಿಹೋಗುತ್ತವೆ. ಸೊಸೆಯನ್ನು ಕೆರೆಗೆ ಇಳಿಸಿ ಹಾರವಾಗಿಸುತ್ತಾರೆ. ಆಕೆ ಸಾಯುತ್ತಾಳೆ.

ಸಂವಿಧಾನ ನೀಡಿರುವ ಪುರುಷ ಮತ್ತು ಮಹಿಳೆಯರ ನಡುವಿನ ಸಮಾನತೆಯ ಹಕ್ಕನ್ನು ರಾಜಕೀಯ ಪಕ್ಷಗಳು ನಿರರ್ಥಕಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಮಹಿಳೆಯರೇ ಮುಂದಾಗಿ ರಾಜಕೀಯ ಪಕ್ಷ ಕಟ್ಟಿ ಸ್ಪರ್ಧೆಗೆ ಇಳಿಯಬೇಕು ಎಂದು ಮಾಲತಿ ಪಟ್ಟಣಶೆಟ್ಟಿ ಅವರು ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಏ. 24). ಈ ಪತ್ರವನ್ನು ಓದಿದಾಗ, ಮೇಲಿನ ಕಥನ ಕವನ ನೆನಪಾಗಿ ಕರುಳು ಹಿಂಡಿದಂತಾಯಿತು.

ದೇಶದ ಒಟ್ಟು ಮತದಾರರಲ್ಲಿ ಅರ್ಧದಷ್ಟು ಇರುವ ಮಹಿಳೆಯರಿಗೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲು ನ್ಯಾಯಸಮ್ಮತ ಸಮಪಾಲು ನೀಡುತ್ತಿಲ್ಲ. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿಯೂ ಮಹಿಳೆಯರ ಸ್ಪರ್ಧೆಗೆ ಸೂಕ್ತ ಅವಕಾಶ ಸಿಕ್ಕಿಲ್ಲ ಎಂಬ ಕೂಗು ಇದೆ. ಆದರೆ ಅದು ಗರ್ಜನೆಯಾಗಿ ಕೇಳಿಸುತ್ತಿಲ್ಲ.

ಮಹಿಳೆಯರು ಅನುಕಂಪ ಮತ್ತು ಮೀಸಲಾತಿಗಾಗಿ ಕಾಯುತ್ತಾ ಕುಳಿತುಕೊಳ್ಳುವುದು ನೋವಿನ ಸಂಗತಿ. ಅವರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಂಘಟಿತರಾಗಿ, ತಮ್ಮ ಅಸ್ಮಿತೆಯನ್ನು ಕಾಪಾಡುವ ಮಹಿಳಾ ರಾಜಕೀಯ ಪಕ್ಷವೊಂದನ್ನು ಕಟ್ಟಬೇಕು. ಮಹಿಳಾ ಮಂಡಳ, ಮಹಿಳಾ ಸಾಹಿತ್ಯ ಸಂಘಟನೆ, ಮಹಿಳಾ ಸಮಾಜ, ಕೃಷಿ ಮಹಿಳಾ ಸಂಘಗಳು ಅಸ್ತಿತ್ವದಲ್ಲಿವೆ. ಇವುಗಳನ್ನು ಪಕ್ಷ ಕಟ್ಟುವುದಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದು. ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ದೊಡ್ಡದಾಗಿ ಬೆಳೆದಿದೆ. ಅವರು ಉತ್ಸಾಹಿಗಳು ಮತ್ತು ತಮ್ಮ ಹಕ್ಕುಗಳ ಬಗ್ಗೆ ಅರಿವುಳ್ಳವರು ಆಗಿದ್ದಾರೆ. ಅವರನ್ನು ಪಕ್ಷ ಕಟ್ಟುವ ಸಾಹಸಕ್ಕೆ ಹುರಿದುಂಬಿಸಬೇಕು. ಮಹಿಳೆಯರು ಮೂಲತಃ ಛಲವುಳ್ಳವರು. ಅಂತಃ ಜ್ಞಾನಿಗಳು. ಅದು ಈಗ ಕ್ರಿಯಾರೂಪಕ್ಕೆ ಇಳಿಯಬೇಕು.

'ಎಲ್ಲ ಮಹಿಳೆಯರು ಶೋಷಿತರು, ಮಹಿಳೆಯರೆಲ್ಲರೂ ದಲಿತರೇ' ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು. ವಿಪರೀತ ಶೋಷಣೆಯನ್ನು ಅನುಭವಿಸುವ ಕಾರ್ಮಿಕರು, ದುಡಿಮೆಗಾರರು, ಕೃಷಿಕರ ಇನ್ನೊಂದು ಬಹುಸಂಖ್ಯಾತ ವರ್ಗ ದೇಶದಲ್ಲಿದೆ. ಅವರನ್ನೂ ಒಳಗೊಂಡರೆ ಮಹಿಳಾ ಪಕ್ಷಕ್ಕೆ ಖಂಡಿತ ಹೆಚ್ಚಿನ ಬಲ ಬರುತ್ತದೆ. ಈ ಬಗ್ಗೆ ಕೂಡ ಚಿಂತನೆ ನಡೆಯಬೇಕು.

ಪ್ರಸಕ್ತ 17ನೇ ಲೋಕಸಭೆಯಲ್ಲಿ 543 ಸದಸ್ಯರ ಪೈಕಿ 78 ಮಹಿಳಾ ಸದಸ್ಯರಿದ್ದಾರೆ. ಹಿಂದಿನ ಎಲ್ಲಾ ಲೋಕಸಭೆಗಳಲ್ಲಿಯೂ ಮಹಿಳಾ ಪ್ರಾತಿನಿಧ್ಯ ಇನ್ನೂ ಕಡಿಮೆ ಇತ್ತು. ರಾಜ್ಯಸಭೆಯಲ್ಲಿಯೂ ತಾರತಮ್ಯ ಎದ್ದು ಕಾಣುತ್ತದೆ. ಪ್ರಸಕ್ತ 224 ರಾಜ್ಯಸಭಾ ಸದಸ್ಯರಲ್ಲಿ 24 ಮಹಿಳೆಯರು ಮಾತ್ರ ಇದ್ದಾರೆ. ದೇಶದ ವಿಧಾನಸಭೆಗಳಲ್ಲಿಯೂ ಚಿತ್ರಣ ಇದಕ್ಕಿಂತ ಭಿನ್ನವಾಗಿಲ್ಲ. ನೆಪಕ್ಕೆ ಒಬ್ಬಿಬ್ಬರು ಮಹಿಳೆಯರಿಗೆ ಸಚಿವ ಸ್ಥಾನ ಸಿಗುತ್ತದೆ.

ಸಾರ್ವಜನಿಕ ಸಾರಿಗೆ ಬಸ್ಸುಗಳಲ್ಲಿ ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಮತ್ತು ಮಹಿಳೆಯರಿಗೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ಆಸನ ನಿಗದಿಪಡಿಸಿ ಫಲಕಗಳನ್ನು ಬರೆದಿರುತ್ತಾರೆ. 'ಬಸ್ಸುಗಳಲ್ಲಿ ಸ್ಥಳ ನಿಗದಿಪಡಿಸಿ ನಮಗೆ ಕುಳಿತುಕೊಳ್ಳಲು ನೆರವಾಗುವುದು ಬೇಡ, ಇದು ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ನಾವು ಹೋರಾಟ ಮಾಡಿಯೇ ಸ್ಥಳ ಹಿಡಿದುಕೊಳ್ಳುತ್ತೇವೆ' ಎಂದು ಕೇರಳದಲ್ಲಿ ಕೆಲವು ವರ್ಷಗಳ ಹಿಂದೆ ಮಹಿಳೆಯರು ಪ್ರತಿಭಟನೆ ಮಾಡಿದ್ದರು. ಮಹಿಳಾ ಸಾಹಿತಿಯೊಬ್ಬರು ಮಂಗಳೂರಿನಲ್ಲಿ ಇದೇ ಬಗೆಯ ಹೋರಾಟವನ್ನು ಮಾಡಿ ಪತ್ರಿಕೆಗಳಲ್ಲಿಯೂ ಬರೆದು ಗಮನ ಸೆಳೆದಿದ್ದರು. ಇದಕ್ಕೆ ಎಷ್ಟು ಮಹಿಳೆಯರ ಸಮ್ಮತಿ ಇರುವುದೋ ತಿಳಿಯದು. ಆದರೆ ಹಕ್ಕು ಪಡೆಯುವುದಕ್ಕೆ ಅನುಕಂಪ, ಮೀಸಲಾತಿ ಪರಿಹಾರವಲ್ಲ, ಹೋರಾಟವೇ ಸಮರ್ಪಕ ಮಾರ್ಗ ಎಂಬ ದಿಸೆಯಲ್ಲಿ ಈ ಮಹಿಳೆಯರು ನಡೆಸಿದ ಪ್ರತಿಭಟನೆಯು ಬೆಳಕಿನ ಗೆರೆಯಂತೆ ಕಾಣುತ್ತದೆ.



ಮಹಿಳೆಯರು ಶಿಕ್ಷಣ ರಂಗದಲ್ಲಿ, ಪರಿಶ್ರಮದ ದುಡಿಮೆಯಲ್ಲಿ, ಕುಟುಂಬ ನಿರ್ವಹಣೆಯಲ್ಲಿ ಎಲ್ಲಕ್ಕಿಂತಲೂ ಮಿಗಿಲಾಗಿ ಸಹನೆ ಮತ್ತು ಜಾಣ್ಮೆಯಿಂದ ಬಾಳು ರೂಪಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ. ಆದರೆ ಅವರು ರಾಜಕೀಯವಾಗಿ ಒಂದು ಪ್ರಬಲ ಶಕ್ತಿಯಾಗಿ ಬೆಳೆದುನಿಂತಿಲ್ಲ. ರಾಜಕೀಯ ಪಕ್ಷಗಳ ನಾಯಕರು ಚುನಾವಣೆ ಪ್ರಚಾರದ ವೇದಿಕೆ ಮೇಲೆ ನಿಂತು ಸ್ತ್ರೀ ಸಂಕುಲದ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಮಾತುಗಳನ್ನು ಆಡುತ್ತಾರೆ. ಸೂಕ್ಷ್ಮತೆ ಕಳೆದುಕೊಂಡ ಈ ಮಾತುಗಳು ಕೆಲವೊಮ್ಮೆ ಎಲ್ಲೆ ಮೀರಿರುತ್ತವೆ. ಅಂತಹವರಿಗೆ ಮಹಿಳೆಯರು ರಾಜಕೀಯದ ಮೂಲಕವೇ ಉತ್ತರ ಕೊಡುವ ವೇದಿಕೆ ಸೃಷ್ಟಿಯಾಗಬೇಕು.

ರಾಜಕೀಯವು ಪುರುಷಕೇಂದ್ರಿತ ಅಖಾಡ ಎಂದು ನಂಬಿಸಲಾಗಿದೆ. ಈ ನಂಬಿಕೆಯನ್ನು ಮಹಿಳೆಯರು ಹುಸಿಗೊಳಿಸಬೇಕಾಗಿದೆ.

ವಾಚಕರ ವಾಣಿ

ಶವಸಂಸ್ಕಾರಕ್ಕೆ ದೇಣಿಗೆ ಷರತ್ತು ಸರಿಯಲ್ಲ

ಗೌರಿಬಿದನೂರಿನಲ್ಲಿ ದೇಗುಲಕ್ಕೆ ದೇಣಿಗೆ ನೀಡಲಿಲ್ಲವೆಂಬ ಕಾರಣಕ್ಕೆ ದಲಿತ ಮಹಿಳೆಯ ಶವಸಂಸ್ಕಾರಕ್ಕೆ ಸಮುದಾಯದ ಮುಖಂಡರು ಅಡ್ಡಿಪಡಿಸಿದ್ದನ್ನು (ಪ್ರ.ವಾ., ಏ. 29) ತಿಳಿದು ಅಚ್ಚರಿಯಾಯಿತು. ಒಬ್ಬ ವ್ಯಕ್ತಿಯ ಶವಸಂಸ್ಕಾರಕ್ಕೆ ಏನಿಲ್ಲ ಅಂದರೂ ಕನಿಷ್ಠ ಹತ್ತು ಸಾವಿರ ರೂಪಾಯಿ ಖರ್ಚು ಬರುತ್ತದೆ. ಅದನ್ನು ಹೊಂದಿಸುವುದೇ ಕೆಲವರಿಗೆ ಕಷ್ಟದ ವಿಷಯವಾಗಿರುವಾಗ, ಇನ್ನು ದೇಗುಲಕ್ಕೆ ದೇಣಿಗೆಯನ್ನೂ ನೀಡಬೇಕೆಂಬುದು ಅತಿಶಯವಲ್ಲವೇ? ಅಲ್ಲದೆ ದೇಗುಲಕ್ಕೆ ದೇಣಿಗೆಯನ್ನು ಶವಸಂಸ್ಕಾರದ ಸಂದರ್ಭದಲ್ಲಿ ವಸೂಲು ಮಾಡುವ ಪದ್ಧತಿ ವರ್ಷಗಳಿಂದಲೂ ಇಲ್ಲಿ ಪಾಲನೆಯಾಗುತ್ತಿರುವುದು ಸರಿಯಲ್ಲ. ದೇಣಿಗೆ ಪಡೆಯಲೇಬೇಕಿದ್ದರೆ ಮದುವೆಯಂತಹ ಒಳ್ಳೆಯ ಕಾರ್ಯಗಳು ನಡೆಯುವಾಗ ಸಂಗ್ರಹಿಸುವುದು ಸಮಂಜಸ. ಅಲ್ಲದೆ, ಯಾವುದೇ ಒಂದು ಕುಟುಂಬಕ್ಕೆ ದೇಣಿಗೆ ಕೊಡುವ ಸಾಮರ್ಥ್ಯ ಇದೆಯೇ ಎಂಬುದನ್ನು ಊರಿನ ಹಿರಿಯರು ತಿಳಿದು ನಂತರ ದೇಣಿಗೆ ಪಡೆಯುವುದು ಸೂಕ್ತ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸಿಇಟಿ ಗೊಂದಲ: ಮರುಪರೀಕ್ಷೆ ಸೂಕ್ತ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಬೇಜವಾಬ್ದಾರಿತನದಿಂದಾಗಿ ಈ ಸಲದ ಸಿಇಟಿಯು ಗೊಂದಲದ ಗೂಡಾಗಿದೆ. ಲಕ್ಷಾಂತರ ಮಕ್ಕಳ ಶೈಕ್ಷಣಿಕ ಜೀವನದ ಜೊತೆ ಆಟವಾಡುತ್ತಿರುವ ಪ್ರಾಧಿಕಾರವು ಪಠ್ಯದಲ್ಲಿ ಇಲ್ಲದ ಐವತ್ತಕ್ಕೂ ಹೆಚ್ಚು ಪ್ರಶ್ನೆಗಳನ್ನು ನೀಡಿದ್ದರಿಂದ, ಪ್ರತಿಭಾವಂತ ಮಕ್ಕಳು ತಮ್ಮ ನಿಜವಾದ ರ್‍ಯಾಂಕಿಂಗ್‌ನಿಂದ ವಂಚಿತರಾಗುವಂತೆ ಆಗಿದೆ. ಪರೀಕ್ಷೆಯಲ್ಲಿ ಪಠ್ಯೇತರ ಪ್ರಶ್ನೆಗಳನ್ನು ನೋಡಿ ದಿಗ್ಭ್ರಮೆಗೊಂಡು ಗೊಂದಲಕ್ಕೀಡಾಗಿ, ಅರ್ಧದಲ್ಲೇ ಕೊಠಡಿಯಿಂದ ಹೊರಬಂದ ಮಕ್ಕಳು ಬಹಳಷ್ಟು ಮಂದಿ ಇದ್ದಾರೆ.

ಈ ನಡುವೆ, ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಹೊರಗಿಟ್ಟು ಉಳಿದ ಪ್ರಶ್ನೆಗಳನ್ನು ಮಾತ್ರ ಮೌಲ್ಯಮಾಪನ ಮಾಡಲು ಉನ್ನತ ಶಿಕ್ಷಣ ಇಲಾಖೆಯು ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದೆ. ಆದರೆ ಇದರಿಂದ ಮಕ್ಕಳ ನಿಜವಾದ ಪ್ರತಿಭೆಯನ್ನು ಅರಿಯಲು ಸಾಧ್ಯವೇ? ಹಾಗಾಗಿ, ತಡವಾದರೂ ಸರಿಯೇ ಮರುಪರೀಕ್ಷೆ ನಡೆಸಿ ಮಕ್ಕಳ ನಿಜವಾದ ಪ್ರತಿಭೆಯನ್ನು ಅಳೆಯಬೇಕಿದೆ. ಹಾಗಾಗದಿದ್ದಲ್ಲಿ ಮಕ್ಕಳು, ಪೋಷಕರು ಕೋರ್ಟ್ ಮೆಟ್ಟಿಲೇರುವ ಸನ್ನಿವೇಶ ಬಂದು, ಪ್ರಕ್ರಿಯೆ ತಡವಾಗಬಹುದು. ಅದರಿಂದಾಗಿ ಸರ್ಕಾರ ಮತ್ತಷ್ಟು ಮುಜುಗರಕ್ಕೆ ಒಳಗಾಗುವ ಸಂದರ್ಭ ಬರಬಹುದು.

ದೇವರಹಳ್ಳಿ ಲೋಕೇಶ್, ಪಾಂಡವಪುರ

ಲೈಂಗಿಕ ದೌರ್ಜನ್ಯ ಆರೋಪ: ತಾರ್ಕಿಕ ಅಂತ್ಯ ಕಾಣಲಿ

ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದು ತತ್ಸಂಬಂಧಿತ ವಿಡಿಯೊ ತುಣುಕುಗಳು ಪೆನ್‌ಡ್ರೈವ್ ಮುಖಾಂತರ ಸಾರ್ವಜನಿಕರ ನಡುವೆ ಹರಿದಾಡುತ್ತಿವೆ. ಜೊತೆಗೆ ಎಫ್‌ಐಆರ್ ದಾಖಲಾಗಿದ್ದು ತನಿಖೆ ಆರಂಭವಾಗಿದೆ ಎಂದು ವರದಿಯಾಗಿದೆ. ಇಂತಹ ಆರೋಪಗಳು ಅಥವಾ ಕೃತ್ಯಗಳು ಆಗಾಗ ಕೇಳಿಬರುತ್ತವೆ. ಆರೋಪಿಗಳು 'ಈ ವಿಡಿಯೊದಲ್ಲಿ ಇರುವುದು ನಾನಲ್ಲ, ತಂತ್ರಜ್ಞಾನದ ಕೈಚಳಕ...' ಎಂದೆಲ್ಲ ಹೇಳಿ ತಪ್ಪಿಸಿಕೊಳ್ಳುವ ಯತ್ನ ಮಾಡುತ್ತಾರೆ. ದಿನಗಳು ಉರುಳಿದಂತೆ ಅಂತಿಮವಾಗಿ ಏನೂ ಆಗೇ ಇಲ್ಲ ಎಂಬಂತೆ ಆರೋಪಿಗಳು ನಿರಾಳರಾಗುತ್ತಾರೆ ಮತ್ತು ಜನ ಸಹ ಮರೆತು ಸುಮ್ಮನಾಗುತ್ತಾರೆ.

ಇಂತಹ ಗಂಭೀರ ಆರೋಪ ಕೇಳಿಬಂದಾಗ ಪೊಲೀಸರು ಮತ್ತು ನ್ಯಾಯಾಂಗವು ಪ್ರಕರಣವನ್ನು ಒಂದು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು. ಆರೋಪ ಸಾಬೀತಾದರೆ ಕಠಿಣ ಶಿಕ್ಷೆ ನೀಡಬೇಕು ಇಲ್ಲವಾದರೆ ಆರೋಪದಿಂದ ವ್ಯಕ್ತಿಯನ್ನು ಮುಕ್ತಗೊಳಿಸಬೇಕು. ಅನೇಕ ಬಾರಿ ಇವೆರಡೂ ಆಗದೆ ಪ್ರಕರಣ ನಿಂತಲ್ಲೇ ನಿಲ್ಲುವಂತೆ ಆಗುತ್ತದೆ. ಇದು ಸರಿಯಲ್ಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನ್ಯಾಯ ಸಿಗಲಿ, ಕಠಿಣ ಕ್ರಮ ಜರುಗಲಿ

ಲೈಂಗಿಕ ಕಿರುಕುಳ ಆರೋಪದ ಮೇಲೆ ಎಚ್.ಡಿ.ರೇವಣ್ಣ ಮತ್ತು ಅವರ ಪುತ್ರ ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅಸಹಾಯಕ ಹೆಣ್ಣುಮಕ್ಕಳ ಮೇಲೆ ಈ ರೀತಿಯ ದೌರ್ಜನ್ಯ ನಡೆಸಿರುವುದು ನಿಜವೇ ಆಗಿದ್ದರೆ ಅದು ಅಸಹನೀಯ. 'ಉಪ್ಪು ತಿಂದವರು ನೀರು ಕುಡಿಯಲೇಬೇಕು' ಎಂದಿದ್ದಾರೆ ರೇವಣ್ಣ ಅವರ ಸಹೋದರ ಎಚ್.ಡಿ.ಕುಮಾರಸ್ವಾಮಿ. ಅಲ್ಲಿಗೆ, ಗೌಡರ ಮನೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾದಂತಾಗಿದೆ. ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಸಿಗಲಿ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಲಿ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಮೊದಲ ಮತ: ನಿರಾಸೆ ಮೂಡಿಸಿದ್ದೇಕೆ?

2024ರ ಲೋಕಸಭಾ ಚುನಾವಣೆಯಲ್ಲಿ ಸುಮಾರು 1.85 ಕೋಟಿ ಹೊಸ ಮತದಾರರು ತಮ್ಮ ಮೊದಲ ಮತ ಚಲಾವಣೆ ಮಾಡಲಿದ್ದಾರೆ ಎಂಬುದು ಸಂತೋಷದ ವಿಷಯ. ನನ್ನ ಮಕ್ಕಳೂ ಸೇರಿದಂತೆ ಅನೇಕ ಯುವಕ, ಯುವತಿಯರು ಚುನಾವಣಾ ಆಯೋಗದ ಜಾಲತಾಣದಲ್ಲಿ ಆನ್‌ಲೈನ್ ಮೂಲಕ ಪೋಷಕರ ಎಪಿಕ್ ಕಾರ್ಡಿನ ಸಂಖ್ಯೆ ಜೋಡಿಸಿ ತಮ್ಮ ಹೆಸರನ್ನು ನೋಂದಣಿ ಮಾಡಿದ್ದಾರೆ. ಅರ್ಜಿ ನೋಂದಣಿ ಆಗಿ ಸ್ವೀಕೃತಿ ಸಂಖ್ಯೆ ಪಡೆದು ಕಾತರದಿಂದ ಕಾಯುತ್ತಿದ್ದರೂ ವೋಟರ್ ಐ.ಡಿ ಕಾರ್ಡ್ ಅಥವಾ ಚುನಾವಣಾ ಪಟ್ಟಿಯಲ್ಲಿ ತಮ್ಮ ಹೆಸರು ಕಾಣದೆ ನಿರಾಶರಾಗಿದ್ದಾರೆ. ನಾನು ಮತ ಹಾಕಲು ಹೋದ ಮತಗಟ್ಟೆಯಲ್ಲಿ ಚುನಾವಣಾ ಅಧಿಕಾರಿಯನ್ನು ಈ ಬಗ್ಗೆ ವಿಚಾರಿಸಿದಾಗ 'ಗೊತ್ತಿಲ್ಲ ಸರ್, ನನ್ನ ಮಗಳೂ ಮೊದಲನೇ ಬಾರಿ ಮತ ಹಾಕಲು ನೋಂದಾಯಿಸಿದ್ದಳು, ಆದರೆ ಅವಳ ಹೆಸರೂ ಇಲ್ಲ, ಎಪಿಕ್ ಕಾರ್ಡ್ ಕೂಡ ಬಂದಿಲ್ಲ' ಎಂದರು.

ವೋಟ್ ಹಾಕುವಂತೆ ಪ್ರೋತ್ಸಾಹಿಸುವ ರೀತಿಯಲ್ಲಿಯೇ ಆಯೋಗವು ನೋಂದಣಿ ಪ್ರಕ್ರಿಯೆಯ ಬಗ್ಗೆಯೂ ಹೆಚ್ಚು ಗಮನ ನೀಡಬೇಕಲ್ಲವೇ? ಆಧಾರ್ ಕಾರ್ಡ್ ಸಂಖ್ಯೆಯ ಬ್ಯಾಕ್‌ಗ್ರೌಂಡ್ ವೆರಿಫಿಕೇಷನ್ ಆಧಾರದ ಮೇಲೆ ಅನೇಕ ಸರ್ಕಾರಿ ಸೇವೆಗಳನ್ನು ಸೇವಾ ಸಿಂಧು ಜಾಲತಾಣದಲ್ಲಿ ಈಗಾಗಲೇ ವರ್ಷಗಳಿಂದ ಸರ್ಕಾರ ನೀಡುತ್ತಾ ಬಂದಿದೆ. ಇದೇ ಮಾದರಿಯಲ್ಲಿ ಚುನಾವಣಾ ಆಯೋಗ ಕೂಡ ತನ್ನ ಜಾಲತಾಣದಲ್ಲೇ ಆಧಾರ್ ಸಂಖ್ಯೆ ಆಧಾರದ ಮೇಲೆ ವೋಟರ್ ಐ.ಡಿ ಕಾರ್ಡ್ ಕೊಡುವುದು ದೊಡ್ಡ ಸವಾಲೇನಲ್ಲ.

ಸುರೇಶ ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಳ್ಳಷ್ಟೂ ಹೊಂದಾಣಿಕೆ ಮಾಡಿಕೊಳ್ಳದ ಜನಾನುರಾಗಿ ನಾಯಕ



● ಪಿ.ಜಿ.ಆರ್. ಸಿಂಧ್ಯ



ವೈಯಕ್ತಿಕವಾಗಿ, ವೈಚಾರಿಕವಾಗಿ ಅವಮಾನವಾದ ಸ್ಥಳದಲ್ಲಿ ಶ್ರೀನಿವಾಸ ಪ್ರಸಾದ್ ಒಂದೇ ಒಂದು ಕ್ಷಣವೂ ನಿಲ್ಲುತ್ತಿರಲಿಲ್ಲ. ಆಗ ಪ್ರಧಾನಿಯಾಗಿದ್ದ ದೇವೇಗೌಡರೊಂದಿಗಿನ ಸಂಘರ್ಷವೂ ತಮ್ಮ ಸಮುದಾಯದವರಿಗೆ ಟಿಕೆಟ್ ನೀಡಿಲ್ಲ ಎಂಬುದಕ್ಕೇ ಆಗಿರುತಿತ್ತು. ಹಿಂದಿನಿಂದಲೂ ದೇವೇಗೌಡರ ಬಗ್ಗೆ ವೈಚಾರಿಕ ವಿರೋಧ ಹೊಂದಿದ್ದ ಪ್ರಸಾದ್, ಕೊನೆಯವರೆಗೂ ಅವರತ್ತ ತಿರುಗಿಯೂ ನೋಡಲಿಲ್ಲ. ಗೌರವಕ್ಕೆ ಚ್ಯುತಿ ಬಂದಾಗ ಸಿದ್ದರಾಮಯ್ಯ ಅವರಿಂದಲೂ ಪ್ರಸಾದ್ ದೂರವಾದರು...

1999ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ, ಆಗ ಜನತಾದಳದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಎಚ್.ಡಿ. ದೇವೇಗೌಡ ಅವರೊಂದಿಗೆ, ಸಂಸದೀಯ ಮಂಡಳಿ ಸದಸ್ಯರಾಗಿದ್ದ ಪ್ರಸಾದ್ ಟಿಕೆಟ್ ವಿಚಾರದಲ್ಲಿ ಸಂಘರ್ಷಕ್ಕೆ ಬಿದ್ದರು. ಪೆರಿಕಲ್ ಮಲ್ಲಪ್ಪ ಸೇರಿದಂತೆ ಮೂರು ಜನರಿಗೆ ಟಿಕೆಟ್ ನೀಡಬೇಕು ಎಂದು ಪ್ರಸಾದ್ ಹಟ ಹಿಡಿದರು. ದೇವೇಗೌಡರು ಟಿಕೆಟ್ ನೀಡಲು ಸಾಧ್ಯವೇ ಇಲ್ಲ ಎಂದಾಗ, ಅವರ ವಿರುದ್ಧ ಕಟುವಾಗಿ ಮಾತನಾಡಿದ್ದರು. ಸಮುದಾಯದ ಬಗ್ಗೆ ಧ್ವನಿ ಎತ್ತಿದ್ದರು. ಆ ಸನ್ನಿವೇಶವನ್ನು ಇಂದಿಗೂ ನನಗೆ ಮರೆಯಲು ಸಾಧ್ಯವಿಲ್ಲ. ಅವರ ಅನುಯಾಯಿಗಳನ್ನು ಬೆಳೆಸಲು ಪ್ರಸಾದ್ ಅಂದು, ಎಂದೂ ಹೋರಾಡಿದ್ದರು.

ಪ್ರಸಾದ್ ಎಂದಿಗೂ ದ್ವೇಷದ ರಾಜಕಾರಣ ಮಾಡಿಲ್ಲ, ಪ್ರೀತಿಯ ರಾಜಕಾರಣವನ್ನೇ ಮಾಡುತ್ತಿದ್ದರು. ರಾಜಕೀಯವಾಗಿ ಅವರ ವಿಚಾರಗಳನ್ನು ಒಪ್ಪದವರು, ಅವಕಾಶ ಕೊಡದವರನ್ನೂ ಅವರು ದ್ವೇಷಿಸುತ್ತಿರಲಿಲ್ಲ. ಪಕ್ಷದ ಆಧಾರದಲ್ಲಿ ಅವರು ಯಾರನ್ನೂ ದ್ವೇಷ ಮಾಡುತ್ತಿರಲಿಲ್ಲ. ಮುಂದೆ ಅಲ್ಲ, ಹಿಂದೆಯೂ ಯಾವುದೇ ಸಮುದಾಯವನ್ನು ಅವರು ಟೀಕೆ ಮಾಡುತ್ತಿರಲಿಲ್ಲ.

ಸಿದ್ದರಾಮಯ್ಯ ಅವರ ಸಚಿವರ ಸಂಪುಟದಲ್ಲಿ ಕಂದಾಯ ಸಚಿವರಾಗಿದ್ದಾಗ ಅವರ ಗೌರವಕ್ಕೆ ಚ್ಯುತಿ ಬಂತು ಎಂದು ಅವರಿಂದ ದೂರವಾದರೇ ಹೊರತು ದ್ವೇಷದಿಂದಲ್ಲ. ಕೊನೆಗೆ, ಸಿದ್ದರಾಮಯ್ಯ ಅವರೇ ದೊಡ್ಡ ಮನಸ್ಸು ಮಾಡಿ ಹಳೆಯ ಸ್ನೇಹವನ್ನೆಲ್ಲ ಕುದುರಿಸಿಕೊಂಡಿದ್ದು ಒಳ್ಳೆಯದೇ ಆಯಿತು. ಪ್ರಸಾದ್ ಆತ್ಮಕ್ಕೆ ಸ್ವಲ್ಪ ಶಾಂತಿ ಸಿಕ್ಕಿತು ಎನಿಸುತ್ತದೆ.

ಬಾಬಾಸಾಹೇಬ್ ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳ ಕುರಿತು ಬರೆಯುವವರು, ಭಾಷಣ ಮಾಡುವವರು ಬಹಳ. ಆದರೆ, ಆ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದಂತಹ ವ್ಯಕ್ತಿ ಪ್ರಸಾದ್. ಆ ವಿಚಾರದಲ್ಲಿ ಅವರು ಕೊನೆಯ ದಿನಗಳವರೆಗೂ ಎಳ್ಳಷ್ಟೂ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ.

1970–80ರ ದಶಕದಲ್ಲಿ ಬಹಳ ಜನ ವಿದ್ಯಾರ್ಥಿ ಮುಖಂಡರು ಸಾರ್ವಜನಿಕ ಜೀವನಕ್ಕೆ ಪ್ರವೇಶ ಮಾಡಿದರು. ಅದರಲ್ಲಿ ಬಹಳ ಪ್ರಮುಖವಾಗಿ ಯಾವುದೇ ಕಳಂಕ ಇಲ್ಲದಂತೆ, ಜನನಾಯಕರಾಗಿ ಬೆಳೆದ ನೇತಾರರಲ್ಲಿ ಶ್ರೀನಿವಾಸ ಪ್ರಸಾದ್ ಅವರು ಮೊದಲಿಗರು. ನಾನು ಅವರನ್ನು ಪ್ರಥಮವಾಗಿ ಭೇಟಿ ಮಾಡಿದ್ದು 1974ರಲ್ಲಿ ಮೈಸೂರಿನ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ. ಪ್ರಸಾದ್ ಡಿಎಂಕೆ ಪಕ್ಷದಿಂದ ಸ್ಪರ್ಧೆ ಮಾಡಿದ್ದರು. ನಾನು ಆಗ ಭಾರತೀಯ ಜನ ಸಂಘದಲ್ಲಿದ್ದೆ. ನಾನು ಆಗತಾನೇ ಎಂಜಿನಿಯರಿಂಗ್ ಮುಗಿಸಿ ಬಂದಿದ್ದೆ. ಪ್ರಸಾದ್ ಡಿಎಂಕೆ ಪಾರ್ಟಿಯಿಂದ ನಿಂತಿದ್ದು ನಮಗೆಲ್ಲ ಆಶ್ಚರ್ಯ ತಂದಿತ್ತು. ಆದರೆ, ಅವರು ಗಣನೀಯವಾಗಿ ಮತಗಳನ್ನು ಪಡೆದರೂ ಸೋತರು. ವೆಂಕಟಲಿಂಗಯ್ಯ ಅವರು ಸಂಸ್ಥಾ ಕಾಂಗ್ರೆಸ್‌ನಿಂದ ಆ ಉಪ ಚುನಾವಣೆಯಲ್ಲಿ ಗೆದ್ದರು.

1974–75ರಲ್ಲಿ ದೇಶದಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಜನಾಂದೋಲನ ಪ್ರಾರಂಭವಾಯಿತು. ಮೈಸೂರಿನಲ್ಲಿ ಪ. ಮಲ್ಲೇಶ್, ಪ್ರೊ. ನಂಜುಂಡಸ್ವಾಮಿ, ರಾಜಶೇಖರ ಕೋಟಿ ಅವರೆಲ್ಲ ಆಂದೋಲನದಲ್ಲಿ ಭಾಗವಹಿಸಿದ್ದರು. ಇವರುಗಳ ಪೈಕಿ ಶ್ರೀನಿವಾಸ ಪ್ರಸಾದ್ ಅವರು ಬಹಳ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅವರು ಒಂದು ದಿನದ ಮಟ್ಟಿಗೆ ಬಂಧನಕ್ಕೂ ಒಳಗಾಗಿದ್ದರು. ಜೆಪಿ ಹಾಗೂ ಆರ್‌ಎಸ್‌ಎಸ್ ಪರವಾಗಿದ್ದ ಜನರು ಭೂಗತವಾಗಿ ಪ್ರಕಟ ಮಾಡುತ್ತಿದ್ದ 'ಕಹಳೆ' ಎಂಬ ಪತ್ರಿಕೆಯನ್ನು ಪ್ರಸಾದ್ ಹಂಚುತ್ತಿದ್ದರು. ಮೈಸೂರಿನಲ್ಲಿದ್ದ ಆರ್‌ಎಸ್‌ಎಸ್ ಮುಖಂಡ ವೆಂಕಟರಾಮ್ ಅವರ ಪ್ರಭಾವ ಪ್ರಸಾದ್ ಅವರ ಮೇಲಿತ್ತು. ಪ್ರಸಾದ್ ಅವರು ಆರ್‌ಎಸ್‌ಎಸ್ ಸಿದ್ಧಾಂತವನ್ನು ಒಪ್ಪುತ್ತಿರಲಿಲ್ಲ. ಕೊನೆಯವರೆಗೂ ಒಪ್ಪಲಿಲ್ಲ. ಆದರೆ, ಮುಖಂಡರ ಜೊತೆ ಸಂಪರ್ಕವಿತ್ತು. ಹೀಗಾಗಿಯೇ ಅವರು ಜೆಪಿ ಜನಾಂದೋಲನದಲ್ಲಿ ಭಾಗವಹಿಸಿದ್ದರು. ಬಸವಲಿಂಗಪ್ಪ ಅವರ ದೊಡ್ಡ ಅಭಿಮಾನಿ ಪ್ರಸಾದ್. ಬೂಸಾ ಚಳವಳಿ ಸಂದರ್ಭದಲ್ಲಿ ಬಸವಲಿಂಗಪ್ಪ ಅವರ ಪರವಾಗಿ ಮೊದಲನೆಯವರಾಗಿ ನಿಂತದ್ದೇ ಅವರು.

ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ ಅವರ ಸಂಪರ್ಕದಲ್ಲಿದ್ದ ಪ್ರಸಾದ್ ಅವರು, ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದರು. ನಂತರದ ದಿನಗಳಲ್ಲಿ ಅವರು ಜನತಾ ಪಕ್ಷಕ್ಕೆ ಬಂದರು. 1977ರಿಂದ 1978ರಲ್ಲಿ ಯುವ ಜನತಾ ಪಕ್ಷದ ಉಪಾಧ್ಯಕ್ಷರಾಗಿದ್ದ ಪ್ರಸಾದ್ ಅವರು, ರಾಜ್ಯದಾದ್ಯಂತ ಪ್ರವಾಸ ಮಾಡಿದ್ದರು. ಯುವ ಜನತಾ ಪಕ್ಷದ ಅಧ್ಯಕ್ಷನಾಗಿದ್ದ ನಾನು ಅವರೊಂದಿಗೆ ಇಡೀ ರಾಜ್ಯ ಪ್ರವಾಸ ಮಾಡಿದ್ದೆ. 1978ರಲ್ಲಿ ಮೈಸೂರಿನಲ್ಲಿ ವಿಧಾನಸಭೆಯ ಮೀಸಲು ಕ್ಷೇತ್ರದಲ್ಲಿ ಪ್ರಸಾದ್ ಸ್ಪರ್ಧಿಸಿ, ಸೋತರು.

1980ರಲ್ಲಿ ಲೋಕಸಭೆ ವಿಸರ್ಜನೆಯಾಯಿತು. ಜನತಾ ಪಕ್ಷದ ಮುಖಂಡರಲ್ಲಿ ಭಿನ್ನಾಭಿಪ್ರಾಯವಿತ್ತು. ಆರ್‌ಎಸ್‌ಎಸ್ ಪರವಾಗಿ ಇರುವವರು ಒಂದು ಕಡೆ ಇರಲಿ, ಬೇರೆಯವರು ಇನ್ನೊಂದು ಕಡೆಯಾಗಲಿ ಎಂದಾಯಿತು. ಆಗ ಭಾರತೀಯ ಜನತಾ ಪಕ್ಷ (ಬಿಜೆಪಿ) ಸ್ಥಾಪನೆಯಾಯಿತು. ಆ ಸಂದರ್ಭದಲ್ಲಿ ಪ್ರಸಾದ್ ಅವರು ವೀರೇಂದ್ರ ಪಾಟೀಲ ಅವರೊಂದಿಗೆ ಕಾಂಗ್ರೆಸ್ ಸೇರಿದರು. 1980ರಲ್ಲಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಅವರು ಗೆದ್ದರು. ಯುವ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಾಗ ಇವತ್ತಿನ ಉಪ ಮುಖ್ಯಮಂತ್ರಿಯವರಿಂದ ಹಿಡಿದು, ಎಚ್.ಎಂ. ರೇವಣ್ಣ, ರಾಮಲಿಂಗಾರೆಡ್ಡಿ ಅವರನ್ನೆಲ್ಲ ಗುರುತಿಸಿ, ಬೆಳೆಸಿದರು.

ಪ್ರಸಾದ್ ಅವರ ಪ್ರತಿಭೆಯನ್ನು ಸರಿಯಾಗಿ ಗುರುತಿಸಿ ಪ್ರೋತ್ಸಾಹ ಕೊಟ್ಟಿದ್ದರೆ, ರಾಷ್ಟ್ರಮಟ್ಟದಲ್ಲಿ ಅವರು ಅತ್ಯಂತ ಪ್ರಭಾವಿ ನಾಯಕರಾಗಿರುತ್ತಿದ್ದರು. ಅವರಿಗೆ ಸಿಗಬೇಕಾದ ಗೌರವ– ಸ್ಥಾನ ಸಿಗಲಿಲ್ಲ. ಅವರಿಗೆ ತೊಂದರೆ ಕೊಟ್ಟವರೇ ಜಾಸ್ತಿ. ಅಧಿಕಾರ ಕೊಡದಿರುವುದು, ಟಿಕೆಟ್ ಕೊಡದಿರುವುದು... ಹೀಗೆ ಸಹಾಯ ಮಾಡದವರೇ ಹೆಚ್ಚು. 10–20 ವರ್ಷ ಅವರು ದುಡಿದ ಮೇಲೆ ಸಮತಾ ಪಕ್ಷದಿಂದ ಎನ್‌ಡಿಎ ನೇತೃತ್ವದ ವಾಜಪೇಯಿ ಸರ್ಕಾರದಲ್ಲಿ ಅವರು ಕೇಂದ್ರದ ಸಚಿವರಾದರು.

ಒಂದು ಗ್ಯಾಸ್ ಏಜೆನ್ಸಿ ಹೊಂದಿದ್ದು ಹಾಗೂ ಒಂದು ಮನೆ ಕಟ್ಟಿಸಿರುವುದು ಬಿಟ್ಟರೆ 53 ವರ್ಷದ ಸಾರ್ವಜನಿಕ ಬದುಕಿನಲ್ಲಿ ಆರ್ಥಿಕವಾಗಿ ಪ್ರಸಾದ್ ಏನೂ ಗಳಿಸಲಿಲ್ಲ. ಚುನಾವಣೆ ಹಾಗೂ ಕಾರ್ಯಕ್ರಮಗಳಿಗೆ ಅವರು ಬೇರೆಯವರ ಮುಂದೆ ಕೈಯೊಡ್ಡಿದವರಲ್ಲ. ರಾಜ್ಯದಲ್ಲಿ ಅವರು ಕಂದಾಯ ಸಚಿವರಾಗಿದ್ದಾಗ ಕೈಗೊಂಡ ಹಲವು ಮಹತ್ತರ ತೀರ್ಮಾನಗಳಿಂದ ಹಲವರಿಗೆ ಅನುಕೂಲವಾಯಿತು. ಒಬ್ಬರಿಂದಲೂ ಒಂದು ರೂಪಾಯಿ ತೆಗೆದುಕೊಳ್ಳಲಿಲ್ಲ. ಅವರ ಮೇಲೆ ಭ್ರಷ್ಟಾಚಾರದ ಆರೋಪ ಯಾರೂ ಮಾಡಲಾಗುವುದಿಲ್ಲ. ಸಮಾನತೆಗೆ ಅವರು ಮಾಡಿದ ಹೋರಾಟಗಳನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಕೆಲವರು ದುರಹಂಕಾರಿ ಎಂದು ಹೇಳುತ್ತಾರೆ ಅಷ್ಟೇ. ರಾಜಶೇಖರಮೂರ್ತಿ ಅವರ ಬಗ್ಗೆ ವೈಚಾರಿಕವಾಗಿ ಬಹಳ ಭಿನ್ನಾಭಿಪ್ರಾಯ ಇತ್ತು. ತಮ್ಮ ಸೋಲಿಗೆ ಮೂರ್ತಿ ಕಾರಣ ಎಂಬ ವಿಷಯವಾಗಿ ವೈಯಕ್ತಿಕವಾಗಿಯೂ ಸಿಟ್ಟು ಇತ್ತು. ಆದರೆ, ಅದನ್ನೇ ಸಾಧಿಸಲು ಹೋಗಲಿಲ್ಲ. ಪ್ರಸಾದ್ ಅವರು ಲಿಂಗಾಯತ ವಿರೋಧಿ ಎಂಬ ತಪ್ಪು ಮಾತಿದೆ. ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದವರು ಹೇಳುವ ಮಾತಿದು. ಪ್ರಸಾದ್ ತಮ್ಮ ಅಂತಿಮ ದಿನಗಳವರೆಗೂ ಸುತ್ತೂರು ಮಠದ ಜೊತೆಗೆ ಬಹಳ ನಿಕಟ ಸಂಪರ್ಕ ಹೊಂದಿದ್ದರು. ಬಸವಣ್ಣನವರ ವಿಚಾರವನ್ನು ನಂಬಿದ್ದರು. ಬಸವಣ್ಣ, ಬುದ್ಧ, ಅಂಬೇಡ್ಕರ್ ವಿಚಾರದಲ್ಲಿ ವ್ಯತ್ಯಾಸಗಳಿಲ್ಲ ಎನ್ನುತ್ತಿದ್ದರು.

ಮೈಸೂರಿನಲ್ಲಿ ಬ್ರಾಹ್ಮಣರಿರಲಿ, ಲಿಂಗಾಯಿತರಿರಲಿ ಅಥವಾ ಇನ್ನಿತರ ಮುಂದುವರಿದ ಸಮಾಜದವರಲ್ಲೂ ನಿಷ್ಠಾವಂತ, ಪ್ರಾಮಾಣಿಕ, ನೇರವಾದಿಯಾಗಿದ್ದ ಪ್ರಸಾದ್ ಬಗ್ಗೆ ಗೌರವವಿತ್ತು. ಬಂಡಾಯ ಹೋರಾಟಗಾರ, ಅಂಬೇಡ್ಕರ್ ವಿಚಾರಗಳನ್ನು ಮುಂದೆ ತೆಗೆದುಕೊಂಡು ಹೋಗುತ್ತಿದ್ದ ನಿಷ್ಠಾವಂತ ಹೋರಾಟಗಾರ ಪ್ರಸಾದ್ ಅವರನ್ನು ನಾವು ಕಳೆದುಕೊಂಡಿದ್ದೇವೆ. ಪ್ರಸಾದ್ ನಿರ್ಗಮನದಿಂದ ಹೋರಾಟದ ಹಾದಿಯಲ್ಲಿ ದೊಡ್ಡ ಕಂದಕ ನಿರ್ಮಾಣವಾಗಿದೆ.

ಲೇಖಕ: ಹಿರಿಯ ರಾಜಕಾರಣಿ

(ನಿರೂಪಣೆ: ಆರ್. ಮಂಜುನಾಥ್)

> **ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಸಿಪಾಯಿ ಶ್ರೀನಿವಾಸ ಪ್ರಸಾದ್, ಜನನಾಯಕರಾಗಿದ್ದರು. ಅವರು ಹಲವು ದಶಕಗಳ ಸಾಮಾಜಿಕ ಜೀವನದ ಪ್ರತಿ ಕ್ಷಣವನ್ನು ಬಡವರು, ಶೋಷಿತರು, ವಂಚಿತರಿಗಾಗಿ ಮೀಸಲಿಟ್ಟರು. ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಸಚಿವರಾಗಿ ಉತ್ತಮ ಕೆಲಸ ಮಾಡಿದರು. ದಲಿತ ವರ್ಗದವರಿಗೆ ಸಾಮಾಜಿಕ ನ್ಯಾಯ ಕೊಡಿಸಲು ಸದಾ ಯತ್ನಿಸಿದರು**
> **ನರೇಂದ್ರ ಮೋದಿ,** ಪ್ರಧಾನಿ

ಜನನಾಯಕ ಸವೆಸಿದ ಹಾದಿ

- **ಜನನ: ಆ.6, 1947**
- **1974:** ಕೃಷ್ಣರಾಜ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧೆ ಮೂಲಕ ಚುನಾವಣಾ ರಾಜಕಾರಣ ಪ್ರವೇಶ.
- **1977-78**- ಯುವ ಜನತಾ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ
- **1980**- ಮೊದಲ ಬಾರಿ ಲೋಕಸಭೆಗೆ ಆಯ್ಕೆ
- **1984**- ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕ
- **1984**- 2ನೇ ಬಾರಿಗೆ ಲೋಕಸಭೆಗೆ ಆಯ್ಕೆ. ಹಕ್ಕುಬಾಧ್ಯತಾ ಸಮಿತಿ, ಪೆಟ್ರೋಲಿಯಂ ಮತ್ತು ರಾಸಾಯನಿಕ ಸಚಿವಾಲಯ ಸಮಾಲೋಚನಾ ಸಮಿತಿ ಸದಸ್ಯ
- **1986**- ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ
- **1989**- 3ನೇ ಬಾರಿಗೆ ಲೋಕಸಭೆಗೆ ಆಯ್ಕೆ, ಸಾರ್ವಜನಿಕ ಉದ್ದಿಮೆ ಸಮಿತಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿ, ಪೆಟ್ರೋಲಿಯಂ ಮತ್ತು ರಾಸಾಯನಿಕ ಸಮಾಲೋಚನಾ ಸಮಿತಿ ಸದಸ್ಯ
- **1991**- 4ನೇ ಬಾರಿಗೆ ಲೋಕಸಭೆಗೆ ಆಯ್ಕೆ. ಅಂದಾಜು ಸಮಿತಿ, ಪ.ಜಾತಿ ಮತ್ತು ಬುಡಕಟ್ಟುಗಳ ಸಮಿತಿ, ಉಕ್ಕು ಮತ್ತು ಗಣಿ ಸಚಿವಾಲಯ ಸಮಾಲೋಚನಾ ಸಮಿತಿ ಸದಸ್ಯ
- **1999**- 5ನೇ ಬಾರಿಗೆ ಲೋಕಸಭೆಗೆ ಜೆಡಿಯು ಟಿಕೆಟ್ ಮೇಲೆ ಆಯ್ಕೆ. ಅಟಲ್ ಬಿಹಾರಿ ವಾಜಪೇಯಿ ಸಂಪುಟದಲ್ಲಿ ರಾಜ್ಯ ಸಚಿವ
- **2008, 2013**- ಸತತ ಎರಡು ಬಾರಿ ನಂಜನಗೂಡಿನಿಂದ ವಿಧಾನಸಭೆಗೆ ಆಯ್ಕೆ. 2ನೇ ಬಾರಿಗೆ ಗೆದ್ದಾಗ ಸಿದ್ದರಾಮಯ್ಯ ಸಂಪುಟದಲ್ಲಿ ಕಂದಾಯ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ
- **2017**- ಸಂಪುಟದಿಂದ ಕೈಬಿಟ್ಟಿದ್ದನ್ನು ವಿರೋಧಿಸಿ ಶಾಸಕ ಸ್ಥಾನಕ್ಕೆ ರಾಜೀನಾಮೆ, ಬಿಜೆಪಿ ಸೇರ್ಪಡೆ, ನಂಜನಗೂಡು ಉಪ ಚುನಾವಣೆಯಲ್ಲಿ ಸೋಲು
- **2019**- 6ನೇ ಬಾರಿಗೆ ಲೋಕಸಭೆಗೆ ಬಿಜೆಪಿ ಟಿಕೆಟ್ ಮೇಲೆ ಆಯ್ಕೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸ್ಥಾಯಿ ಸಮಿತಿ, ಅರ್ಜಿಗಳ ಸಮಿತಿ ಸದಸ್ಯ



ಅನಭಿಷಿಕ್ತ ದೊರೆ


1975ರಿಂದ ಪ್ರಸಾದ್ ಅವರು ಮೈಸೂರಿನಲ್ಲಿ ಒಂದು ಗುಂಪು ಇಟ್ಟುಕೊಂಡಿದ್ದರು. ಮೈಸೂರಿನ ಅಶೋಕಪುರಂನಲ್ಲಿ ಶ್ರೀನಿವಾಸ ಪ್ರಸಾದ್ ಅನಭಿಷಿಕ್ತ ದೊರೆ ಇದ್ದಂತೆ. ಅಲ್ಲಿನ ಜನ ಇವರನ್ನು ಬಹಳ ಪ್ರೀತಿ ಮಾಡುತ್ತಿದ್ದರು. 1978ರಲ್ಲಿ ಪ್ರಸಾದ್ ಮದುವೆಗೆ ದೇವೇಗೌಡರ ಜೊತೆ ನಾನು ಮೈಸೂರಿನ ಅಶೋಕಪುರಂಗೆ ಹೋದಾಗ, ಸಾವಿರಾರು ಜನ ಸೇರಿದ್ದರು. ಅದು ಅವರು ಚುನಾವಣೆಯಲ್ಲಿ ಸೋತ ಸಂದರ್ಭವಾದರೂ ಅಷ್ಟು ಜನ ಸೇರಿದ್ದು, ಅವರು ಜನಾನುರಾಗಿ ನಾಯಕ ಎಂಬುದಕ್ಕೆ ಸಾಕ್ಷಿಯಾಗಿತ್ತು. 53 ವರ್ಷ ರಾಜಕೀಯ ಕ್ಷೇತ್ರದಲ್ಲಿದ್ದು ಅಪಾರ ಅಭಿಮಾನಿ ಬಳಗವನ್ನು ಹೊಂದಿರುವುದು ಅಪರೂಪ. ರಾಜಕಾರಣಿಗಳ ಪೈಕಿ ಪ್ರಸಾದ್ ಅವರಿಗೆ ಮಾತ್ರ ಇಂತಹ ಅಭಿಮಾನ ಸಿಕ್ಕಿದೆ.

ಬಿರಿಯಾನಿ ಎಂದರೆ ಪ್ರೀತಿ

ನಾನು, ಮೋಹನ್ ಕೊಂಡಜ್ಜಿ, ದಿವಾಕರ್, ಜೀರಿಗೆ ಲೋಕೇಶ್ ಸೇರಿದಂತೆ ದೊಡ್ಡ ಬಳಗವೇ ಇದೆ. ನಮ್ಮಲ್ಲಿ ಯಾರೇ ದೆಹಲಿಗೆ ಹೋದರೆ ಅವರ ಮನೆಗೆ ಹೋಗಲೇಬೇಕಿತ್ತು. ಇಲ್ಲದಿದ್ದರೆ ಬೇಸರಿಸಿಕೊಳ್ಳುತ್ತಿದ್ದರು. ನನಗೆ ಕೋಳಿ ಮಾಂಸದ ಖಾದ್ಯ ಎಂದರೆ ಇಷ್ಟ ಎಂಬುದು ಅವರಿಗೆ ಗೊತ್ತಿತ್ತು. ಅವರು ಇಲ್ಲದಿದ್ದರೂ ಸಿಂಧ್ಯ ಬಂದರೆ ಕೋಳಿ ಖಾದ್ಯ ಮಾಡಲೇಬೇಕು ಎಂದು ತಾಕೀತು ಮಾಡಿದ್ದರು.

ಕಾಟನ್‌ಪೇಟೆಯಲ್ಲಿ ಗೋವಿಂದರಾವ್ ಅವರ ಹೋಟೆಲ್‌ನ ಮಟನ್ ಬಿರಿಯಾನಿ ಎಂದರೆ ಅತ್ಯಂತ ಪ್ರಿಯ. ಕೆಎಸ್‌ಆರ್‌ಟಿಸಿಯ ಅಧ್ಯಕ್ಷರಾಗಿದ್ದ ಟಿ. ಪ್ರಭಾಕರ್ ಹಾಗೂ ನಾನು, ಅಲ್ಲಿಂದ ಬಿರಿಯಾನಿ ತಂದರೆ, ಅವರಿಗೆ ಸ್ವರ್ಗ ಸಿಕ್ಕಂತೆ. ಶಾಸಕರ ಭವನದಲ್ಲಿ ಸಂತೋಷದಿಂದ ತಿನ್ನುತ್ತಿದ್ದರು.

ನಾವೆಲ್ಲ ಪ್ರವಾಸ ಅಥವಾ ಎಲ್ಲಿಗಾದರೂ ಹೋದಾಗ ದೇವಸ್ಥಾನದ ಒಳಗೆ ಪ್ರಸಾದ್ ಬರುತ್ತಿರಲಿಲ್ಲ. ಅದನ್ನು ಎಲ್ಲಿಯೂ ತೋರಿಸಿಕೊಳ್ಳುತ್ತಲೂ ಇರಲಿಲ್ಲ.



ವಿ. ಶ್ರೀನಿವಾಸ ಪ್ರಸಾದ್ ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭ (ಸಂಗ್ರಹ ಚಿತ್ರ)

ಸಿನಿ ಬಿಟ್ಸ್

ಧೀರೇನ್‌ಗೆ 'ರಾಜ್‌ಕುಮಾರ್' ನಾಮಬಲ



ಧೀರೇನ್ ಆರ್. ರಾಜ್‌ಕುಮಾರ್

ವರನಟ ಡಾ.ರಾಜ್‌ಕುಮಾರ್ ಅವರ ಮೊಮ್ಮಗ, ಪೂರ್ಣಿಮಾ ಹಾಗೂ ನಟ ರಾಮ್‌ಕುಮಾರ್ ಪುತ್ರ ಧೀರೇನ್ ರಾಮ್‌ಕುಮಾರ್ ಹೆಸರು ಬದಲಾಯಿಸಿಕೊಂಡಿದ್ದಾರೆ. ಧೀರೇನ್ ರಾಮ್‌ಕುಮಾರ್ ಅವರನ್ನು ಧೀರೇನ್ ಆರ್ ರಾಜ್‌ಕುಮಾರ್ ಆಗಿ ಕೆಆರ್‌ಜಿ ಸ್ಟೂಡಿಯೊಸ್ ಮರುಪರಿಚಯಿಸಿದೆ.

ಧೀರೇನ್ ಅವರ ಜನ್ಮದಿನದ ಅಂಗವಾಗಿ ಹೊಸ ಚಿತ್ರವನ್ನು ಕೂಡ ಕೆಆರ್‌ಜಿ ಸ್ಟೂಡಿಯೊಸ್ ಘೋಷಿಸಿದೆ. ಚಿತ್ರ ಕುರಿತು ಮಾಹಿತಿಯನ್ನು ಸದ್ಯದಲ್ಲೇ ತಿಳಿಸಲಾಗುವುದು ಎಂದಿದೆ ಕೆಆರ್‌ಜಿ. ಈ ಹಿಂದೆ ತೆಲುಗಿನ 'ಆರ್‌ಎಕ್ಸ್ 100' ಸಿನಿಮಾದ ರಿಮೇಕ್ ಆಗಿದ್ದ 'ಶಿವ 143' ಎಂಬ ಸಿನಿಮಾದಲ್ಲಿ ಧೀರೇನ್ ನಟಿಸಿದ್ದರು. ಚಿತ್ರದಲ್ಲಿ ರಗಡ್ ಲುಕ್‌ನಲ್ಲಿ ಧೀರೇನ್ ಮಿಂಚಿದ್ದರು. ಇದೀಗ ಕೆಆರ್‌ಜಿ ಜೊತೆ ಕೈಜೋಡಿಸಿರುವ ಧೀರೇನ್ ಹೊಸ ಪ್ರಾಜೆಕ್ಟ್‌ಗೆ ಸಜ್ಜಾಗಿದ್ದಾರೆ. ಸದ್ಯ ದಿಗಂತ್ ನಟನೆಯ 'ಪೌಡರ್' ಸಿನಿಮಾದ ಬಿಡುಗಡೆಗೆ ಸಜ್ಜಾಗುತ್ತಿರುವ ಕೆಆರ್‌ಜಿ, ಡಾಲಿ ಧನಂಜಯ ನಟನೆಯ 'ಉತ್ತರಕಾಂಡ' ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ಈ ಪ್ರಾಜೆಕ್ಟ್ ಪೂರ್ಣಗೊಂಡ ಬಳಿಕ ಧೀರೇನ್ ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ.

'ಫ್ಯಾಮಿಲಿ ಡ್ರಾಮ'ದಲ್ಲಿ ಸಿಂಧು

'ಆಚಾರ್ ಆ್ಯಂಡ್ ಕೋ.' ಸಿನಿಮಾದಲ್ಲಿ ನಿರ್ದೇಶಕಿಯಾಗಿ, ನಟಿಯಾಗಿ ಮಿಂಚಿದ್ದ ಸಿಂಧು ಶ್ರೀನಿವಾಸಮೂರ್ತಿ ನಟನೆಯ ಹೊಸ ಪ್ರಾಜೆಕ್ಟ್ ಘೋಷಣೆಯಾಗಿದೆ. 'ಫ್ಯಾಮಿಲಿ ಡ್ರಾಮ' ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ಹೊಸಬರೇ ಸೇರಿಕೊಂಡು ಮಾಡಿರುವ ಚಿತ್ರ ಇದಾಗಿದೆ.

ಆಕರ್ಷ್ ಎಚ್.ಪಿ. ನಿರ್ದೇಶನದಲ್ಲಿ ಮೂಡಿ ಬಂದಿರುವ ಸಿನಿಮಾ ಇದಾಗಿದ್ದು, ಇದು ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ನಟ ರಿಷಬ್ ಶೆಟ್ಟಿ ತಂಡದಲ್ಲಿ ಕಾರ್ಯನಿರ್ವಹಿಸಿರುವ ಆಕರ್ಷ್, ರಿಲೀಸ್‌ಗೆ ಸಿದ್ಧವಾಗಿರುವ ಪ್ರಮೋದ್ ಶೆಟ್ಟಿ ನಟನೆಯ 'ಲಾಫಿಂಗ್ ಬುದ್ಧ'ದಲ್ಲೂ ಕೆಲಸ ಮಾಡಿದ್ದಾರೆ. ಸಿನಿಮಾದಲ್ಲಿ ಸಿಂಧು ಶ್ರೀನಿವಾಸಮೂರ್ತಿ, 'ಡೇರ್‌ಡೆವಿಲ್ ಮುಸ್ತಾಫಾ' ಸಿನಿಮಾದಲ್ಲಿ ನಟಿಸಿರುವ ಅಭಯ್, ಪೂರ್ಣಚಂದ್ರ ಮೈಸೂರು ಹಾಗೂ ಅನನ್ಯಾ ಅಮರ್ ಸೇರಿದಂತೆ ಸಾಕಷ್ಟು ಕಲಾವಿದರಿದ್ದಾರೆ. 'ಫ್ಯಾಮಿಲಿ ಡ್ರಾಮ' ಡಾರ್ಕ್ ಕಾಮಿಡಿ ಜಾನರ್‌ನ ಸಿನಿಮಾವಾಗಿದ್ದು, ಮುಗ್ಧ ಕುಟುಂಬವೊಂದು ಕೊಲೆ ಮಾಡಿ ಸಂಕಷ್ಟಕ್ಕೆ ಸಿಲುಕುವ ಕಥಾಹಂದರ ಹೊಂದಿದೆ. ಚಿತ್ರದ ಟ್ರೇಲರ್‌ನಷ್ಟೇ ಸಿನಿಮಾದ ಪೋಸ್ಟರ್ ಕೂಡಾ ಗಮನಸೆಳೆಯುತ್ತಿದ್ದು, ಹಳೆಕಾಲದ ಸಿನಿಮಾಗಳ ಪೋಸ್ಟರ್‌ನಂತೆ ರೆಟ್ರೋ ಶೈಲಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ. ವಿಶೇಷ ಏನೆಂದರೆ ಸಿನಿಮಾದ ಸಂಗೀತ ಕೂಡ ರೆಟ್ರೋ ಶೈಲಿಯಲ್ಲಿ ಇದೆ. ಚಿತ್ರಕ್ಕೆ ಚೇತನ್ ಅಮಯ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ.



ಸಿಂಧು ಶ್ರೀನಿವಾಸ ಮೂರ್ತಿ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಷಷ್ಠಿ ಗಂ. 7-06 ನಕ್ಷತ್ರ ಉತ್ತರಾಷಾಢ ಗಂ. 28-09 ಯೋಗ: ಸಾಧ್ಯ ಗಂ. 22-24 ಕರಣ : ವಣಿಜ ಗಂ. 7-06, ಮೇಷ ಮಾಸದ 18 ನೇ ದಿನ, ಮಳೆನಕ್ಷತ್ರ: ಭರಣಿ 1.

ರಾಹುಕಾಲ : ಮಧ್ಯಾಹ್ನ 03-00 - 04-30

ಸೂರ್ಯೋದಯ : 06-13 ಸೂರ್ಯಾಸ್ತ : 06-42

ಮುಸ್ಲಿಂ ದಿನಾಂಕ : 20 ಶವ್ವಾಲ್

ಅದೃಷ್ಟ ಸಂಖ್ಯೆ : 5, 6

ಮೇಷ: ಮನೆಯಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಅನಿವಾರ್ಯವಾಗಿ ಗೈರಾಗುವ ಸಂದರ್ಭ ಬರಲಿದೆ. ಉತ್ತಮ ವ್ಯಕ್ತಿಗಳ ಜತೆ ವಿಷಯ ವಿನಿಮಯವು ಮನಸ್ಸನ್ನು ಪ್ರಫುಲ್ಲವಾಗಿರಿಸುತ್ತದೆ.

ವೃಷಭ: ಕುಟುಂಬದಲ್ಲಿನ ನೂತನ ಶಿಶುವಿನ ಜನನ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ. ಊಟದ ಸಮಯದಲ್ಲಿ ಯಾರೊಂದಿಗೂ ಮಾತು ಬೆಳೆಸಬೇಡಿ. ಇಷ್ಟವಾಗುವ ಭೋಜನವನ್ನು ಮಾಡುವಿರಿ.

ಮಿಥುನ: ಚರ್ಮ ಸಂಬಂಧಿ ಕಾಯಿಲೆಗಳನ್ನು ಪರಿಹರಿಸಿಕೊಳ್ಳಲು ಔಷಧಿಗಳ ಪ್ರಯೋಗ ಬೇಡ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ವಿದ್ಯಾರ್ಥಿಗಳಿಗೆ ವಿಪುಲ ಅವಕಾಶಗಳು ದೊರೆಯಲಿವೆ.

ಕರ್ಕಾಟಕ: ವಿದ್ಯಾರ್ಥಿಗಳು ಹೊಸ ವಿದ್ಯಾಲಯಕ್ಕೆ ಸೇರಿರುವವರಾದರೆ ಹೊಸ ಸ್ನೇಹಿತರಿಂದ ಅಸಮಾಧಾನಕರ ಘಟನೆಗಳನ್ನು ಎದುರಿಸಬೇಕಾಗಬಹುದು. ಹಣ್ಣು ಮಾರಾಟಗಾರರಿಗೆ ಉತ್ತಮ ವ್ಯಾಪಾರ.

ಸಿಂಹ: ಒತ್ತಡಗಳ ನಡುವೆಯು ಬಂಧು ಮಿತ್ರರಿಗಾಗಿ ಸಮಯವನ್ನು ಕೊಡಲೇಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಮದುವೆ ಸಮಾರಂಭಕ್ಕೆ ಸಿಗುವ ಶುಭ ಚಾಲನೆ ಶುಭ ಸಂಕೇತಗಳನ್ನೆ ಪ್ರತಿಫಲಿಸಲಿವೆ.

ಕನ್ಯಾ: ಜಗದ್ಗುರುಗಳನ್ನು ದರ್ಶನ ಮಾಡುವ ಭಾಗ್ಯವಿದೆ. ಅವರ ಬಳಿ ನಿಮ್ಮ ಸಮಸ್ಯೆಗೆ ಪರಿಹಾರ ದೊರೆಯುವುದು. ಕಲಿಕಾ ಸಾಮರ್ಥ್ಯ ಬೇರೆಯವರ ಈರ್ಷ್ಯೆಗೆ ಕಾರಣವಾಗಬಹುದು. ಕೆಲಸಕ್ಕೆ ಮನ್ನಣೆ ದೊರೆಯುತ್ತದೆ.

ತುಲಾ: ಸ್ವಾಗತಕಾರರಿಗೆ ಇಂದು ನೀವು ಮಾಡುವ ಅತಿಥಿ ಸತ್ಕಾರದ ಮೇಲೆ ಮುಂದಿನ ಆಗುಹೋಗುಗಳು ನಿಂತಿವೆ. ಹೊಸ ವಾತಾವರಣಕ್ಕೆ ಬಂದವರಿಗೆ ಹೊಂದಾಣಿಕೆ ಆದ ಬಗ್ಗೆ ಸಂತೋಷವಾಗಲಿದೆ.

ವೃಶ್ಚಿಕ: ಮಾಡುವ ಕೆಲಸದ ಫಲಿತಾಂಶವು ಸರಿಯಾಗಿದ್ದರೂ ವಿಧಾನವನ್ನು ಬದಲಿಕೊಳ್ಳಬೇಕೆಂಬ ಸಲಹೆಗಳನ್ನು ಪಡೆಯಲಿದ್ದೀರಿ. ಇಷ್ಟ ಮಿತ್ರರ ಅಥವಾ ಬಂಧುಗಳ ಭೇಟಿಯಿಂದ ಉಲ್ಲಾಸ ಉಂಟಾಗುತ್ತದೆ.

ಧನು: ಹೊಸ ದಂಪತಿಗಳು ದೇವರ ದರ್ಶನಕ್ಕಾಗಿ ಪ್ರಯಾಣ ಮಾಡುವ ಸಾಧ್ಯತೆಗಳಿವೆ. ಶಿಕ್ಷಕರು ಎಷ್ಟೇ ಪೂರ್ವತಯಾರಿಯನ್ನು ಮಾಡಿಕೊಂಡಿದ್ದರೂ ವಿಷಯಗಳು ನೆನಪಿಗೆ ಬಾರದೆ ಇರಬಹುದು.

ಮಕರ: ಸಾಹಸವನ್ನು ಮಾಡಿ ಪಡೆದ ವಸ್ತುವನ್ನು ಅಥವಾ ಹಣವನ್ನು ಸಾಹಸ ಮಾಡಿಯೇ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಇತರರಿಗೆ ಸಲಹೆ ಕೊಡುವಾಗ ಸೂಕ್ಷ್ಮಮತಿ ಇರಲಿ.

ಕುಂಭ: ಉತ್ತರ ಸಿಗದ ನಿಮ್ಮ ಹಲವಾರು ಪ್ರಶ್ನೆಗಳಿಗೆ ಇಂದು ಸದ್ಪುರುಷನ ಜತೆಯ ಸಂಭಾಷಣೆಯಿಂದ ಉತ್ತರ ದೊರೆಯಲಿದೆ. ತಾಯಿಗೆ ಕಣ್ಣಿನ ದೃಷ್ಟಿಯ ದೋಷ ಕಾಣಿಸಿಕೊಂಡಲ್ಲಿ ವೈದ್ಯರನ್ನು ಭೇಟಿ ಮಾಡಿ.

ಮೀನ: ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ಕವಿತೆ–ಕಥೆಗಳನ್ನು ಬರೆಯುವ ಉದಯೋನ್ಮುಖ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆಯಲಿದೆ. ಚರ್ಮದ ಮೇಲೆ ಕಾಳಜಿ ಇರಲಿ.

ನುಡಿ ಬೆಳಗು





ಪಿ. ಚಂದ್ರಿಕಾ

ವಿವೇಕ

ಲಂಕೆಯಿಂದ ವಿಜಯಶಾಲಿಯಾಗಿ ಸೀತಾಮಾತೆಯೊಂದಿಗೆ ಬಂದ ರಾಮನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕದ ಸಂಭ್ರಮ. ಯುದ್ಧದಲ್ಲಿ ರಾಮನಿಗೆ ಸಹಾಯ ಮಾಡಿದ ಅಷ್ಟೂ ಜನ ವಾನರರೂ ಅಲ್ಲಿ ಆಮಂತ್ರಿತರಾಗಿದ್ದರು. ಅಲಂಕೃತಗೊಂಡ ಅಯೋಧ್ಯೆಯನ್ನು ನೋಡಿ ಸ್ವರ್ಗವೇ ಭೂಲೋಕಕ್ಕೆ ಬಂತೇನೋ ಎನ್ನುವಷ್ಟು ಅವರು ಸಂಭ್ರಮಿತರಾಗಿದ್ದರು. ಮಕ್ಕಳು ಮರಿಗಳೊಂದಿಗೆ ಬಂದವರಿಗೆ ಯಾವ ಕೊರತೆಯೂ ಆಗಬಾರದೆಂದು ರಾಮ ಕಟ್ಟಪ್ಪಣೆ ಮಾಡಿದ್ದರಿಂದ ಅವರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿತ್ತು.

ಅರಮನೆಯ ಭೋಜನಶಾಲೆಗೆ ಬಿಡುವೇ ಇಲ್ಲ. ವಿಧ ವಿಧವಾದ ಭಕ್ಷ್ಯಗಳ ತಯಾರಿ ನಡೆಯುತ್ತಲೇ ಇತ್ತು. ಕಾಡಿನಲ್ಲೇ ಹುಟ್ಟಿ ಬೆಳೆದು ನಾರು ಬೇರು ಗೆಡ್ಡೆ ಗೆಣಸುಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಕಪಿಗಳಿಗೆಲ್ಲಾ ಬಗೆಬಗೆಯ ಊಟವನ್ನು ತಿನ್ನುವ ಹೊಸ ಅನುಭವ. ಅದು ಅವರೆ ಕಾಳಿನ ಕಾಲ. ಹಾಗಾಗಿ ಅವರೆ ಕಾಳಿನ ಸಾಂಬಾರನ್ನು ಮಾಡಲಾಗಿತ್ತು. ಎಲ್ಲ ಕಪಿಗಳೂ ಊಟಕ್ಕೆ ಕೂತಿರುವಾಗ ಬಡಿಸಿದ್ದ ಅವರೆ ಕಾಳೊಂದನ್ನು ಮರಿಕಪಿ ಹಿಸುಕಿತು. ಸಿಪ್ಪೆಯಿಂದ ಬೇರ್ಪಟ್ಟ ಒಳಗಿನ ಕಾಳು ಮೇಲಕ್ಕೆ ಪುಟಿಯಿತು. ಇದನ್ನು ನೋಡಿದ ಮರಿ ಕಪಿ, 'ಅರೇ ನೀನು ನೆಗೀತಿಯಾ... ನಿನಗಿಂತಲೂ ನಾನು ಜಾಸ್ತಿ ನೆಗೆಯುತ್ತೇನೆ ನೋಡು' ಎಂದು ನೆಗೆದು ಕುಳಿತುಕೊಂಡಿತು. ಅದನ್ನು ನೋಡಿ ಪಕ್ಕದಲ್ಲಿ ಕುಳಿತಿದ್ದ ಇನ್ನೊಂದು ಕಪಿ 'ನಿನಗಿಂತ ನಾನು ಜಾಸ್ತಿ ಎತ್ತರಕ್ಕೆ ನೆಗೆಯುತ್ತೇನೆ' ಎಂದು ನೆಗೆದು ಕುಳಿತುಕೊಂಡಿತು.

ಹೀಗೆ ಒಂದಾದ ಮೇಲೆ ಇನ್ನೊಂದರಂತೆ ಎಲ್ಲ ಕಪಿಗಳು ನೆಗೆದು ಕುಳಿತುಕೊಂಡವು. ಕಡೆಯಲ್ಲಿ ಆಂಜನೇಯನ ಸರದಿ ಬಂತು. ಎಲ್ಲರಂತೆ ಅವನು 'ನಿಮಗಿಂತ ನಾನೇನು ಕಡಿಮೆ' ಎಂದು ಸೀದಾ ಆಕಾಶಕ್ಕೆ ನೆಗೆದು ಕೂತ. ಇದನ್ನೆಲ್ಲಾ ನೋಡುತ್ತಿದ್ದ ರಾಮ ಅಚ್ಚರಿಯಿಂದ, 'ಏನಾಯಿತು' ಎಂದು ಆಂಜನೇಯನನ್ನು ಕೇಳಿದ. ಆಂಜನೇಯ, 'ನನ್ನ ಪಕ್ಕದವ ನೆಗೆದ ಅದಕ್ಕೆ ಅವನಿಗಿಂತ ಎತ್ತರಕ್ಕೆ ನೆಗೆಯಬೇಕೆಂದು ನೆಗೆದೆ' ಎಂದ. ರಾಮ ಪಕ್ಕದ ಕಪಿಯನ್ನು ಕೇಳಿದ ಅದು ಕೂಡಾ ಪಕ್ಕದವ ನೆಗೆದದ್ದಕ್ಕೆ ನೆಗೆದೆ ಎನ್ನುವ ಉತ್ತರವನ್ನೇ ಕೊಟ್ಟಿತು. ಕಡೆಗೆ ಮೊದಲು ನೆಗೆದ ಕಪಿಮರಿಯ ಬಳಿಗೆ ಬಂದಾಗ ಅದು ಅವರೆ ಕಾಳಿನ ಬಗ್ಗೆ ಹೇಳಿತು.

ರಾಮ ನಕ್ಕ, 'ಹನುಮ ನೀನು ಲಂಕೆಗೆ ಹಾರಿದವನು, ಲಕ್ಷ್ಮಣ ಮೂರ್ಛೆಗೊಂಡಾಗ ಗಿಡಮೂಲಿಕೆಯನ್ನು ತೆಗೆದುಕೊಂಡು ಬಾ ಎಂದರೆ ಸಂಜೀವಿನಿ ಪರ್ವತವನ್ನೇ ತಂದವನು. ನಿನ್ನ ಸಾಧನೆಯೇನೂ ಕಡಿಮೆಯಲ್ಲ. ನಿನ್ನ ಶಕ್ತಿಯೂ ಅಗಾಧ. ಹಾಗಿದ್ದೂ, ಅವನ್ನೆಲ್ಲಾ ಮರೆತು ನೀನು ಕೂಡ ಬೇರೆ ಕಪಿಗಳ ಜೊತೆ ಸೇರಿ ನಿಮಗಿಂತ ನಾನು ದೊಡ್ಡವನು ಎನ್ನುತ್ತೀಯಲ್ಲ? ಏನು ಹೇಳಲಿ? ಸಾಮಾನ್ಯರು ಹೀಗೆ ತಮ್ಮನ್ನು ಮರೆತುಹೋಗುವುದು ಸಹಜ. ಆದರೆ ನೀನಲ್ಲ. ಯಾವತ್ತೂ ನೀನು ಮಾಡಿರುವ ಸಾಧನೆಯನ್ನು ನೆನಪಿಟ್ಟುಕೋ ಅದಕ್ಕಿಂತ ದೊಡ್ಡದನ್ನೇನಾದರೂ ಮಾಡು. ಅದನ್ನು ಮರೆತು ಹೀಗೆ ಚಿಕ್ಕವನ ಥರ ಆಡಬೇಡ' ಎಂದ. ಆಂಜನೇಯನಿಗೆ ನಿಜಕ್ಕೂ ನಾಚಿಕೆಯಾಯಿತು. ಆಗ ರಾಮ, 'ಹನುಮ ಎಂಥದ್ದೇ ಹೊತ್ತಿನಲ್ಲಾದರೂ ನಾವೇನು ಎನ್ನುವುದನ್ನು ಮರೆಯಬಾರದು ಆಗ ನಮ್ಮ ವ್ಯಕ್ತಿತ್ವಕ್ಕೂ, ಸಾಧನೆಗೂ ಘನತೆ ಸಿಗುತ್ತದೆ' ಎಂದ. ಇದಲ್ಲವೇ ವಿವೇಕ.

ಪದಬಂಧ 5666


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಪರಿಶೀಲನೆಯನ್ನು ಹೀಗೂ ಹೇಳಬಹುದು (5)
4.ತಾಸಲ್ಲೇ ಆವರಿಸಿದ ಕತ್ತಲು! (3)
5.ಸುಗಂಧಯುಕ್ತವಾದ ಜಲ (3)
7.ಮನದನ್ನೆ ಇರುವ ಸದನ (2)
10.ಮಂದಿರದ ಹತ್ತಿರ ಕೇಳಿಸಿದ್ದು ಕೆಳಗಿನ ಸ್ವರ (2)
11.ಗರ ಬಡಿದಿರುವ ಷಹರು (3)
12.ನಾವೆಲ್ಲರು ಕುಳಿತ ದೋಣಿ ಉಲ್ಟಾ ಆಗಿದೆಯಲ್ಲಾ (2)
13.ಮದುಮಗನ ಜೊತೆಯಿರುವ ಪುತ್ರ (2)
15.ಬೆಳ್ಳುಳ್ಳಿ ಇಲ್ಲಿದೆ (3)
18.ತಿಂಗಳಿಗೊಮ್ಮೆ ಜರುಗುವಂಥದ್ದು (3)
19.ಕಾಡಿನಲ್ಲಿ ತಿರುಗಾಟ (5)

ಮೇಲಿಂದ ಕೆಳಕ್ಕೆ

1.ಹೆಜ್ಜೆಯ ಕೆಳಭಾಗ (3)
2.ಸಮವಲ್ಲದ್ದು ಇದು (3)
3.ನೆನಪಲ್ಲೇ ಇರುವ ಕಾರಣ (2)
4.ನಕ್ಷತ್ರಗಳಿಂದ ಕೂಡಿದ ಆಕಾಶ (5)
6.ದುಃಖಾಂತವಾದ ಪ್ರಹಸನ (5)
8.ಒನಪು ತೋರಿದಾಗ ಬಂದ ಸ್ಮರಣೆ (3)
9.ಇದು ಶ್ರೇಷ್ಠ (3)
14.ಈತ ಹಳ್ಳಿಯವನು (3)
16.ವನದಲ್ಲಿ ತಿರುಗಿದ್ದಕ್ಕೇ ಹೊಸತು ಗೋಚರಿಸಿದೆ (2)
17.ಋತುಗಳ ರಾಜನ ತಿಂಗಳು (3)



5665ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಾವ 3.ಪ್ರಸವ
6.ರಸಿಕ 8.ತಿದ್ದುಪಡಿ
10.ವಿವರ 11.ಚಡಾವು
12.ಶಿಲಾಯುಗ 15.ಮಕರ
17.ತಸ್ಕರ 18.ನಿಜ

ಮೇಲಿಂದ ಕೆಳಕ್ಕೆ:
2.ವಯ್ಯಾರ 3.ಪ್ರತೀಕ
4.ವರ್ಧಂತಿ 5.ದ್ವೀಪ
7.ಸಿತಾರ 9.ಡಿಕಾವು
10.ವಿದೇಶಿ 11.ಚರಕ
13.ಲಾಯ 14.ಗಣಿತ
15.ಮತ್ಸರ 16.ರಜನಿ

ಸುಡೊಕು 6051

	3		6		2		4	
6		2				8		3
	4		3		9		1	
4		8			5		2	
				1		4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6050 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4





ಎಂಥಾ ಮಾತು!



ರೈತರ, ಮಹಿಳೆಯರ, ಯುವಕರ ಕಷ್ಟ ಕೇಳಲು ಸಿದ್ಧವಿಲ್ಲದ, ವಿಕೃತ ಕಾಮುಕರನ್ನು ಜತೆಯಲ್ಲಿ ಇಟ್ಟುಕೊಂಡು ಅವರ ಕೃತ್ಯವನ್ನು ಖಂಡಿಸುವ ತಾಕತ್ತಿಲ್ಲದ 'ಮಹಾಪ್ರಭು'ವನ್ನು ಇಳಿಸುವ ಕಾಲ ಬಂದಿದೆ. ಪ್ರಶ್ನಿಸುವ ಧ್ವನಿ ಅಡಗಿಸುವ ಯತ್ನ ನಡೆಯುತ್ತಿದ್ದರೂ ಅದಕ್ಕೆ ಯಾರೂ ಹೆದರಕೂಡದು. ನನ್ನ ಮುಖ ನೋಡಿ ಮತ ಹಾಕಿ ಎಂದು ಮಹಾಪ್ರಭು ಹೋದಲ್ಲಿ, ಬಂದಲ್ಲಿ ಹೇಳುತ್ತ ಇದ್ದಾರೆ. ಅವರಿಗೆ ಬೇಕಿರುವುದು ಮಾತನಾಡುವವರಲ್ಲ, ಹೊಗಳುಭಟರಷ್ಟೇ. ನಾವು ಆರಿಸಿ ಕಳುಹಿಸಿದ 27 ಮಂದಿ ರಾಜ್ಯದ ಜನರ ಧ್ವನಿಯಾಗಲಿಲ್ಲ.ಮತ್ತೆ ನಾವು ಅದೇ ತಪ್ಪು ಮಾಡಬಾರದು

ಪ್ರಕಾಶ್ ರಾಜ್, ನಟ

ಮತ ಆಮಿಷ: ಆಯೋಗದ ವಶ

₹96.01 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 81.19 ಕೋಟಿ
ಮದ್ಯ	₹ 178.37 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹ 11.53 ಕೋಟಿ (603.84 ಕೆ.ಜಿ.)
ಚಿನ್ನ	₹ 76.75 ಕೋಟಿ (137.25 ಕೆ.ಜಿ.)
ಬೆಳ್ಳಿ	₹ 1.18 ಕೋಟಿ (302.37 ಕೆ.ಜಿ.)

'ಮನೆಯ ಮಗಳಾಗಿ ಕೆಲಸ ಮಾಡುವೆ'

ಪ್ರಜಾವಾಣಿ ಸಂದರ್ಶನ

ಸಂಯುಕ್ತಾ ಪಾಟೀಲ

ಗ್ರಾಮೀಣ ಮಹಿಳಾ ಸಬಲೀಕರಣ ಉದ್ದೇಶದಿಂದ ಆರಂಭಿಸಲಾದ ಸ್ಪರ್ಶ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸಂಯುಕ್ತಾ ಪಾಟೀಲ ಛಾಪು ಮೂಡಿಸಿದ್ದಾರೆ. ಎನ್‌ಎಸ್‌ಯುಐ, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದಾರೆ. ಬಾಗಲಕೋಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನ ಆಯ್ದ ಭಾಗ ಇಲ್ಲಿದೆ

• ಬಸವರಾಜ ಹವಾಲ್ದಾರ

- **ಚುನಾವಣಾ ಪ್ರಚಾರ, ಹೊರ ಜಿಲ್ಲೆಯವರು ಎಂಬ ಆರೋಪಕ್ಕೆ ನಿಮ್ಮ ಪ್ರತಿಕ್ರಿಯೆ ಏನು?**

ಸಕಾರಾತ್ಮಕ ಪ್ರತಿಕ್ರಿಯೆ ಇದೆ. ಮನೆ ಮಗಳು, ಸಹೋದರಿ ಎಂದು ಕ್ಷೇತ್ರದಲ್ಲಿ ಎಲ್ಲರೂ ಸ್ವಾಗತಿಸುತ್ತಿದ್ದಾರೆ. ಸಮಸ್ಯೆ, ಸಂಕಷ್ಟಗಳಿಗೆ ಸಂಸತ್ತಿನಲ್ಲಿ ಧ್ವನಿಯಾಗುವೆ ಎಂಬ ಆತ್ಮವಿಶ್ವಾಸ ಅವರಲ್ಲಿ ಕಾಣುತ್ತಿದೆ. ಬಿರು ಬಿಸಿಲಿನಲ್ಲೂ ಗಂಟೆಗಟ್ಟಲೇ ಕಾದು ಅವರು ಸ್ವಾಗತಿಸುತ್ತಿರುವ ಪರಿ ನೋಡಿ ಪುಳಕಿತಳಾಗಿದ್ದೇನೆ.

- **ಕ್ಷೇತ್ರದ ಬಗ್ಗೆ ನಿಮ್ಮ ಕನಸುಗಳೇನು?**

ಬಾಗಲಕೋಟೆ–ಕುಡಚಿ ರೈಲ್ವೆ ಮಾರ್ಗ ಪೂರ್ಣಗೊಳಿಸುವುದು, ನಿರುದ್ಯೋಗಿ ಯುವಜನರಿಗೆ ಉದ್ಯೋಗ ಸೃಷ್ಟಿಗೆ ಕೈಗಾರಿಕೆಗಳನ್ನು ಸ್ಥಾಪಿಸುವುದು, ಯುಕೆಪಿ ಯೋಜನೆಯ ಸಂತ್ರಸ್ತರ ಸಮಸ್ಯೆಗಳನ್ನು ನಿವಾರಿಸುವುದು, ಕಳಸಾ–ಬಂಡೂರಿ ಯೋಜನೆ ಜಾರಿಗೆಗೊಳಿಸಲು ಯತ್ನಿಸುವುದು ನನ್ನ ತುಡಿತ. ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡುವೆ. ವಿಶೇಷ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುದಾನಕ್ಕೆ ಪ್ರಯತ್ನಿಸುವೆ.

- **ಪ್ರತಿಸ್ಪರ್ಧಿ ಬಗ್ಗೆ ಏನು ಹೇಳುವಿರಿ?**

ಈಗ ಸಂಸದರಾದವರಿಗೆ ಅಪಾರ ಅನುಭವ ಇದೆ. ಆದರೆ, ಅನುಭವದ ಲಾಭ ಕ್ಷೇತ್ರದ ಜನರಿಗೆ ತಲುಪಿಲ್ಲ. ರಾಜ್ಯದಲ್ಲಿ ಬರಗಾಲವಿದ್ದು ಜನ ಸಂಕಷ್ಟ ಎದುರಿಸುತ್ತಿದ್ದರೂ ಕೇಂದ್ರದಿಂದ ಅನುದಾನ ತರುವಲ್ಲಿ ವಿಫಲರಾಗಿದ್ದಾರೆ. ಸಂಸತ್ತಿನಲ್ಲಿ ಅವರು ಕ್ಷೇತ್ರದ ಸಮಸ್ಯೆಗಳ ಬಗ್ಗೆ ಒಮ್ಮೆಯೂ ಮಾತನಾಡಿಲ್ಲ. ವಿಶೇಷ ಯೋಜನೆ ತರುವ ಕೆಲಸ ಮಾಡಿಲ್ಲ. ಕೈಗಾರಿಕೆಗಳನ್ನು ತಂದು ಉದ್ಯೋಗ ಒದಗಿಸುವ ಕೆಲಸ ಮಾಡಿಲ್ಲ.

- **ಪಕ್ಷದೊಳಗಿನ ಅಸಮಾಧಾನ ಶಮನವಾಗಿದೆಯೇ?**

ಆರಂಭದಲ್ಲಿ ಇದ್ದ ಕೆಲ ಗೊಂದಲಗಳು ಬಗೆಹರಿದಿವೆ. ಬಹಳಷ್ಟು ಜನರು ಟಿಕೆಟ್ ಆಕಾಂಕ್ಷಿಗಳಾಗಿರುತ್ತಾರೆ. ಒಬ್ಬರಿಗೆ ದೊರೆತಾಗ, ಇನ್ನೊಬ್ಬರಿಗೆ ಸ್ವಲ್ಪ ಅಸಮಾಧಾನ ಆಗುವುದು ಸಹಜ. ಆದರೆ, ಕಾಂಗ್ರೆಸ್‌ನವರಿಗೆ ಪಕ್ಷವೇ ಮುಖ್ಯ. ಈಗ ನೀವೇ ನೋಡುತ್ತಿದ್ದೀರಿ. ಎಲ್ಲರೂ ಒಗ್ಗಟ್ಟಾಗಿ ಪ್ರಚಾರ ಮಾಡುತ್ತಿದ್ದೇವೆ. ಎಲ್ಲರೂ ಕಾಂಗ್ರೆಸ್ ಗೆಲುವಿಗೆ ಕೈಜೋಡಿಸಿದ್ದಾರೆ.



- **ಕುಟುಂಬ ರಾಜಕಾರಣದ ಬಗ್ಗೆ ನಿಮ್ಮ ಅನಿಸಿಕೆ?**

ಎಂಟು ವರ್ಷಗಳಿಂದ ಪಕ್ಷದ ಯುವ, ಮಹಿಳಾ, ಎನ್‌ಎಸ್‌ಯುಐ ಸಂಘಟನೆಯಲ್ಲಿ ಕೆಲಸ ಮಾಡಿರುವೆ. ರಾಜಕೀಯ ವಾತಾವರಣದಲ್ಲಿ ಬೆಳೆದ ನನಗೆ ರಾಜಕೀಯ ಆಸಕ್ತಿ ಮೊದಲಿನಿಂದ ಇತ್ತು. ವಕೀಲರ ಮಕ್ಕಳು ವಕೀಲರು, ವೈದ್ಯರ ಮಕ್ಕಳು ವೈದ್ಯರೇ ಆಗುವ ಹಾಗೆ. ನಾವು ನಿರ್ದೇಶನಗೊಂಡು ಹೋಗುತ್ತಿಲ್ಲ. ಜನರು ತೀರ್ಪು ನೀಡಬೇಕು.

- **ನಿಮಗೆ ಯಾಕೆ ಮತ ಹಾಕಬೇಕು?**

20 ವರ್ಷಗಳಿಂದ ಒಬ್ಬರಿಗೆ ಅವಕಾಶ ಕೊಟ್ಟಿದ್ದೀರಿ. ರೈಲು ಮಾರ್ಗ ಪೂರ್ಣಗೊಂಡಿಲ್ಲ. ಯುಕೆಪಿ ಯೋಜನೆಗೆ ನೆರವು ಕೊಡಿಸಲು ಸಾಧ್ಯವಾಗಿಲ್ಲ. ಕೈಗಾರಿಕೆಗಳನ್ನು ತಂದು ಯುವಕರಿಗೆ ಉದ್ಯೋಗವಕಾಶ ಒದಗಿಸಿಲ್ಲ. ಜನರೂ ಬದಲಾವಣೆ ಬಯಸಿರುವುದು ಪ್ರಚಾರ ಸಂದರ್ಭದಲ್ಲಿ ಕಂಡು ಬಂದಿದೆ. ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಅಪಾರ ಕನಸುಗಳನ್ನಿಟ್ಟುಕೊಂಡು ಬಂದಿರುವ ನನಗೂ ಒಂದು ಅವಕಾಶ ಕೊಡಿ. ಮನೆ ಮಗಳಾಗಿ ಕೆಲಸ ಮಾಡುವೆ.

- **ಗ್ಯಾರಂಟಿ ಯೋಜನೆಗಳು ಸಹಕಾರಿ ಆಗಲಿವೆಯೇ?**

ಖಂಡಿತ. ಬಡವರ ಪರವಾದ ಯೋಜನೆಗಳನ್ನು ತಂದಾಗ ಸಹಜವಾಗಿ ಜನರೂ ಉತ್ತಮವಾಗಿ ಬೆಂಬಲಿಸುತ್ತಾರೆ. ಬೆಲೆ ಏರಿಕೆ ಅಲ್ಲದೇ ನಿರುದ್ಯೋಗ ಸಮಸ್ಯೆ ಕಾಡುತ್ತಿರುವ ಇಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ನೆರವಾಗಿವೆ. ಶೇ 98ರಷ್ಟು ಜನರಿಗೆ ಸೌಲಭ್ಯ ಸಿಕ್ಕಿದೆ. ಗ್ಯಾರಂಟಿ ಯೋಜನೆಗಳ ಪ್ರಭಾವ ಹೇಗಿದೆ ಎಂದರೆ ಈ ಯೋಜನೆಗಳ ಬಗ್ಗೆ ಲೇವಡಿ ಮಾಡುತ್ತಿದ್ದ ಪ್ರಧಾನಿ ನರೇಂದ್ರ ಮೋದಿ ಕೂಡ ಗ್ಯಾರಂಟಿ ಜಪಿಸುವಂತಾಗಿದೆ. ಪಕ್ಷವು ರಾಷ್ಟ್ರಮಟ್ಟದಲ್ಲಿಯೂ ಹಲವು ಗ್ಯಾರಂಟಿ ಘೋಷಿಸಿದೆ. ಜಾರಿಯೂ ಮಾಡಲಿದೆ. ❖

'ಮತ್ತೆ ಪ್ರಧಾನಿ ಆಗಲ್ಲ ಎಂಬ ಚಿಂತೆ ಮೋದಿಗೆ'

ಪ್ರಜಾವಾಣಿ ವಾರ್ತೆ

ಕೂಡ್ಲಿಗಿ (ವಿಜಯನಗರ ಜಿಲ್ಲೆ): 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾವು ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಖಚಿತವಾಗಿದೆ, ಅದಕ್ಕಾಗಿಯೇ 'ಆಕ್ಸಿಸ್' ಪ್ರಕಟಿಸಿದ ಖಚಿತವಾದ ಸಮೀಕ್ಷೆಗಳನ್ನು ಅಳಿಸಿ ಹಾಕಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಸೋಮವಾರ ಬಳ್ಳಾರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಇ.ತುಕಾರಾಂ ಪರವಾಗಿ ಸಂಘಟಿಸಿದ್ದ 'ಪ್ರಜಾಧ್ವನಿ-2 ಜನ ಸಮಾವೇಶ' ಉದ್ಘಾಟಿಸಿ ಮಾತನಾಡಿದ ಅವರು, 'ಸೋಲಿನ ಭಯದಿಂದ ಮೋದಿ ಅವರು ಹೆಚ್ಚೆಚ್ಚು ಸುಳ್ಳು ಸೃಷ್ಟಿಸಿ ಭಾರತೀಯರ ನಡುವೆ ಬಿರುಕು ಮೂಡಿಸುತ್ತಿದ್ದಾರೆ, ಇದರ ಬಗ್ಗೆ ಜನ ಎಚ್ಚರದಿಂದಿರಬೇಕು' ಎಂದು ಹೇಳಿದರು.

ಮೋಹನ್ ಭಾಗವತ್ ಹೇಳಿಕೆ ಸುಳ್ಳು: 'ತಾವು ಮೀಸಲಾತಿಗೆ ವಿರುದ್ಧವಿಲ್ಲ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿರುವುದು ಹಸಿ ಸುಳ್ಳು. ಮೀಸಲಾತಿ ವಿರೋಧಿಸಿ ರಾಜ್ಯಸಭಾ ಸದಸ್ಯ, ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷರಾಗಿದ್ದ ರಾಮಾ ಜೋಯಿಸ್ ಕೋರ್ಟ್ ಮೆಟ್ಟಿಲೇರಿದ್ದು ದೇಶದ ಹಿಂದುಳಿದ ಸಮುದಾಯಗಳು ಮರೆತಿಲ್ಲ. ಮಂಡಲ್ ವರದಿಗೆ ವಿರೋಧ ಮಾಡಿ ಹಿಂದುಳಿದ ಜಾತಿ-ಸಮುದಾಯಗಳ ಮಕ್ಕಳನ್ನು ಆತ್ಮಹತ್ಯೆಗೆ ತಳ್ಳಿದ್ದು ಇದೇ ಬಿಜೆಪಿ. ಸಂಘ ಪರಿವಾರದವರು ಹುಟ್ಟಿನಿಂದಲೇ ಮೀಸಲಾತಿ ವಿರೋಧಿಗಳು. ಆದರೆ ಸುಳ್ಳುಗಳ ಮೂಲಕ ಹಿಂದುಳಿದವರನ್ನು ಪದೇ ಪದೇ ವಂಚಿಸುವುದು ಇವರಿಗೆ ರೂಢಿಯಾಗಿದೆ. ಈ ಬಗ್ಗೆ ಜನತೆ ಎಚ್ಚರದಿಂದ ಇರಬೇಕು' ಎಂದು ಹೇಳಿದರು.



ಕೂಡ್ಲಿಗಿಯಲ್ಲಿ ಸೋಮವಾರ ನಡೆದ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಷಣ ಮಾಡುವಾಗ ಚೊಂಬು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

'ದುಷ್ಟತನ ಬಿಟ್ಟು 10 ವರ್ಷಗಳ ಸಾಧನೆ ಹೇಳಿ'

ಬೆಂಗಳೂರು: 'ಜಾತಿ-ಜಾತಿ, ಧರ್ಮ-ಧರ್ಮಗಳ ನಡುವೆ ದ್ವೇಷ ಹುಟ್ಟಿಸಿ, ರಾಜಕೀಯ ಲಾಭ ಪಡೆಯುವ ದುಷ್ಟತನವನ್ನು ಕೈಬಿಟ್ಟು 10 ವರ್ಷಗಳ ನಿಮ್ಮ ಸಾಧನೆಯ ಕುರಿತು ಮಾತನಾಡಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಣಕಿದ್ದಾರೆ.

'ಯುಪಿಎ ಸರ್ಕಾರ ಕರ್ನಾಟಕಕ್ಕೆ ಕೊಟ್ಟಿದ್ದು ಕಡಿಮೆ ಎಂದು ಟೀಕಿಸುತ್ತೀರಿ. 2018-19ರಲ್ಲಿ ಕೇಂದ್ರ ಬಜೆಟ್ ಗಾತ್ರ ₹ 24.42 ಲಕ್ಷ ಕೋಟಿ, ಕರ್ನಾಟಕಕ್ಕೆ ತೆರಿಗೆ ಪಾಲು ಮತ್ತು ಕೇಂದ್ರ ಪುರಸ್ಕೃತ ಯೋಜನೆಯ ಪಾಲು ಸೇರಿ ಒಟ್ಟು ₹ 46,288 ಕೋಟಿ ಬಂದಿತ್ತು. 2023-24ರಲ್ಲಿ ಕೇಂದ್ರ ಬಜೆಟ್ ಗಾತ್ರ ₹45.03 ಲಕ್ಷ ಕೋಟಿ. ಆದರೆ, ಕರ್ನಾಟಕಕ್ಕೆ ತೆರಿಗೆ ಹಂಚಿಕೆ, ಕೇಂದ್ರ ಪುರಸ್ಕೃತ ಯೋಜನೆಯ ಪಾಲು ಸೇರಿ ಸಿಕ್ಕಿದ್ದು ₹55,529 ಕೋಟಿ ಮಾತ್ರ. ಬಜೆಟ್ ಗಾತ್ರ ದುಪ್ಪಟ್ಟಾದರೆ ಕರ್ನಾಟಕಕ್ಕೆ ನೀಡುವ ಹಣವೂ ದುಪ್ಪಟ್ಟು ಆಗಬೇಕಿತ್ತು ಅಲ್ಲವೇ' ಎಂದು ಪ್ರಧಾನಿಯನ್ನು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ.

'ಬಜೆಟ್ ಗಾತ್ರ ಮೂರು ಪಟ್ಟು ಹೆಚ್ಚಾದಾಗ ಸಾಧನೆಯೂ ಮೂರು ಪಟ್ಟು ಹೆಚ್ಚಾಗಬೇಕಿತ್ತಲ್ಲವೇ? ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿರುವುದು ಕೇಂದ್ರ ಸರ್ಕಾರದ ಸಾಧನೆ ಎಂದು ಹೇಳಿಕೊಳ್ಳುತ್ತಿರುವ ನೀವು ಅದರಲ್ಲಿ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪಾಲೆಷ್ಟು? ರಸ್ತೆ ನಿರ್ಮಾಣ ಗುತ್ತಿಗೆದಾರರ ಸಾಲ ಎಷ್ಟು ಎಂದು ಲೆಕ್ಕ ಯಾಕೆ ಹೇಳುವುದಿಲ್ಲ' ಎಂದು ಕೇಳಿದ್ದಾರೆ. ಕೃಷ್ಣಾ, ಕಾವೇರಿ, ಮೇಕೆದಾಟು ಯೋಜನೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿರುವುದು ಸುಳ್ಳೇ. ರಾಯಚೂರಿಗೂ ಏಮ್ಸ್ ಕೊಡಿ ಎಂದು ಹಲವು ಪತ್ರಗಳನ್ನು ಬರೆದರೂ ಇಲ್ಲಿಯವರೆಗೆ ಕೊಟ್ಟಿಲ್ಲ ಎನ್ನುವುದು ಸುಳ್ಳೇ' ಎಂದೂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಸಿ.ಎಂ ಬದಲು ಬಿಜೆಪಿ ಸಂಸ್ಕೃತಿ'

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಹಿಂದಿನ ಹತ್ತು ವರ್ಷಗಳಲ್ಲಿ ಸಾಕಷ್ಟು ಸುಳ್ಳುಗಳನ್ನು ಹೇಳಿ ಜನರನ್ನು ಯಾಮಾರಿಸಿರುವ ಪ್ರಧಾನಿ ನರೇಂದ್ರ ಮೋದಿ ಈಗ ಕಾಂಗ್ರೆಸ್ ಪಕ್ಷದಲ್ಲಿ ನಾಯಕರಿಲ್ಲ ಎನ್ನುವ ಮತ್ತೊಂದು ಹಸಿ ಸುಳ್ಳು ಹೇಳುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಕುಷ್ಟಗಿಯಲ್ಲಿ ಸೋಮವಾರ ನಡೆದ ಪ್ರಜಾಧ್ವನಿ ಲೋಕಸಭಾ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರಂಥ ಅನೇಕ ಘಟಾನುಘಟಿ ನಾಯಕರು ನಮ್ಮಲ್ಲಿದ್ದಾರೆ. ಐಎನ್‌ಡಿಐಎ ಒಕ್ಕೂಟ ಅಧಿಕಾರಕ್ಕೆ ಬಂದರೆ ವರ್ಷಕ್ಕೊಮ್ಮೆ ಪ್ರಧಾನಿ ಬದಲಾಗುತ್ತಾರೆ ಎನ್ನುವ ಸುಳ್ಳನ್ನು ಮೋದಿ ಹೇಳುತ್ತಿದ್ದಾರೆ' ಎಂದು ಟೀಕಿಸಿದರು.

'ರಾಜ್ಯದಲ್ಲಿ 2008ರಿಂದ 2013ರ ಅವಧಿಯಲ್ಲಿ ಆಡಳಿತ ನಡೆಸಿದ ಬಿಜೆಪಿ ಸರ್ಕಾರ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿತು. ನಂತರ ನಾನೇ ಸಿ.ಎಂ. ಆಗಿ ಒಬ್ಬನೇ ಪೂರ್ಣ ಐದು ವರ್ಷ ಆಡಳಿತ ನಡೆಸಿದ್ದೇನೆ. ಆರು ದಶಕಗಳ ಕಾಲ ಆಡಳಿತ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ನಾಯಕತ್ವದ ಕೊರತೆಯ ದುರ್ಗತಿ ಬಂದಿಲ್ಲ. ನಮ್ಮಲ್ಲಿ ಸಾಕಷ್ಟು ನಾಯಕರಿದ್ದಾರೆ. ಬಿಜೆಪಿ ಸುಳ್ಳು ಸೃಷ್ಟಿ ಮಾಡುತ್ತಿರುವ ಕಾರ್ಖಾನೆಯಾಗಿದ್ದು, ಸುಳ್ಳೆ ಅವರ ಮನೆ ದೇವರು' ಎಂದು ಹರಿಹಾಯ್ದರು.

ಕಾಂಗ್ರೆಸ್ ಆಡಳಿತದಲ್ಲಿ ಸರ್ಕಾರಿ ನೌಕರರಿಗೂ ವೇತನ ನೀಡಲಾಗದ ಸ್ಥಿತಿ ಬರುತ್ತದೆ: ಮೋದಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಕಾಂಗ್ರೆಸ್, ಲೂಟಿಗೆ ಕರ್ನಾಟಕವನ್ನೇ ಎಟಿಎಂ ಮಾಡಿಕೊಂಡಿದೆ. ಅದರ ಪರಿಣಾಮ ಕಡಿಮೆ ಸಮಯದಲ್ಲಿ ರಾಜ್ಯದ ಖಜಾನೆ ಖಾಲಿ ಆಗಿದೆ. ಸರ್ಕಾರದ ಖಜಾನೆ ಲೂಟಿ ಮಾಡಿ ತಮ್ಮ ಖಜಾನೆ ಭರ್ತಿ ಮಾಡಿಕೊಳ್ಳುತ್ತಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಸೋಮವಾರ ಇಲ್ಲಿ ಬಾಗಲಕೋಟೆ ಅಭ್ಯರ್ಥಿ ಪಿ.ಸಿ. ಗದ್ದಿಗೌಡರ, ವಿಜಯಪುರ ಅಭ್ಯರ್ಥಿ ರಮೇಶ ಜಿಗಜಿಣಗಿ ಪರ ಪ್ರಚಾರಾರ್ಥವಾಗಿ ಹಮ್ಮಿಕೊಂಡಿದ್ದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, 'ಶಾಸಕರ ನಿಧಿಯೂ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ' ಎಂದು ಟೀಕಿಸಿದರು.

'ಮುಂದಿನ ದಿನಗಳಲ್ಲಿ ಸರ್ಕಾರಿ ನೌಕರರಿಗೂ ವೇತನ ನೀಡಲಾಗದಂತಹ ಸ್ಥಿತಿ ಬರುತ್ತದೆ. ನಿಮ್ಮ ಮಕ್ಕಳು ಉಪವಾಸ ಸಾಯಬೇಕಾದ ಪರಿಸ್ಥಿತಿ ತರುತ್ತಾರೆ. ರಾಜ್ಯದಲ್ಲಿ ಕಾಂಗ್ರೆಸ್ ವಸೂಲಿ ಗ್ಯಾಂಗ್ ಸರ್ಕಾರ ನಡೆಸುತ್ತಿದೆ' ಎಂದು ಆರೋಪಿಸಿದರು.

'ಕೋಟ್ಯಂತರ ಮೊತ್ತದ ಹಗರಣ ಮಾಡುವ ಕನಸನ್ನು ಕಾಂಗ್ರೆಸ್ ನವರು ಕಾಣುತ್ತಿದ್ದಾರೆ. ರಾಜ್ಯ ಲೂಟಿ ಮಾಡುವವರಿಗೆ ಮೇ 7ರಂದು ಶಿಕ್ಷೆ ಆಗಬೇಕಲ್ಲವೇ ಎಂದು ಪ್ರಶ್ನಿಸಿದರು. ಜನರು 'ಹೌದು' ಎಂದು ಘೋಷಣೆ ಕೂಗಿದರು. ಬಾಗಲಕೋಟೆ ಸೇರಿದಂತೆ ಎಲ್ಲೆಡೆಯೂ ಮತ ಚಲಾಯಿಸುವ ಮೂಲಕ ಉತ್ತರ ನೀಡಬೇಕು' ಎಂದರು.

'ಕೆಲವೇ ವರ್ಷಗಳಲ್ಲಿ ಭಾರತವು ವಿಶ್ವದ ಮೂರನೇ ಆರ್ಥಿಕ ಶಕ್ತಿಯಾಗಲಿದೆ. ಇದನ್ನು ಯಾರು ಮಾಡಲಿದ್ದಾರೆ ಎಂಬ ಮೋದಿ ಅವರ ಪ್ರಶ್ನೆಗೆ ಜನರು 'ಮೋದಿ' ಎಂದು ಕೂಗಿದರು. 'ಮೋದಿ ಅಲ್ಲ. ನಿಮ್ಮ ಒಂದು ಮತ ಮಾಡಲಿದೆ. ಉತ್ಪಾದನಾ, ಕೌಶಲ ಭರಿತ ದೇಶ ಮಾಡುವ ಸಂಕಲ್ಪ ಮಾಡಿದ್ದೇವೆ. ಇದು ಮೋಜು–ಮಸ್ತಿ ಮಾಡುವವರಿಗೆ ಸಾಧ್ಯವಾಗುವುದಿಲ್ಲ. ದಿನದ 24 ಗಂಟೆ ಕೆಲಸ ಮಾಡುವವರಿಂದ ಸಾಧ್ಯ' ಎಂದು ಹೇಳಿದರು.

ದೂರು ನೀಡಿ: 'ಸಮಾಜದ ಭಾವನೆ ಅರಿಯಲು ಸೋಶಿಯಲ್ ಮಿಡಿಯಾ ಬಳಕೆ ಮಾಡುತ್ತೇನೆ. ಹೆಚ್ಚು ಫಾಲೋವರ್ ಹೊಂದಿದ ವಿಶ್ವದ ಮೊದಲ ಮೂವರಲ್ಲಿ ನಾನೂ ಒಬ್ಬನಾಗಿದ್ದೇನೆ. ಇದನ್ನು ಸಹಿಸದ ಕೆಲವರು ತಂತ್ರಜ್ಞಾನ ಬಳಸಿಕೊಂಡು ನನ್ನ ಧ್ವನಿಯಲ್ಲಿ ನಕಲಿ ವಿಡಿಯೊ ಮಾಡುತ್ತಿದ್ದಾರೆ. ಅಂತಹ ವಿಡಿಯೊ ಕಂಡು ಬಂದರೆ ಪೊಲೀಸರಿಗೆ ದೂರು ನೀಡಿ. ಶಿಕ್ಷೆ ಕೊಡಿಸೋಣ' ಎಂದು ಮೋದಿ ಹೇಳಿದರು.



ಬಾಗಲಕೋಟೆಯಲ್ಲಿ ಸೋಮವಾರ ನಡೆದ ಸಮಾವೇಶದಲ್ಲಿ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ

ಕಂಬಳಿ ಹಾಕಿಕೊಂಡೇ ಭಾಷಣ

ಬಾಗಲಕೋಟೆ: ಪ್ರಧಾನಿ ಮೋದಿ ಅವರಿಗೆ ಸ್ಥಳೀಯ ನಾಯಕರು ಹೂವಿನ ಹಾರ ಹಾಕಿ, ಗೋಮಾತೆಯ ಬೆಳ್ಳಿ ಮೂರ್ತಿ, ಬೆಳ್ಳಿಯ ರಾಜದಂಡ ಹಾಗೂ ಕಂಬಳಿ ಹೊದಿಸಿ ಸನ್ಮಾನ ಮಾಡಿದರು.

ಎಲ್ಲವನ್ನೂ ತೆಗೆದ ಮೋದಿ ಅವರು, ಕಂಬಳಿಯನ್ನು ಮಾತ್ರ ವೇದಿಕೆಯಲ್ಲಿರುವವರೆಗೂ ಹಾಕಿಕೊಂಡಿದ್ದರು. ಅದನ್ನು ಹಾಕಿಕೊಂಡೇ ಭಾಷಣ ಮಾಡಿದರು. ಭಾಷಣದ ಆರಂಭದಲ್ಲಿ ಬನಶಂಕರಿ ದೇವಿಗೆ, ಗುರು ಬಸವಣ್ಣ ಹಾಗೂ ಸಿದ್ದೇಶ್ವರ ಸ್ವಾಮೀಜಿಗೆ ನಮಸ್ಕಾರ ಹೇಳಿದರು.

ಕ್ಷೇತ್ರ ಸಮೀಕ್ಷೆ


ತೂಗುಯ್ಯಾಲೆಯಲ್ಲಿ 'ಕೊಪ್ಪಳದ ಚುಕ್ಕಾಣಿ'

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **70.67%**



ಕ್ಷೇತ್ರವನ್ನು ಕಾಡುವ ವಿಷಯಗಳು


- ಜಿಲ್ಲೆಯಲ್ಲಿ ಎರಡೂವರೆ ದಶಕಗಳಿಂದ ನನೆಗುದಿಗೆ ಬಿದ್ದ ನೀರಾವರಿ ಯೋಜನೆಗಳು
- ಕಾರ್ಖಾನೆಗಳಿದ್ದರೂ ಸ್ಥಳೀಯರಿಗೆ ಸಿಗದ ಉದ್ಯೋಗವಕಾಶಗಳು, ಹೆಚ್ಚಿದ ವಲಸೆ
- ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳಗಳಿದ್ದರೂ ಪ್ರವಾಸೋದ್ಯಮ ಅಭಿವೃದ್ಧಿಗೆ ನಿರ್ಲಕ್ಷ್ಯ
- ತೋಟಗಾರಿಕಾ ಬೆಳೆ ಉತ್ತೇಜನಕ್ಕೆ ಘೋಷಿಸಿದ್ದ ತೋಟಗಾರಿಕಾ ಪಾರ್ಕ್ ಆರಂಭ ನನೆಗುದಿಗೆ
- ಜಿಲ್ಲೆಯಾಗಿ 25 ವರ್ಷಗಳಾದರೂ ಆಗದ ಪ್ರತ್ಯೇಕ ಡಿಸಿಸಿ ಬ್ಯಾಂಕ್



ಶಾಸಕರ ಬಲಾಬಲ

ಕಾಂಗ್ರೆಸ್ 6
ಬಿಜೆಪಿ 2

1. ಮಸ್ಕಿ
2. ಸಿಂಧನೂರು
3. ಸಿರುಗುಪ್ಪ
4. ಕನಕಗಿರಿ
5. ಗಂಗಾವತಿ
6. ಕೊಪ್ಪಳ
7. ಯಲಬುರ್ಗಾ
8. ಕುಷ್ಟಗಿ





ಡಾ. ಬಸವರಾಜ ಕ್ಯಾವಟರ್ (ಬಿಜೆಪಿ)

ತಂದೆ ಕಾಲದಿಂದಲೂ ರಾಜಕಾರಣಿಯಾಗಿ, ವೈದ್ಯನಾಗಿ ಜನರ ಜೊತೆಯಿದ್ದೇನೆ. ಅದೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ

- ರಾಜಕೀಯ ಕುಟುಂಬದ ಹಿನ್ನೆಲೆ, ವೈದ್ಯರಾಗಿ ಸೇವೆ
- ಪ್ರಬಲ ಪಕ್ಷ ಸಂಘಟನೆ ಹಾಗೂ ಪಂಚಮಸಾಲಿ ಸಮುದಾಯದ ಬಲ
- ಪಕ್ಷದ ಚಟುವಟಿಕೆಗಳಲ್ಲಿ ಅಷ್ಟಾಗಿ ಕಾಣಿಸದಿರುವುದು ಜನರಿಗೆ ಅಷ್ಟು ಹತ್ತಿರವಲ್ಲ ಎಂಬ ದೂರು
- ಸಂಸದ ಸಂಗಣ್ಣ ಕರಡಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವುದು



ಕೆ. ರಾಜಶೇಖರ ಹಿಟ್ನಾಳ (ಕಾಂಗ್ರೆಸ್)

ಹಿಂದಿನ ಚುನಾವಣೆಯಲ್ಲಿ ಕಡಿಮೆ ಮತಗಳ ಅಂತರದಿಂದ ಸೋತಿದ್ದೆ. ಗ್ಯಾರಂಟಿ ಯೋಜನೆಗಳು ಕೈಹಿಡಿಯಲಿದ್ದು, ಈ ಬಾರಿ ನನ್ನ ಗೆಲುವು ನಿಶ್ಚಿತ

- ಸಹೋದರ ಶಾಸಕ ರಾಘವೇಂದ್ರ ಹಿಟ್ನಾಳ, ತಂದೆ ಬಸವರಾಜ ಹಿಟ್ನಾಳ ಅವರ ರಾಜಕೀಯ ಬಲ
- ಕೊಪ್ಪಳ ಲೋಕಸಭಾ ಕ್ಷೇತ್ರದ ಎಂಟು ಕ್ಷೇತ್ರಗಳ ಪೈಕಿ 6ರಲ್ಲಿ ಕಾಂಗ್ರೆಸ್ ಶಾಸಕರಿರುವುದು
- ಮೇಲಿಂದ ಮೇಲೆ ಹಿಟ್ನಾಳ ಕುಟುಂಬಕ್ಕಷ್ಟೇ ಟಿಕೆಟ್ ನೀಡಲಾಗುತ್ತಿದೆ ಎನ್ನುವುದು ಕಾರ್ಯಕರ್ತರ ದೂರು
- ಗಂಗಾವತಿ ವಿಧಾನಸಭೆ ಕ್ಷೇತ್ರ ಸೇರಿ ಕೆಲವೆಡೆ ಒಳಏಟಿನ ಭೀತಿ

• ಪ್ರಮೋದ

ಕೊಪ್ಪಳ: ಬಿಸಿಲಿನ ಜೊತೆಗೆ ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದ ಕಾವು ಕೂಡ ತಾರಕಕ್ಕೇರಿದೆ. ಅಧಿಕಾರದ ಚುಕ್ಕಾಣಿಯು ರಾಜಕೀಯದಲ್ಲಿ ಪಳಗಿರುವ ಹಿಟ್ನಾಳ ಕುಟುಂಬಕ್ಕೊ ಅಥವಾ ಬಿಜೆಪಿಯ ಹೊಸ ಮುಖ ಡಾ.ಬಸವರಾಜ ಕ್ಯಾವಟರ್ ಅವರಿಗೊ ಎನ್ನುವ ಚರ್ಚೆ ಜೋರಾಗಿದೆ.

ಹಿಂದಿನ ಮೂರು ದಶಕಗಳಿಂದ ಜಿಲ್ಲೆಯಲ್ಲಿ ರಾಜಕೀಯ ಎದುರಾಳಿಗಳಾಗಿದ್ದ ಕರಡಿ ಮತ್ತು ಹಿಟ್ನಾಳ ಕುಟುಂಬದವರು ಈಗ ಒಂದಾಗಿದ್ದು, ಡಾ.ಬಸವರಾಜ ಅವರನ್ನು ಸೋಲಿಸಲೇಬೇಕು ಎಂದು ಇನ್ನಿಲ್ಲದ ಕಸರತ್ತು ನಡೆಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಕೆ. ರಾಜಶೇಖರ ಹಿಟ್ನಾಳ ಹಿಂದೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಕುರುಬ ಸಮುದಾಯದ ರಾಜಶೇಖರ 2019ರಲ್ಲಿ ಮತ್ತು ಅವರ ತಂದೆ ಕೆ. ಬಸವರಾಜ ಹಿಟ್ನಾಳ 2014ರಲ್ಲಿ ಸೋತಿದ್ದರು. ಇವರಿಬ್ಬರನ್ನೂ ಸೋಲಿಸಿದ್ದ ಬಿಜೆಪಿಯ ಸಂಗಣ್ಣ ಕರಡಿ ಈಗ ಕಾಂಗ್ರೆಸ್ ಸೇರಿದ್ದು, ಇದರಿಂದ 'ಕೈ' ಪಾಳಯಕ್ಕೆ ಅನುಕೂಲವಾಗಲಿದೆ. ಜೊತೆಗೆ 'ಗ್ಯಾರಂಟಿ' ಯೋಜನೆಗಳ ಬಲವೂ ಅಭ್ಯರ್ಥಿಗೆ ವರದಾನವಾಗಲಿದೆ.

ಸೌಮ್ಯ ಸ್ವಭಾವದ ಮತ್ತು ವೃತ್ತಿಯಲ್ಲಿ ವೈದ್ಯರಾಗಿರುವ ಬಸವರಾಜ ಅವರ ತಂದೆ ಕೆ. ಶರಣಪ್ಪ, ಕುಷ್ಟಗಿ ಕ್ಷೇತ್ರದ ಮಾಜಿ ಶಾಸಕರು. ಹೀಗಾಗಿ ಕುಟುಂಬದವರಿಗೆ ಜನರೊಂದಿಗೆ ಒಡನಾಟವಿದೆ. ಕೊಪ್ಪಳ ಲೋಕಸಭಾ ಕ್ಷೇತ್ರದ ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಮೊದಲು ಕುಷ್ಟಗಿಯಲ್ಲಿ ಮಾತ್ರ ಬಿಜೆಪಿ ಶಾಸಕರಿದ್ದರು. ಶಾಸಕ ಜನಾರ್ದನ ರೆಡ್ಡಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು ಬಿಜೆಪಿಯಲ್ಲಿ ವಿಲೀನ ಮಾಡಿದ್ದರಿಂದ ಇದೀಗ 'ಕಮಲ'ದ ಶಕ್ತಿ ಎರಡಕ್ಕೇರಿದೆ. ಪ್ರಚಾರದಲ್ಲಿ ಕಾಂಗ್ರೆಸ್ಸಿಗರ ವಿರುದ್ಧ ರೆಡ್ಡಿ ಆಡುತ್ತಿರುವ ಆಕ್ರೋಶಭರಿತ ಮಾತುಗಳು ಚುನಾವಣಾ ಕಣದ ರಂಗೇರಿಸಿವೆ.

ಕೊಪ್ಪಳ

ಕ್ಷೇತ್ರದಲ್ಲಿ ಮೊದಲಿನಿಂದಲೂ ಮುಂದುವರಿದವರು, ಹಿಂದುಳಿದವರು ಎಂಬ ಒಡಕಿನ ರಾಜಕಾರಣವೇ ಹೆಚ್ಚು ಚರ್ಚೆಯಲ್ಲಿದ್ದು, ಈ ಬಾರಿಯೂ ಇದು ಮುನ್ನಲೆಗೆ ಬಂದಿದೆ. ಪಂಚಮಸಾಲಿ ಸಮುದಾಯದ ಸಂಗಣ್ಣ 'ಕೈ' ಹಿಡಿದರೂ, ಬಿಜೆಪಿ ಅದೇ ಸಮುದಾಯದ ಡಾ.ಬಸವರಾಜ ಅವರಿಗೆ ಟಿಕೆಟ್ ನೀಡಿದ್ದರಿಂದ ಸಮಾಜದ ಮತಗಳು ವಿಭಜನೆಯಾಗುವ ಸಾಧ್ಯತೆ ಕಡಿಮೆ. ಬಿಜೆಪಿ ಅಭ್ಯರ್ಥಿ ಹೊಸಬರಾದರೂ ಪಕ್ಷದ ಬೆಂಬಲ ಮತ್ತು ನರೇಂದ್ರ ಮೋದಿ 'ನಾಮಬಲ'ವೇ ಅವರಿಗೆ ಶ್ರೀರಕ್ಷೆಯಾಗಿದೆ. ಶ್ರೀರಾಮನ ಬಂಟ ಹನುಮ ಜನಿಸಿದ ನಾಡು ಎನ್ನುವುದೂ ಬಿಜೆಪಿಗೆ ವರದಾನ.

ಬಿಜೆಪಿಗೆ ಇದು ಸ್ವಾಭಿಮಾನದ ಪ್ರಶ್ನೆಯ ಚುನಾವಣೆಯೂ ಆಗಿದೆ. ಬಸವರಾಜ ಪ್ರಚಾರಕ್ಕೆ ಹೋದಾಗ ಅವರಿಂದ ಚಿಕಿತ್ಸೆ ಪಡೆದ ರೋಗಿಗಳು, 'ನಿಮ್ಮಂಥವರು ಚುನಾವಣೆಗೆ ಸ್ಪರ್ಧಿಸಿದ್ದು ಒಳ್ಳೆಯದಾಯಿತು' ಎನ್ನುವ ಮಾತುಗಳನ್ನಾಡುತ್ತಿದ್ದಾರೆ. ಲೋಕಸಭಾ ಕ್ಷೇತ್ರದ ಪ್ರಮುಖ ಊರುಗಳನ್ನು ಸುತ್ತುಹಾಕಿ ಬಂದಾಗ ಬಹುತೇಕ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು 'ಗ್ಯಾರಂಟಿ' ಜಪಿಸುತ್ತಿದ್ದರೆ, ಯುವಜನತೆ 'ದೇಶಕ್ಕೆ ನರೇಂದ್ರ ಮೋದಿಯೇ ಮತ್ತೆ ಪ್ರಧಾನಿಯಾಗಬೇಕು' ಎನ್ನುವ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

ಇವರಿಬ್ಬರನ್ನು ಹೊರತುಪಡಿಸಿ ವಿವಿಧ ಪಕ್ಷಗಳಿಂದ ಮತ್ತು ಪಕ್ಷೇತರರಾಗಿ 17 ಜನ ಕಣದಲ್ಲಿದ್ದಾರೆ. ಚುನಾವಣಾ ಫಲಿತಾಂಶದ ಏರಿಳಿತಕ್ಕೆ ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ಗಳಿಸುವ ಮತಗಳು ಪ್ರಮುಖವಾಗಿದ್ದು, ಅಲ್ಲಿನ ಕಾಂಗ್ರೆಸ್‌ನಲ್ಲಿ ಬಣ ರಾಜಕಾರಣ ಜೋರಾಗಿದೆ. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಜನಾರ್ದನ ರೆಡ್ಡಿ ನೀಡಿದ ಯಾವ ಭರವಸೆಯೂ ಈಡೇರಿಲ್ಲ. ಹೀಗಾಗಿ ಮತದಾರನ ಮನದ 'ಮತಗುಟ್ಟು' ಕುತೂಹಲ ಮೂಡಿಸಿದೆ. ಒಂದು ವೇಳೆ ಕಾಂಗ್ರೆಸ್ ಗೆದ್ದರೆ ಹಿಟ್ನಾಳ ಕುಟುಂಬದ ರಾಜಕೀಯ ಶಕ್ತಿಗೆ ಬಲ ಬರುತ್ತದೆ. ಡಾ.ಬಸವರಾಜ ಜಯಿಸಿದರೆ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತದೆ. ❖

ಕುತೂಹಲ ಮೂಡಿಸಿದ 'ಬಲ' ಪ್ರಯೋಗ

• ಬಸವರಾಜ್ ಸಂಪಳ್ಳಿ

ವಿಜಯಪುರ: ಪರಿಶಿಷ್ಟ ಜಾತಿಗೆ ಮೀಸಲಾಗಿರುವ ವಿಜಯಪುರ ಲೋಕಸಭಾ ಕ್ಷೇತ್ರದ ಚುನಾವಣಾ ಕಣದಲ್ಲಿ ಎಂಟು ಅಭ್ಯರ್ಥಿಗಳು ಇದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಈ ಹಿಂದಿನ ಮೂರು ಚುನಾವಣೆಗಳಲ್ಲೂ ಕಾಂಗ್ರೆಸ್, ಬಂಜಾರ ಸಮಾಜಕ್ಕೆ ಟಿಕೆಟ್ ನೀಡಿತ್ತು. ಇದರಿಂದ ಬಿಜೆಪಿಯ ರಮೇಶ ಜಿಗಜಿಣಗಿ ಅವರು ಪರಿಶಿಷ್ಟ ಜಾತಿಯ ಎಡಗೈ ಮತ್ತು ಬಲಗೈ ಸಮಾಜಗಳ ಮತಗಳ ಕ್ರೋಢೀಕರಣದಿಂದ ಸುಲಭವಾಗಿ ಸತತ ಗೆಲುವು ದಾಖಲಿಸಿದರು. ಈ ಸಲ ಕಾಂಗ್ರೆಸ್ ತನ್ನ ವರಸೆ ಬದಲಿಸಿದೆ.

ಜಿಲ್ಲೆಯಲ್ಲಿ 'ಎಡಗೈ' (ಮಾದಿಗ) ಸಮಾಜಕ್ಕಿಂತ ಬಹುಸಂಖ್ಯೆಯಲ್ಲಿರುವ 'ಬಲಗೈ' ಸಮಾಜದ (ಚಲುವಾದಿ) ಮುಖಂಡ ರಾಜು ಆಲಗೂರ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಜಿಗಜಿಣಗಿ 'ಬಲ' ಕುಗ್ಗಿಸಲು ಕಾಂಗ್ರೆಸ್ ತಂತ್ರ ಹೆಣೆದಿದ್ದು, ಎಷ್ಟರ ಮಟ್ಟಿಗೆ ಫಲಪ್ರದವಾಗಲಿದೆ ಎಂಬುದೇ ಕುತೂಹಲ.

'ಎಸ್‌ಸಿ ಮೀಸಲು ಕ್ಷೇತ್ರ, ಯಾರೇ ಆಯ್ಕೆಯಾದರೂ ನಮಗೇನು ಪ್ರಯೋಜನ' ಎಂಬ ಪ್ರಬಲವರ್ಗದವರ ನಾಯಕರು, ಮತದಾರರ ಉದಾಸೀನತೆಯು ಕಣದಲ್ಲಿ ಕಂಡುಬರುತ್ತಿದೆ. ಪ್ರಬಲವರ್ಗದವರ ಲಿಂಗಾಯತ ಸಮಾಜದ ಒಲವು ಹೊಂದಿರುವ ಬಿಜೆಪಿಗೆ ಇದರ ಲಾಭ ಹೆಚ್ಚು ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ನಡೆದಿದೆ. ಆದರೆ, ಕಾಂಗ್ರೆಸ್‌ನ ಐವರು ಲಿಂಗಾಯತ ಶಾಸಕರದ್ದು ಪಾತ್ರ ಹೇಗಿರಲಿದೆ ಎಂಬುದನ್ನು ಕಾದು ನೋಡಬೇಕಿದೆ.

'ಪ್ರಧಾನಿ ಮೋದಿ ನಮ್ಮ ಸಮಾಜಕ್ಕೆ(ತೇಲಿ) ಸೇರಿದವರು' ಎಂಬ ಕಾರಣಕ್ಕೆ ಬಿಜೆಪಿ ಬೆನ್ನಿಗೆ ಪ್ರಬಲವಾಗಿ ನಿಂತಿರುವ ಜಿಲ್ಲೆಯ ಲಿಂಗಾಯತ ಗಾಣಿಗ ಸಮಾಜದ ವೋಟುಗಳನ್ನು ತನ್ನತ್ತ ಸೆಳೆಯಲು ಕಾಂಗ್ರೆಸ್ ಯತ್ನ ನಡೆಸಿದೆ. ಚುನಾವಣೆ ಹೊಸ್ತಿಲಿನಲ್ಲಿ ಗಾಣಿಗ ಸಮಾಜದ ಮುಖಂಡ ಮಲ್ಲಿಕಾರ್ಜುನ ಲೋಣಿ ಅವರಿಗೆ ಜಿಲ್ಲಾ ಕಾಂಗ್ರೆಸ್ ಚುಕ್ಕಾಣಿ ನೀಡಿ, ಮತ ಸೆಳೆಯಲು ಮುಂದಾಗಿದೆ.

ವಿಜಯಪುರ

ಸಚಿವ ಎಂ.ಬಿ.ಪಾಟೀಲ ಮುಂದಾಳತ್ವದಲ್ಲಿ ಈ ಬಾರಿ ಕಾಂಗ್ರೆಸ್ ಸಚಿವರು, ಶಾಸಕರು, ಇನ್ನುಳಿದ ಮುಖಂಡರು ಒಗ್ಗಟ್ಟಾಗಿ ಬಿಜೆಪಿ ವಿರುದ್ಧ ಮುಗಿಬಿದ್ದಿದ್ದಾರೆ.


ಜಿಲ್ಲೆಯಲ್ಲಿ ಕಾಂಗ್ರೆಸ್ ರಾಜಕೀಯವಾಗಿ, ಆರ್ಥಿಕವಾಗಿ ಹೆಚ್ಚು ಪ್ರಬಲವಾಗಿದೆ. ಪ್ರಚಾರದಲ್ಲಿ ಒಗ್ಗಟ್ಟು, ಹುಮಸ್ಸು ಹೆಚ್ಚಿದೆ. ಇದಕ್ಕೆ ತದ್ವಿರುದ್ಧವಾಗಿ ಬಿಜೆಪಿ ಪ್ರಬಲ ಕಾರ್ಯಕರ್ತರ ಪಡೆ ಹೊಂದಿದೆ. ಆದರೆ, ಸ್ಥಳೀಯ ಮುಖಂಡರು, ನಾಯಕರು ಶಕ್ತಿ ಕಳೆದುಕೊಂಡು ದುರ್ಬಲವಾಗಿದ್ದಾರೆ. ಒಗ್ಗಟ್ಟಿನ ಕೊರತೆಯೂ ಎದ್ದು ಕಾಣುತ್ತಿದೆ, ಪ್ರಚಾರವೂ ಮಂಕಾಗಿದೆ.

ಹಾವು–ಮುಂಗುಸಿಯಂತಿದ್ದ ಸಂಸದ ರಮೇಶ ಜಿಗಜಿಣಗಿ ಮತ್ತು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ನಡುವಿನ ವೈಮನಸ್ಸು ಕರಗಿದೆ. ಪರಸ್ಪರ ಒಂದಾಗಿರುವುದು ಚುನಾವಣೆಯಲ್ಲಿ ಬಿಜೆಪಿಗೆ ವರವಾಗಲಿದೆ ಎಂಬ ನಿರೀಕ್ಷೆ ಇದೆ. ಆದರೆ, ಯತ್ನಾಳ ಅವರ ಬೈಯ್ಯಾಟದ ಭಾಷಣವು ಬಿಜೆಪಿಗೆ ಮತ ತಂದುಕೊಡುತ್ತದೆಯೇ ಅಥವಾ ಹಾನಿ ಮಾಡುತ್ತದೆಯೋ ಎಂಬ ಪ್ರಶ್ನೆಗೆ ಸುಲಭವಾಗಿ ಉತ್ತರ ಸಿಗುವುದು ಕಷ್ಟ.

ಬೃಹತ್ ಕೈಗಾರಿಕೆ, ಸರ್ಕಾರಿ ವೈದ್ಯಕೀಯ ಕಾಲೇಜು, ಆಸ್ಪತ್ರೆ ಸ್ಥಾಪಿಸಬೇಕು. ವಿಜಯಪುರವನ್ನು ಸ್ಮಾರ್ಟ್‌ಸಿಟಿ ಯೋಜನೆಗೆ ಸೇರ್ಪಡೆಗೊಳಿಸಿ, ಅಭಿವೃದ್ಧಿ ಮಾಡಬೇಕು ಮೊದಲಾದ ಬೇಡಿಕೆಗಳು 'ಗ್ಯಾರಂಟಿ–ಮೋದಿ ಅಲೆ' ಚರ್ಚೆಯಲ್ಲಿ ಹಿಂದೆ ಸರಿದಿವೆ.


ಗ್ಯಾರಂಟಿ ಯೋಜನೆಗಳ ಲಾಭದ ನಿರೀಕ್ಷೆಯಲ್ಲಿ ಕಾಂಗ್ರೆಸ್, ಮೋದಿ ಮೋಡಿಯ ನಿರೀಕ್ಷೆಯಲ್ಲಿ ಬಿಜೆಪಿ ಇದೆ. ಜೆಡಿಎಸ್–ಬಿಜೆಪಿ ಮೈತ್ರಿ ವೇದಿಕೆಗೆ ಸೀಮಿತವಾಗಿದೆ. ದಿನದಿಂದ ದಿನಕ್ಕೆ ಪ್ರಚಾರ ರಂಗೇರುತ್ತಿದ್ದು, ಕುತೂಹಲ ಹೆಚ್ಚುತ್ತಿದೆ. ❖

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **61.89%**



ಕ್ಷೇತ್ರವನ್ನು ಕಾಡುವ ವಿಷಯಗಳು


- ಕೃಷ್ಣಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆಯಾಗಿ ಘೋಷಣೆಗೆ ಬೇಡಿಕೆ
- ದ್ರಾಕ್ಷಿ, ಲಿಂಬೆ ಬೆಳೆಗೆ ಬೆಂಬಲ ಬೆಲೆ ನೀಡಿ, ಸರ್ಕಾರ ಖರೀದಿಸಬೇಕು
- ಗೋಳಗುಮ್ಮಟ, ಇಬ್ರಾಹಿಂರೋಜಾ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆ ಮಾಡಬೇಕು
- ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್‌ಗೆ ಏರಿಸಬೇಕು



ಶಾಸಕರ ಬಲಾಬಲ

ಕಾಂಗ್ರೆಸ್ 6
ಬಿಜೆಪಿ 1
ಜೆಡಿಎಸ್ 1

1. ನಾಗಠಾಣ
2. ಇಂಡಿ
3. ಸಿಂದಗಿ
4. ದೇವರಹಿಪ್ಪರಗಿ
5. ಮುದ್ದೇಬಿಹಾಳ
6. ಬಸವನಬಾಗೇವಾಡಿ
7. ಬಬಲೇಶ್ವರ
8. ವಿಜಯಪುರ





ರಮೇಶ ಜಿಗಜಿಣಗಿ (ಬಿಜೆಪಿ)

ಮೂರು ಬಾರಿ ಸಂಸದನಾಗಿ ಕ್ಷೇತ್ರಕ್ಕೆ ₹1 ಲಕ್ಷ ಕೋಟಿ ಅನುದಾನ ತಂದಿರುವೆ, ಕ್ಷೇತ್ರದ ಬೇಡಿಕೆಗೆ ಸರ್ಕಾರ ಸ್ಪಂದಿಸಿರುವಾಗ ಸಂಸತ್ತಿನಲ್ಲಿ ಪ್ರಶ್ನೆ ಕೇಳುವ ಪ್ರಮೇಯವೇ ಉದ್ಭವಿಸಿಲ್ಲ

- ಸರಳ, ಸಜ್ಜನ, ಜನಾನುರಾಗಿ, ಮತದಾರರ ಜೊತೆ ನೇರ ಸಂಪರ್ಕ
- ಮೂರು ಬಾರಿ ಗೆಲುವು, ಜಿಲ್ಲೆಯ ನಾಡಿಮಿಡಿತ ಅರಿವು
- ಸಂಸತ್ತಿನಲ್ಲಿ ಕ್ಷೇತ್ರದ ವಿಷಯವಾಗಿ ಧ್ವನಿ ಎತ್ತಿಲ್ಲ
- ಬಿಜೆಪಿ ಬಲ ಕುಂಟಿತ, ಆಡಳಿತ ವಿರೋಧಿ ಅಲೆ



ರಾಜು ಆಲಗೂರ (ಕಾಂಗ್ರೆಸ್)

ಜಿಗಜಿಣಗಿ ಮೂರು ಬಾರಿ ಸಂಸದರಾದರೂ ಜಿಲ್ಲೆ ನಿರೀಕ್ಷಿತ ಅಭಿವೃದ್ಧಿ ಕಂಡಿಲ್ಲ. ಸಂಸತ್ತಿನಲ್ಲಿ ಕ್ಷೇತ್ರದ ಪರ ಧ್ವನಿ ಎತ್ತಿಲ್ಲ, ನಾನು ಆಯ್ಕೆಯಾದರೆ ಕ್ಷೇತ್ರವನ್ನು ಸಮರ್ಥವಾಗಿ ಪ್ರತಿನಿಧಿಸುವೆ

- ಜಿಲ್ಲೆಯಲ್ಲಿ ಕಾಂಗ್ರೆಸ್ ಬಲಾಢ್ಯ, ಗ್ಯಾರಂಟಿ ಯೋಜನೆಗಳ ಬಲ
- ಎರಡು ಬಾರಿ ಶಾಸಕರಾಗಿ ಉತ್ತಮ ಕಾರ್ಯ, ದಲಿತ ಚಳವಳಿಯಲ್ಲಿ ಸಕ್ರಿಯ
- ಜನರ ಒಡನಾಟ ಕಡಿಮೆ, ಪ್ರಬಲವರ್ಗದವರಿಗೆ ಅಪಥ್ಯ
- ಸ್ವಶಕ್ತಿಗಿಂತ ಪಕ್ಷದ ಸಚಿವರು, ಶಾಸಕರ ಮೇಲೆ ಅವಲಂಬಿತ

ಲೋಕಸಭಾ ಚುನಾವಣೆ ಮೂರನೇ ಹಂತದ ಮತದಾನ • ಎಡಿಆರ್ ವರದಿಯಲ್ಲಿ ಉಲ್ಲೇಖ

ಶೇ 13 ಅಭ್ಯರ್ಥಿಗಳ ವಿರುದ್ಧ ಗಂಭೀರ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ಮೂರನೇ ಹಂತದ ಮತದಾನ ನಡೆಯಲಿರುವ 12 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 95 ಕ್ಷೇತ್ರಗಳಲ್ಲಿ 1,352 ಹುರಿಯಾಳುಗಳು ಕಣದಲ್ಲಿದ್ದಾರೆ. ಈ ಪೈಕಿ ಶೇ 13ರಷ್ಟು ಅಭ್ಯರ್ಥಿಗಳು ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಶೇ 29ರಷ್ಟು ಕೋಟ್ಯಧಿಪತಿಗಳಾಗಿದ್ದಾರೆ.

ಅಭ್ಯರ್ಥಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸೋಮವಾರ ವರದಿ ಪ್ರಕಟಿಸಿದೆ.

ಮೂರನೇ ಹಂತದ ಮತದಾನ ಮೇ 7ರಂದು ನಡೆಯಲಿದೆ. ಅಖಾಡದಲ್ಲಿ 123 (ಶೇ 9) ಮಹಿಳಾ ಅಭ್ಯರ್ಥಿಗಳಿದ್ದಾರೆ. ತಮ್ಮ ಬಳಿ ಆಸ್ತಿ ಇಲ್ಲವೆಂದು ಐವರು ಅಭ್ಯರ್ಥಿಗಳು ಘೋಷಿಸಿಕೊಂಡಿದ್ದಾರೆ. ಇಬ್ಬರು ಅಭ್ಯರ್ಥಿಗಳು ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದಾರೆ.

ಅಭ್ಯರ್ಥಿಗಳ ವಿವರ

1,352 ಒಟ್ಟು ಅಭ್ಯರ್ಥಿಗಳು

123 ಮಹಿಳೆಯರು

1,352 ಪ್ರಮಾಣಪತ್ರ ವಿಶ್ಲೇಷಣೆ

ಅಪರಾಧ ಪ್ರಕರಣ

244 ಅಪರಾಧ ಪ್ರಕರಣ ಎದುರಿಸುತ್ತಿರುವ ಅಭ್ಯರ್ಥಿಗಳು

172 ಗಂಭೀರ

17 ದ್ವೇಷ ಭಾಷಣ

24 ಕೊಲೆ ಯತ್ನ

38 ಮಹಿಳೆಯರ ಮೇಲಿನ ಅಪರಾಧ

2 ಅತ್ಯಾಚಾರ

7 ಶಿಕ್ಷೆಗೆ ಒಳಗಾದವರು

5 ಕೊಲೆ ಪ್ರಕರಣಗಳಲ್ಲಿ ಭಾಗಿ

ಗಂಭೀರ ಪ್ರಕರಣ ಹೊಂದಿರುವ ಪಕ್ಷ ಮತ್ತು ಅಭ್ಯರ್ಥಿಗಳು

ಪಕ್ಷ	ಅಭ್ಯರ್ಥಿಗಳು
ಕಾಂಗ್ರೆಸ್	14
ಬಿಜೆಪಿ	14
ಆರ್‌ಜೆಡಿ	2
ಎನ್‌ಸಿಪಿ (ಶರದ್ ಪವಾರ್ ಬಣ)	2
ಶಿವಸೇನೆ (ಯುಬಿಟಿ)	2
ಜೆಡಿಯು	1
ತೃಣಮೂಲ ಕಾಂಗ್ರೆಸ್	1

ಶಿಕ್ಷಣ

44 ಡಿಪ್ಲೊಮಾ

591 ಪದವೀಧರ ಅಥವಾ ಮೇಲ್ಪಟ್ಟವರು

639 ತರಗತಿ 5 ಮತ್ತು ಪಿಯುಸಿ ನಡುವೆ ಕಲಿತವರು

ಹಣ ಮತ್ತು ಅಭ್ಯರ್ಥಿಗಳು — ಕೋಟ್ಯಧಿಪತಿಗಳು 392

ಪಕ್ಷ	ಕೋಟ್ಯಧಿಪತಿಗಳು
ಬಿಜೆಪಿ	77
ಕಾಂಗ್ರೆಸ್	60
ಎಸ್ಪಿ	9
ಶಿವಸೇನೆ (ಯುಬಿಟಿ)	5
ತೃಣಮೂಲ ಕಾಂಗ್ರೆಸ್	4
ಜೆಡಿಯು	3
ಎನ್‌ಸಿಪಿ (ಶರದ್ ಪವಾರ್ ಬಣ)	3
ಎನ್‌ಸಿಪಿ (ಅಜಿತ್ ಪವಾರ್ ಬಣ)	3
ಆರ್‌ಜೆಡಿ	3
ಶಿವಸೇನಾ (ಶಿಂದೆ ಬಣ)	2



ಪಕ್ಷ	ಸರಾಸರಿ ಆಸ್ತಿ
ಎನ್‌ಸಿಪಿ (ಶರದ್ ಪವಾರ್ ಬಣ)	₹89.68 ಕೋಟಿ
ಎನ್‌ಸಿಪಿ (ಅಜಿತ್ ಪವಾರ್ ಬಣ)	₹62.64 ಕೋಟಿ
ಬಿಜೆಪಿ	₹44.07 ಕೋಟಿ
ಎಸ್ಪಿ	₹42.93 ಕೋಟಿ
ಕಾಂಗ್ರೆಸ್	₹20.59 ಕೋಟಿ
ತೃಣಮೂಲ ಕಾಂಗ್ರೆಸ್	₹9.96 ಕೋಟಿ
ಶಿವಸೇನೆ (ಶಿಂದೆ ಬಣ)	₹9.81 ಕೋಟಿ
ಶಿವಸೇನೆ (ಯುಬಿಟಿ)	₹5.65 ಕೋಟಿ
ಆರ್‌ಜೆಡಿ	₹5.47 ಕೋಟಿ

ಅಭ್ಯರ್ಥಿಗಳ ಸರಾಸರಿ ಆಸ್ತಿ ₹5.66 ಕೋಟಿ

ಬಡ ಅಭ್ಯರ್ಥಿಗಳು

ಇರ್ಫಾನ್ ಅಬುತಾಲಿಬ್ (ಕೊಲ್ಹಾಪುರ, ಪಕ್ಷೇತರ): ₹100

ರೇಖಾಬೆನ್ ಚೌಧರಿ (ಬಾಡೋಲಿ, ಬಿಎಸ್‌ಪಿ): ₹2,000

ಮನೋಹರ ಪ್ರದೀಪ್ ಸಾತ್ಪುಟೆ (ಹತ್ಕನಂಗಲೆ, ಪಕ್ಷೇತರ): ₹2,000

ಶ್ರೀಮಂತ ಅಭ್ಯರ್ಥಿಗಳು

ಪಲ್ಲವಿ ಶ್ರೀನಿವಾಸ್ ಡೆಂಪೊ (ದಕ್ಷಿಣ ಗೋವಾ, ಬಿಜೆಪಿ) ₹1361.68 ಕೋಟಿ

ಜ್ಯೋತಿರಾದಿತ್ಯ ಎಂ. ಸಿಂಧಿಯಾ (ಗುನಾ, ಬಿಜೆಪಿ) ₹424.74 ಕೋಟಿ

ಛತ್ರಪತಿ ಶಾಹು ಶಹಾಜಿ (ಕೊಲ್ಹಾಪುರ, ಕಾಂಗ್ರೆಸ್): ₹342.86 ಕೋಟಿ

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

‘ಯುಸಿಸಿಯಿಂದ ಹಿಂದೂಗಳಿಗೆ ಪ್ರಯೋಜನವಿಲ್ಲ’

ಜಂಗೀಪುರ (ಪಶ್ಚಿಮ ಬಂಗಾಳ) (ಪಿಟಿಐ): ಬಿಜೆಪಿಯು ಚುನಾವಣೆಗಳಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಒಂದು ಸಾಧನವನ್ನಾಗಿ ಬಳಸುತ್ತಿದೆ ಎಂದು ಟೀಕಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಅದರಿಂದ ಹಿಂದೂಗಳಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಸೋಮವಾರ ಪ್ರತಿಪಾದಿಸಿದರು.



ಮಮತಾ ಬ್ಯಾನರ್ಜಿ

ಅಲ್ಪಸಂಖ್ಯಾತ ಪ್ರಾಬಲ್ಯದ ಮುರ್ಶಿದಾಬಾದ್ ಹಾಗೂ ಜಂಗೀಪುರ ಕ್ಷೇತ್ರಗಳಲ್ಲಿ ಸರಣಿ ರ‍್ಯಾಲಿಗಳನ್ನು ನಡೆಸಿದ ಅವರು, ‘ಚುನಾವಣೆಯ ಆರಂಭದ ಹಂತಗಳಲ್ಲಿ ಸೋಲುವ ಭಯದಿಂದ ಬಿಜೆಪಿ ವಿಭಜನೆಯ ತಂತ್ರಗಳನ್ನು ಅನುಸರಿಸುತ್ತಿದೆ’ ಎಂದು ಆರೋಪಿಸಿದರು.

‘ಸಿಎಎ ಎನ್ನುವುದು ಕಾನೂನುಬದ್ಧ ಪ್ರಜೆಗಳನ್ನು ವಿದೇಶಿಯರನ್ನಾಗಿ ಪರಿವರ್ತಿಸುವ ಬಲೆಯಾಗಿದೆ. ಒಮ್ಮೆ ಸಿಎಎ ಜಾರಿಗೆ ಬಂದರೆ, ಎನ್‌ಆರ್‌ಸಿ ಅದರ ನಂತರ ಬರುತ್ತದೆ. ನಾವು ಸಿಎಎ ಆಗಲಿ, ಎನ್‌ಆರ್‌ಸಿ ಆಗಲಿ ಪಶ್ಚಿಮ ಬಂಗಾಳದಲ್ಲಿ ಜಾರಿ ಮಾಡಲು ಬಿಡುವುದಿಲ್ಲ’ ಎಂಬುದನ್ನು ಪುನರುಚ್ಚರಿಸಿದರು.

ಚುನಾವಣೆಯ ಎರಡು ಹಂತಗಳಲ್ಲೇ ‘ಇಂಡಿ’ ಮೈತ್ರಿಕೂಟ ಪರಾಭವಗೊಂಡಿದೆ: ಮೋದಿ

‘ಕಳಂಕಿತ ಕಾಂಗ್ರೆಸ್‌ಗೆ ಅಧಿಕಾರದ ಕನಸು’

ಸೋಲಾಪುರ (ಮಹಾರಾಷ್ಟ್ರ) (ಪಿಟಿಐ): ಕಳಂಕಿತ ಹಿನ್ನೆಲೆಯ ನಡುವೆಯೂ ಕಾಂಗ್ರೆಸ್ ಪಕ್ಷವು ದೇಶದಲ್ಲಿ ಅಧಿಕಾರ ಹಿಡಿಯುವ ಕನಸು ಕಾಣುತ್ತಿದೆ. ಆದರೆ, ಲೋಕಸಭಾ ಚುನಾವಣೆಯ ಎರಡು ಹಂತಗಳಲ್ಲೇ ‘ಇಂಡಿ’ ಮೈತ್ರಿಕೂಟ ಪರಾಭವಗೊಂಡಿರುವುದು ಅದಕ್ಕೆ ಗೊತ್ತಿಲ್ಲ ಎಂದು ಪ್ರಧಾನಿ ಮೋದಿ ಸೋಮವಾರ ಹೇಳಿದ್ದಾರೆ.

ಸೋಲಾಪುರದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ನಾಯಕತ್ವದ ವಿಚಾರಕ್ಕೆ ಸಂಬಂಧಿಸಿದಂತೆ ‘ಇಂಡಿ’ ಬ್ಲಾಕ್‌ನಲ್ಲಿ ‘ಮಹಾಯುದ್ಧ’ವೇ ನಡೆಯುತ್ತಿದೆ. ಅವರು ಈ ಕುರಿತು ಒಂದು ಸೂತ್ರವನ್ನು ಕಂಡುಕೊಂಡಿದ್ದು, ಅದರಂತೆ ಐದು ವರ್ಷಕ್ಕೆ ಐವರು ಪ್ರಧಾನಿಗಳಾಗಲಿದ್ದಾರೆ. ಅಂತಿಮವಾಗಿ ದೇಶವನ್ನು ಲೂಟಿ ಮಾಡಲಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಈ ಚುನಾವಣೆಯಲ್ಲಿ ನೀವು ಮುಂದಿನ ಐದು ವರ್ಷಕ್ಕೆ ಅಭಿವೃದ್ಧಿಯ ಗ್ಯಾರಂಟಿಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದೀರಿ. ಇನ್ನೊಂದೆಡೆ, 2014ಕ್ಕೆ ಮುಂಚೆ ದೇಶಕ್ಕೆ ಭ್ರಷ್ಟಾಚಾರ, ಭಯೋತ್ಪಾದನೆ, ದುರಾಡಳಿತ ನೀಡಿದ ವರಿದ್ದಾರೆ. ನೀವು 10 ವರ್ಷ ಮೋದಿಯನ್ನು ಪರೀಕ್ಷಿಸಿದ್ದೀರಿ. ಅವರ ಪ್ರತಿ ಹೆಜ್ಜೆಯನ್ನು ನೋಡಿದ್ದೀರಿ, ಪ್ರತಿ ಪದವನ್ನೂ ಲೆಕ್ಕ ಹಾಕಿದ್ದೀರಿ’ ಎಂದು ಹೇಳಿದರು.



ಲೋಕಸಭಾ ಚುನಾವಣೆಯ ಪ್ರಚಾರಕ್ಕಾಗಿ ಮಹಾರಾಷ್ಟ್ರದ ಸೋಲಾಪುರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪಕ್ಷದ ಸ್ಥಳೀಯ ಮುಖಂಡರು ಸ್ವಾಗತಿಸಿದರು — ಪಿಟಿಐ ಚಿತ್ರ

‘ನಾಯಕತ್ವಕ್ಕೆ ತಮ್ಮಲ್ಲಿ ಹಲವಾರು ಆಯ್ಕೆಗಳಿವೆ ಎಂದು ‘ನಕಲಿ’ ಶಿವಸೇನಾ ಹೇಳಿದೆ’ ಎಂದು ಉದ್ಧವ್ ಠಾಕ್ರೆ ಅವರನ್ನು ಪ್ರಧಾನಿ ಲೇವಡಿ ಮಾಡಿದರು.

ಮಹಾರಾಷ್ಟ್ರ ಸಾಮಾಜಿಕ ನ್ಯಾಯದ ನೆಲ ಎಂದು ಬಣ್ಣಿಸಿದ ಮೋದಿ, ‘ನೀವು ಕಾಂಗ್ರೆಸ್‌ನ 60 ವರ್ಷಗಳ ಆಡಳಿತ ನೋಡಿದ್ದೀರಿ ಮತ್ತು ಮೋದಿಯ 10 ವರ್ಷಗಳ ‘ಸೇವಾ ಪರ್ವ’ ನೋಡಿದ್ದೀರಿ. ಒಂದು ದಶಕದಲ್ಲಿ ನಡೆದಂಥ ಸಾಮಾಜಿಕ ನ್ಯಾಯದ ಕೆಲಸಗಳು ಸ್ವಾತಂತ್ರ್ಯದ ನಂತರ ಎಂದೂ ಆಗಿರಲಿಲ್ಲ’ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ಹೇಳಿದ್ದು..

- ಹಿಂದುಳಿದ ವರ್ಗಗಳಿಗೆ ಏನೂ ಮಾಡದೇ ಅವರು ತಮ್ಮ ‘ಆಶ್ರಿತ’ರಾಗಿಯೇ (ಅವಲಂಬಿತ) ಉಳಿಯುವಂತೆ ಮಾಡಿ ಮತ ಪಡೆದುಕೊಳ್ಳುವುದು ಕಾಂಗ್ರೆಸ್ ನೀತಿಯಾಗಿದೆ.
- ಹಿಂದುಳಿದವರ ಆಯೋಗಕ್ಕೆ ಸಾಂವಿಧಾನಿಕ ಸ್ಥಾನ ನೀಡಿದೆವು. ವೈದ್ಯಕೀಯ ಪರೀಕ್ಷೆಗಳಲ್ಲಿ ಒಬಿಸಿ ಮೀಸಲಾತಿ ಜಾರಿ ಮಾಡಿದೆವು. ಹಿಂದುಳಿದವರಿಗೆ ರಾಜಕೀಯ ಮೀಸಲಾತಿಯನ್ನು ಹೆಚ್ಚಿಸಲಾಗಿದ್ದು, ಅದನ್ನು 10 ವರ್ಷಕ್ಕೆ ಏರಿಸಲಾಗುವುದು.
- ದಲಿತರು, ಆದಿವಾಸಿಗಳ ಅಥವಾ ಹಿಂದುಳಿದವರ ಹಕ್ಕುಗಳನ್ನು ಕಸಿಯದೇ ‘ಸಾಮಾನ್ಯ ವರ್ಗ’ಕ್ಕೆ ಶೇ 10ರಷ್ಟು ಮೀಸಲಾತಿ ಕಲ್ಪಿಸಲಾಗಿದ್ದು, ಅದನ್ನು ದಲಿತ ನಾಯಕರು ಸೇರಿದಂತೆ ಎಲ್ಲರೂ ಸ್ವಾಗತಿಸಿದರು.
- ವಿದ್ಯಾರ್ಥಿಗಳು ವೈದ್ಯಕೀಯ, ಎಂಜಿನಿಯರಿಂಗ್ ಅನ್ನು ಮರಾಠಿ ಮಾಧ್ಯಮದಲ್ಲಿ ಓದಲು ಸಾಧ್ಯವಾಗುವಂತೆ ನಾವು ಮಾಡಿದ್ದೇವೆ. ನಿಮಗೆ ಇಂಗ್ಲಿಷ್ ಗೊತ್ತಿಲ್ಲದಿದ್ದರೂ ದೇಶವನ್ನು ಮುನ್ನಡೆಸಬಹುದು.
- ಕಾಂಗ್ರೆಸ್‌ನವರಿಗೆ ಹಿಂದುಳಿದವರು, ಆದಿವಾಸಿಗಳು, ದಲಿತರು ಎಂದೂ ದೇಶ ಆಳುವುದು ಬೇಕಿರಲಿಲ್ಲ. ಅವರು ದಲಿತ ನಾಯಕರನ್ನು ಅವಮಾನಿಸಿದರು. ಬಿಜೆಪಿ ದಲಿತರಿಗೆ, ಆದಿವಾಸಿಗಳಿಗೆ ಗರಿಷ್ಠ ಅವಕಾಶ ನೀಡಲು ಪ್ರಯತ್ನಿಸುತ್ತಿದೆ.
- ಕೇಂದ್ರದಲ್ಲಿ ಬಿಜೆಪಿ ಬೆಂಬಲಿತ ಸರ್ಕಾರವಿದ್ದಾಗ ಅಂಬೇಡ್ಕರ್ ಅವರಿಗೆ ‘ಭಾರತ ರತ್ನ’ ದೊರೆಯಿತು. ಎನ್‌ಡಿಎಯು ದಲಿತರ ಪುತ್ರ (ರಾಮನಾಥ್ ಕೋವಿಂದ್) ಮತ್ತು ಆದಿವಾಸಿ ಪುತ್ರಿಯನ್ನು (ದ್ರೌಪದಿ ಮುರ್ಮು) ರಾಷ್ಟ್ರಪತಿಗಳನ್ನಾಗಿ ಮಾಡಿತು.
- ‘ಇಂಡಿ’ ಕೂಟಕ್ಕೆ ದೂರದೃಷ್ಟಿಯೇ ಇಲ್ಲ. ನಮಗೆ ದೂರದೃಷ್ಟಿ ಇದ್ದು, ನಾವು ಅದನ್ನು ವಾಸ್ತವವನ್ನಾಗಿ ಬದಲಿಸಬಲ್ಲೆವು.
- ಕಾಂಗ್ರೆಸ್ ಪಕ್ಷವು ಜಮ್ಮು ಕಾಶ್ಮೀರದಲ್ಲಿ 370ನೇ ವಿಧಿ ಜಾರಿ ಮಾಡುವ ಮೂಲಕ ಅಂಬೇಡ್ಕರ್ ಅವರ ಸಂವಿಧಾನವನ್ನು ಜಾರಿ ಮಾಡಿರಲಿಲ್ಲ. ಆದರೆ, ಮೋದಿ ಅದನ್ನು ರದ್ದು ಮಾಡಿ, ಅಲ್ಲಿನ ಜನರಿಗೆ ಸಾಮಾಜಿಕ ನ್ಯಾಯದ ಹಕ್ಕನ್ನು ನೀಡಿದರು.



ನಾಮಪತ್ರ ಸಲ್ಲಿಕೆ

‘ಇಂಡಿಯಾ’ ಮೈತ್ರಿಕೂಟದ ಅಭ್ಯರ್ಥಿಗಳಾದ ಅರವಿಂದ್ ಸಾವಂತ್ ಮತ್ತು ಅನಿಲ್ ದೇಸಾಯಿ ಅವರು ಮುಂಬೈನಲ್ಲಿ ನಾಮಪತ್ರ ಸಲ್ಲಿಸುವ ಮೊದಲು ಬೆಂಬಲಿಗರು ಸಂಭ್ರಮಿಸಿದರು –ಪಿಟಿಐ ಚಿತ್ರ

ಇಂದೋರ್: ಹಿಂದೆ ಸರಿದ ಕಾಂಗ್ರೆಸ್ ಅಭ್ಯರ್ಥಿ

ಇಂದೋರ್ (ಪಿಟಿಐ): ಗುಜರಾತ್‌ನ ಸೂರತ್ ನಂತರ ಕಾಂಗ್ರೆಸ್ ಪಕ್ಷಕ್ಕೆ ಮಧ್ಯಪ್ರದೇಶದಲ್ಲಿಯೂ ಮುಖಭಂಗ ಉಂಟಾಗಿದೆ. ಇಂದೋರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಮ್, ಮತದಾನಕ್ಕೆ ಇನ್ನು ಎರಡು ವಾರ ಇರುವಾಗ ತಮ್ಮ ನಾಮಪತ್ರ ಹಿಂಪಡೆದಿದ್ದಾರೆ. ನಾಮಪತ್ರ ವಾಪಸ್ ಪಡೆದ ಬಳಿಕ ಅವರು ಬಿಜೆಪಿ ಕಚೇರಿಯಲ್ಲಿ ಕಾಣಿಸಿಕೊಂಡಿದ್ದಾರೆ.

ಬಿಜೆಪಿ ಫೋಟೊವೊಂದನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಮಧ್ಯಪ್ರದೇಶದ ಜಗದೀಶ್ ದೇವ್ಡಾ, ರಾಜ್ಯ ಸಚಿವ ಕೈಲಾಶ್ ವಿಜಯವರ್ಗೀಯ ಮತ್ತು ಇತರ ಮುಖಂಡರೊಂದಿಗೆ ಬಮ್ ಕಾಣಿಸಿಕೊಂಡಿದ್ದಾರೆ.

ಇಂದೋರ್ ಲೋಕಸಭಾ ಕ್ಷೇತ್ರಕ್ಕೆ ಮೇ 13ರಂದು ಮತದಾನ ನಡೆಯಲಿದ್ದು, ನಾಮಪತ್ರ ವಾಪಸ್ ಪಡೆಯಲು ಸೋಮವಾರ ಕಡೆಯ ದಿನವಾಗಿತ್ತು. ಬಮ್ ನಾಮಪತ್ರ ವಾಪಸ್ ಪಡೆದಿರುವುದನ್ನು ಚುನಾವಣಾಧಿಕಾರಿಯೂ ಆದ ಇಂದೋರ್ ಜಿಲ್ಲಾಧಿಕಾರಿ ಆಶೀಶ್ ಸಿಂಗ್ ಖಚಿತಪಡಿಸಿದ್ದಾರೆ.

‘ಕಾಂಗ್ರೆಸ್ ಅಭ್ಯರ್ಥಿ ಬಮ್ ಸೇರಿದಂತೆ ಮೂವರು ಸೋಮವಾರ ನಾಮಪತ್ರ ವಾಪಸ್ ಪಡೆದರು. ಆ ಪ್ರಕ್ರಿಯೆಯನ್ನು ವಿಡಿಯೊದಲ್ಲಿ ದಾಖಲಿಸಲಾಗಿದೆ. ಒಟ್ಟಾರೆ, ಕ್ಷೇತ್ರದಲ್ಲಿ ಒಂಬತ್ತು ಮಂದಿ ನಾಮಪತ್ರ ವಾಪಸ್ ಪಡೆದಿದ್ದು, 14 ಮಂದಿ ಕಣದಲ್ಲಿ ಉಳಿದಿದ್ದಾರೆ’ ಎಂದು ಸಿಂಗ್ ತಿಳಿಸಿದ್ದಾರೆ.

ಬಮ್ ಶೀಘ್ರದಲ್ಲೇ ಬಿಜೆಪಿ ಸೇರಲಿದ್ದಾರೆ ಎಂದು ಆ ಪಕ್ಷದ ಮೂಲಗಳು ತಿಳಿಸಿವೆ. ನಾಮಪತ್ರ ವಾಪಸ್ ಪಡೆಯಲು ಹೋದಾಗ ಅವರೊಂದಿಗೆ ಬಿಜೆಪಿ ಶಾಸಕ ರಮೇಶ್ ಮೆಂಡೋಲಾ ಅವರೂ ಇದ್ದರು. ಮೆಂಡೋಲಾ ಅವರು ವಿಜಯವರ್ಗೀಯ ಅವರ ಆಪ್ತರಾಗಿದ್ದಾರೆ. ತಂತ್ರಗಾರಿಕೆ ರೂಪಿಸಿ, ಅದರಂತೆ ಕೊನೆಯ ದಿನದಂದೇ ನಾಮಪತ್ರ ಹಿಂಪಡೆಯುವಂತೆ ಮಾಡಲಾಗಿದೆ ಎಂದು ಬಿಜೆಪಿಯ ಮೂಲಗಳು ತಿಳಿಸಿವೆ.

ವಿಜಯವರ್ಗೀಯ ‘ಎಕ್ಸ್’ ನಲ್ಲಿ ಫೋಟೊವೊಂದನ್ನು ಪೋಸ್ಟ್ ಮಾಡಿದ್ದು, ಅದರಲ್ಲಿ ಅವರೊಂದಿಗೆ ಮೆಂಡೋಲಾ ಹಾಗೂ ಅಕ್ಷಯ್ ಅವರಿದ್ದಾರೆ. ‘ಪ್ರಧಾನಿ ನರೇಂದ್ರ ಮೋದಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಮೋಹನ್ ಯಾದವ್ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ. ಶರ್ಮಾ ಅವರ ನಾಯಕತ್ವದಲ್ಲಿ ಇಂದೋರ್‌ನ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಮ್ ಅವರಿಗೆ ಬಿಜೆಪಿಗೆ ಸ್ವಾಗತ’ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಈ ನಡುವೆ ಬಮ್ ಅವರ ಮನೆಯ ಬಳಿ ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸುತ್ತಿದ್ದು, ಪೊಲೀಸ್ ಭದ್ರತೆ ಏರ್ಪಡಿಸಲಾಗಿದೆ.

ಇಂದೋರ್‌ನ ನ್ಯಾಯಾಲಯವೊಂದರಲ್ಲಿ ಅಕ್ಷಯ್, ಅವರ ತಂದೆ ಮತ್ತಿತರರ ವಿರುದ್ಧ 2007ರಲ್ಲಿ ದಾಖಲಾಗಿದ್ದ ಭೂವಿವಾದವೊಂದರ ವಿಚಾರಣೆ ನಡೆಯುತ್ತಿತ್ತು. ಐದು ದಿನಗಳ ಹಿಂದೆ ಪ್ರಕರಣಕ್ಕೆ ತಿರುವು ಸಿಕ್ಕಿತ್ತು. 17 ವರ್ಷಗಳ ನಂತರ, ಏಪ್ರಿಲ್ ಐದರಂದು ದೂರುದಾರರಾದ ಯೂನಿಸ್ ಪಟೇಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಪ್ರಕರಣದಲ್ಲಿ 307 (ಕೊಲೆ ಯತ್ನ) ಆರೋಪವನ್ನೂ ಸೇರಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಬೇಕೆಂದು ನ್ಯಾಯಾಲಯವನ್ನು ಕೋರಿದ್ದರು. ಅದಕ್ಕೆ ನ್ಯಾಯಾಲಯವು ಏಪ್ರಿಲ್ 24ರಂದು ಸಮ್ಮತಿ ಸೂಚಿಸಿತ್ತು.

ಇದೇ ಮೊದಲ ಬಾರಿಗೆ ಚುನಾವಣೆಗೆ ಸ್ಪರ್ಧಿಸಿದ್ದ ಅಕ್ಷಯ್, ಇಂದೋರ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಸಂಸದ ಶಂಕರ್ ಲಾಲ್ವಾನಿ ವಿರುದ್ಧ ಕಣಕ್ಕಿಳಿದಿದ್ದರು.

‘ಪ್ರಜಾಪ್ರಭುತ್ವ ಅಪಾಯದಲ್ಲಿದೆ’

ಒಂದನೇ ಪುಟದಿಂದ...

ಕಾಂಗ್ರೆಸ್ ವಕ್ತಾರರಾದ ಸುಪ್ರಿಯಾ ಶ್ರೀನೇತ್ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ‘ಭಾರತದ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಎಂದು ನಾವು ಹೇಳಿದ್ದು ಇದನ್ನೇ. ಅಭ್ಯರ್ಥಿಗಳನ್ನು ಪುಸಲಾಯಿಸುವುದು, ನಾಮಪತ್ರ ಹಿಂಪಡೆಯುವಂತೆ ಒತ್ತಡ ಹೇರುವುದು, ಅವರನ್ನು ಹಾಗೂ ಸೂಚಕರನ್ನು ಬೆದರಿಸುವುದು ನಡೆಯುತ್ತಿದೆ’ ಎಂದು ಹೇಳಿದ್ದಾರೆ.

ಲುಧಿಯಾನ: ಕಾಂಗ್ರೆಸ್‌ನಿಂದ ಅಮರಿಂದರ್ ಸಿಂಗ್ ಕಣಕ್ಕೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಪಂಜಾಬ್‌ನ ನಾಲ್ಕು ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಮರಿಂದರ್ ಸಿಂಗ್ ಬ್ರಾರ್ ಅವರನ್ನು ಲುಧಿಯಾನ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಸುಖ್ವಿಂದರ್ ಸಿಂಗ್ ರಾಂಧವಾ ಅವರಿಗೆ ಗುರುದಾಸಪುರ ಕ್ಷೇತ್ರದ ಟಿಕೆಟ್ ನೀಡಿದೆ. ಮಾಜಿ ಸಂಸದ ವಿಜಯ್ ಇಂದರ್ ಸಿಂಗ್ ಅವರನ್ನು ಆನಂದಪುರ ಸಾಹಿಬ್ ಕ್ಷೇತ್ರದಿಂದ ಹಾಗೂ ಕುಲ್ಬೀರ್ ಸಿಂಗ್ ಝಿರಾ ಅವರನ್ನು ಖಡೂರ್ ಸಾಹಿಬ್ ಕ್ಷೇತ್ರದಿಂದ ಸ್ಪರ್ಧೆಗಿಳಿಸಿದೆ. ಇಲ್ಲಿನ ಹಾಲಿ ಸಂಸದ ಜಸ್ಬೀರ್ ಸಿಂಗ್ ಗಿಲ್ ಅವರಿಗೆ ಟಿಕೆಟ್ ಲಭಿಸಿಲ್ಲ.

ಆನಂದಪುರ ಸಾಹಿಬ್ ಕ್ಷೇತ್ರದ ಸಂಸದರಾಗಿದ್ದ ಮನೀಷ್ ತಿವಾರಿ ಅವರನ್ನು ಚಂಡೀಗಢದಲ್ಲಿ ಸ್ಪರ್ಧೆಗಿಳಿಸಿದೆ. ಲುಧಿಯಾನ ಸಂಸದ ರವನೀತ್ ಸಿಂಗ್ ಬಿಟ್ಟೂ ಅವರು ಬಿಜೆಪಿ ಸೇರಿದ್ದಾರೆ.

ಇದರೊಂದಿಗೆ ಕಾಂಗ್ರೆಸ್ ಪಕ್ಷವು ಪಂಜಾಬ್‌ನ 13 ಕ್ಷೇತ್ರಗಳಲ್ಲಿ 12ಕ್ಕೆ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ಫಿರೋಜ್‌ಪುರ ಕ್ಷೇತ್ರಕ್ಕೆ ಇನ್ನೂ ಅಭ್ಯರ್ಥಿಯನ್ನು ಪ್ರಕಟಿಸಿಲ್ಲ. ಪಂಜಾಬ್‌ನಲ್ಲಿ ಕೊನೆಯ ಹಂತದಲ್ಲಿ ಜೂನ್ 1 ರಂದು ಮತದಾನ ನಡೆಯಲಿದೆ.


ಲುಧಿಯಾನದಿಂದ ಮಾಜಿ ಸಚಿವ ಭರತ್ ಭೂಷಣ್ ಆಶು ಅವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ ಪಕ್ಷವು ಅಮರಿಂದರ್ ಅವರಿಗೆ ಮಣೆ ಹಾಕಿದೆ.

ಲುಧಿಯಾನದಿಂದ ಬಿಜೆಪಿಯು ರವನೀತ್ ಸಿಂಗ್ ಬಿಟ್ಟೂ ಅವರನ್ನು ಕಣಕ್ಕಿಳಿಸಿದೆ. ಎಎಪಿಯ ಅಶೋಕ್ ಪರಾಶರ್ ಮತ್ತು ಶಿರೋಮಣಿ ಅಕಾಲಿ ದಳದಿಂದ ರಣಜೀತ್ ಸಿಂಗ್ ಧಿಲ್ಲೋನ್ ಅವರು ಅಖಾಡಕ್ಕಿಳಿದಿದ್ದಾರೆ. ಬಿಟ್ಟೂ ಅವರು ಈ ಕ್ಷೇತ್ರದಿಂದ ಎರಡು ಸಲ ಸಂಸದರಾಗಿ ಆಯ್ಕೆಯಾಗಿದ್ದಾರೆ.

‘ಬಡವರ ಯೋಜನೆ ರದ್ದು ಮಾಡುವ ಬಿಜೆಪಿ’

ಪಠಾಣ್ (ಗುಜರಾತ್) (ಪಿಟಿಐ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ದೇಶದಾದ್ಯಂತ ಜಾತಿ ಹಾಗೂ ಆರ್ಥಿಕ ಸಮೀಕ್ಷೆ ನಡೆಸಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಉತ್ತರ ಗುಜರಾತ್‌ನ ಪಠಾಣ್ ಪಟ್ಟಣದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ದೇಶದ ಶೇ 90ರಷ್ಟು ಜನಸಂಖ್ಯೆಯು ಎಸ್‌ಸಿ, ಎಸ್‌ಟಿ, ಒಬಿಸಿಗಳಿಂದ ಕೂಡಿದೆ. ಆದರೆ, ಕಾರ್ಪೊರೇಟ್, ಮಾಧ್ಯಮ, ಖಾಸಗಿ ಆಸ್ಪತ್ರೆ, ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರದ ಅಧಿಕಾರಿ ವರ್ಗದಲ್ಲಿ ಅವರ ಪ್ರಾತಿನಿಧ್ಯವೇ ಇಲ್ಲ. ಈ ಸಮುದಾಯಗಳು ರೈತರಾಗಿ, ಕಾರ್ಮಿಕರಾಗಿ, ಸಣ್ಣ ಉದ್ದಿಮೆದಾರರಾಗಿ, ಅಥವಾ ನಿರುದ್ಯೋಗಿಗಳಾಗಿ ಬದುಕುತ್ತಿವೆ. ನಾವು ಅಧಿಕಾರಕ್ಕೆ ಬಂದರೆ, ಅದಕ್ಕೆ ಪರಿಹಾರವಾಗಿ ಮೊದಲು ಎಸ್‌ಸಿ, ಎಸ್‌ಟಿ, ಒಬಿಸಿ ಜನಸಂಖ್ಯೆ ತಿಳಿಯಲು ಜಾತಿ ಹಾಗೂ ಆರ್ಥಿಕ ಸಮೀಕ್ಷೆ ನಡೆಸುತ್ತೇವೆ’ ಎಂದು ಹೇಳಿದರು.



‘ಪ್ರಧಾನಿ ನರೇಂದ್ರ ಮೋದಿ ಅವರು ಕೇವಲ 22–25 ಮಂದಿ ದೇಶದ ಎಲ್ಲ ಸಂಪತ್ತು, ಅಧಿಕಾರ ಮತ್ತು ಸ್ವಾಭಾವಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಬೇಕೆಂದು ಬಯಸುತ್ತಾರೆ. ಮೋದಿ ಅವರ 10 ವರ್ಷಗಳ ಆಡಳಿತದಲ್ಲಿ ಆಗಿದ್ದು ಇದೇ’ ಎಂದು ಅಭಿಪ್ರಾಯಪಟ್ಟರು.

‘ಅಧಿಕಾರಕ್ಕೆ ಮರಳಿದರೆ ಸಂವಿಧಾನ ಬದಲಾವಣೆಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಚಿಂತನೆ ನಡೆಸಿವೆ’ ಎಂದು ಆರೋಪಿಸಿದರು.

ರಾಹುಲ್ ಮಾತು..

- ಮೋದಿ 22–25 ಜನರ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದರು. ಆದರೆ, ರೈತರ ಸಾಲ ಮನ್ನಾ ಮಾಡಲು ನಿರಾಕರಿಸಿದರು.
- ಭಾರತದ ಶೇ 1ರಷ್ಟು ಮಂದಿ ಶೇ 40ರಷ್ಟು ಸಂಪತ್ತಿನ ಮೇಲೆ ಹಿಡಿತ ಹೊಂದಿದ್ದಾರೆ.
- ಬಿಜೆಪಿಯು ರೈತರು, ಬಡವರು, ಕೆಳಸ್ತರದವರ ಯೋಜನೆಗಳನ್ನು ರದ್ದು ಮಾಡಲು ಬಯಸುತ್ತದೆ.
- ಖಾಸಗೀಕರಣ, ಅಗ್ನಿಪಥ್–ಅಗ್ನಿವೀರ್ ಮೀಸಲಾತಿ ಅಂತ್ಯಗೊಳಿಸುವ ಈ ಸರ್ಕಾರದ ಎರಡು ಸಾಧನಗಳಾಗಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಗ್ನಿವೀರ್ ಯೋಜನೆ ರದ್ದುಪಡಿಸಲಾಗುವುದು.
- ಕಾಂಗ್ರೆಸ್ ಸರ್ಕಾರ ಬಂದರೆ ರೈತರ ಸಾಲ ಮನ್ನಾ ಮಾಡುತ್ತೇವೆ, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ನೀಡುತ್ತೇವೆ ಮತ್ತು ಬಡ ಕುಟುಂಬಕ್ಕೆ ವಾರ್ಷಿಕ ₹1 ಲಕ್ಷ ನೀಡುತ್ತೇವೆ.

ಚುಟುಕು

ರಾಜನಾಥ್, ಸ್ಮೃತಿ ನಾಮಪತ್ರ ಸಲ್ಲಿಕೆ

ಲಖನೌ, ಅಮೇಠಿ (ಪಿಟಿಐ): ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ಸ್ಮೃತಿ ಇರಾನಿ ಅವರು ಕ್ರಮವಾಗಿ ಲಖನೌ ಮತ್ತು ಅಮೇಠಿ ಲೋಕಸಭಾ ಕ್ಷೇತ್ರದಿಂದ ಸೋಮವಾರ ನಾಮಪತ್ರ ಸಲ್ಲಿಸಿದರು.

ರಾಜನಾಥ್ ಅವರು ನಾಮಪತ್ರ ಸಲ್ಲಿಸುವಾಗ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಜತೆಗಿದ್ದರು. ದಕ್ಷಿಣ ಮುಖಿ ಹನುಮಾನ್ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಅವರು ಬಿಜೆಪಿ ಕೇಂದ್ರ ಕಚೇರಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿದರು. ಪಕ್ಷದ ನೂರಾರು ಕಾರ್ಯಕರ್ತರು ಪಾಲ್ಗೊಂಡರು.

ಲಖನೌ ಕ್ಷೇತ್ರದಿಂದ ಎರಡು ಸಲ ಗೆದ್ದಿರುವ ರಾಜನಾಥ್, ‘ಹ್ಯಾಟ್ರಿಕ್’ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ.

ಸ್ಮೃತಿ ಅವರು ಅಮೇಠಿಯಲ್ಲಿ ರೋಡ್ ಶೋದಲ್ಲಿ ಪಾಲ್ಗೊಂಡು ನಾಮಪತ್ರ ಸಲ್ಲಿಸಿದರು. ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಮತ್ತು ಪಕ್ಷದ ಇತರ ನಾಯಕರು ಜತೆಗಿದ್ದರು. ಉತ್ತರ ಪ್ರದೇಶದ ಸಚಿವ ಮಯಾಂಕೇಶ್ವರ್ ಶರಣ್ ಸಿಂಗ್ ಮತ್ತು ಇರಾನಿ ಅವರ ಪತಿ ಜುಬಿನ್ ಇರಾನಿ, ರೋಡ್ ಶೋದಲ್ಲಿ ಪಾಲ್ಗೊಂಡರು.

ಗಾಂಧಿ ಕುಟುಂಬದ ಭದ್ರಕೋಟೆ ಎನಿಸಿದ್ದ ಅಮೇಠಿಯಲ್ಲಿ 2019ರ ಚುನಾವಣೆಯಲ್ಲಿ ಸ್ಮೃತಿ ಅವರು ರಾಹುಲ್ ಗಾಂಧಿ ಅವರನ್ನು ಮಣಿಸಿದ್ದರು. ಲಖನೌ ಮತ್ತು ಅಮೇಠಿ ಕ್ಷೇತ್ರಗಳಲ್ಲಿ ಮೇ 20ರಂದು ಮತದಾನ ನಡೆಯಲಿದೆ.

ಹೆಚ್ಚಿನ ಕಾಲಾವಕಾಶ ಕೋರಿದ ಬಿಜೆಪಿ, ಕಾಂಗ್ರೆಸ್

ನವದೆಹಲಿ (ಪಿಟಿಐ): ನೀತಿ ಸಂಹಿತೆ ಉಲ್ಲಂಘನೆ ಸಂಬಂಧ ಪಕ್ಷದ ಅಧ್ಯಕ್ಷರಿಗೆ ನೀಡಿರುವ ನೋಟಿಸ್‌ಗಳಿಗೆ ಉತ್ತರಿಸಲು ಬಿಜೆಪಿ ಒಂದು ವಾರ ಹೆಚ್ಚಿನ ಕಾಲಾವಕಾಶ ಕೋರಿದರೆ, ಕಾಂಗ್ರೆಸ್ 14 ದಿನಗಳ ಹೆಚ್ಚುವರಿ ಸಮಯ ಕೇಳಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧದ ದೂರುಗಳಿಗೆ ಸಂಬಂಧಿಸಿದಂತೆ ಆಯೋಗವು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಅವರಿಗೆ ನೋಟಿಸ್ ಜಾರಿ ಮಾಡಿತ್ತು. ಸೋಮವಾರ ಮಧ್ಯಾಹ್ನ 11 ಗಂಟೆ ಒಳಗೆ ಅವಕ್ಕೆ ಉತ್ತರಿಸುವಂತೆ ಸೂಚಿಸಿತ್ತು.

ಕಾಂಗ್ರೆಸ್ ಮತ್ತು ಬಿಜೆಪಿಯ ಮನವಿಗೆ ಚುನಾವಣಾ ಆಯೋಗ ಸಮ್ಮತಿ ಸೂಚಿಸಿರುವ ಬಗ್ಗೆ ಇನ್ನೂ ಯಾವುದೇ ಮಾಹಿತಿ ಬಂದಿಲ್ಲ.

ಎಂಥಾ ಮಾತು!



ನರೇಂದ್ರ ಮೋದಿ ಮತ್ತೆ ಅಧಿಕಾರಕ್ಕೆ ಮರಳುವುದು ಖಚಿತ. ಅಕಸ್ಮಾತ್, ‘ಇಂಡಿಯಾ’ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಏನಾಗಬಹುದು ಎಂದು ಯೋಚಿಸಿ. ಆಗ ಪ್ರಧಾನಿ ಯಾರಾಗುತ್ತಾರೆ? ಸ್ಟಾಲಿನ್, ಶರದ್ ಪವಾರ್, ಮಮತಾ ಬ್ಯಾನರ್ಜಿ ಅಥವಾ ರಾಹುಲ್ ಗಾಂಧಿ ಪ್ರಧಾನಿ ಆಗುವರೇ? ಅವರೆಲ್ಲರೂ ಪ್ರಧಾನಿ ಹುದ್ದೆಯನ್ನು ತಲಾ ಒಂದು ವರ್ಷ ಹಂಚಿಕೊಳ್ಳಲು ಬಯಸುತ್ತಾರೆ. ಅವರು ದೇಶವನ್ನು ಯಾವ ರೀತಿ ಮುನ್ನಡೆಸಬಹುದು? ನಮಗೆ ‘ಮಜ್‌ಬೂತ್’ (ಬಲಿಷ್ಠ) ಪ್ರಧಾನಿ ಬೇಕೇ ಹೊರತು, ‘ಮಜ್‌ಬೂರ್’ (ದುರ್ಬಲ) ಪ್ರಧಾನಿ ಅಲ್ಲ

ಅಮಿತ್ ಶಾ, ಕೇಂದ್ರ ಗೃಹ ಸಚಿವ



‘ಇಂಡಿಯಾ’ ಮೈತ್ರಿಕೂಟದಿಂದ ಸಂಭವನೀಯ ಪ್ರಧಾನಿ ಅಭ್ಯರ್ಥಿ ಯಾರಾಗಬಹುದು ಎಂಬುದರ ಬಗ್ಗೆ ಗೃಹ ಸಚಿವರು ಮಾತನಾಡುತ್ತಿರುವುದು ನನಗೆ ತುಂಬಾ ಖುಷಿ ತಂದಿದೆ. ಕನಿಷ್ಠ ಪಕ್ಷ ಮೋದಿ ಅವರು ಅಧಿಕಾರಕ್ಕೆ ಬರುತ್ತಿಲ್ಲ ಎಂಬುದು ಅವರಿಗೆ ಅರಿವಾಗಿದೆ. ನಮಗೆ 400 ಸ್ಥಾನಗಳು ಸಿಗಲಿದೆ ಎಂದು ಹೇಳುತ್ತಿದ್ದವರು ಈಗ, ಮುಂದಿನ ಸರ್ಕಾರ ಇಂಡಿಯಾ ಮೈತ್ರಿಕೂಟದ್ದು ಎಂಬುದನ್ನು ಒಪ್ಪಿಕೊಂಡಿದ್ದಾರೆ

ಸುಪ್ರಿಯಾ ಶ್ರೀನೇತ್, ಕಾಂಗ್ರೆಸ್ ವಕ್ತಾರೆ

ಕ್ಷೇತ್ರ ಮಹಾತ್ಮೆ



ಉತ್ತರ ಪ್ರದೇಶದ ಹಾಥರಸ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಎಸ್‌ಪಿ ಮಧ್ಯೆ ನೇರ ಹಣಾಹಣಿ ಏರ್ಪಟ್ಟಿದೆ. ಬಿಜೆಪಿಯು ಉತ್ತರ ಪ್ರದೇಶದ ಸಚಿವ ಅನೂಪ್ ಪ್ರಧಾನ್ ಅವರನ್ನು ಕಣಕ್ಕಿಳಿಸಿದ್ದು, ಸಮಾಜವಾದಿ ಪಕ್ಷವು ಜಸ್ವೀರ್ ವಾಲ್ಮೀಕಿ ಅವರನ್ನು ಅಖಾಡಕ್ಕಿಳಿಸಿದೆ. 2014ರಲ್ಲಿ ರಚನೆಯಾಗಿರುವ ಈ ಕ್ಷೇತ್ರ ಬಿಜೆಪಿಯ ಹಿಡಿತದಲ್ಲೇ ಇದೆ. ಕಳೆದ ಚುನಾವಣೆಯಲ್ಲಿ ರಾಜ್‌ವೀರ್ ಸಿಂಗ್ ದಿಲೆರ್ ಜಯಿಸಿದ್ದರು. ಅವರು ಎಸ್‌ಪಿ ಅಭ್ಯರ್ಥಿ ರಾಮ್‌ಜಿ ಲಾಲ್ ಸುಮನ್ ಅವರನ್ನು 2,60,208 ಮತಗಳಿಂದ ಮಣಿಸಿದ್ದರು. ಇಲ್ಲಿ ಮೂರನೇ ಹಂತದಲ್ಲಿ ಮೇ 7ರಂದು ಮತದಾನ ನಡೆಯಲಿದೆ. 2020ರ ಅಕ್ಟೋಬರ್‌ನಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದಿಂದಾಗಿ ಹಾಥರಸ್, ದೇಶದಾದ್ಯಂತ ಸುದ್ದಿಯಾಗಿತ್ತು. ಹಾಥರಸ್, ಇಂಗು ಉತ್ಪಾದನೆಗೆ ಹೆಸರುವಾಸಿಯಾಗಿದ್ದು, ಇಲ್ಲಿನ ಇಂಗು ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದು ತಮ್ಮ ಆದ್ಯತೆ ಎನ್ನುತ್ತಾ ಎಸ್‌ಪಿ ಅಭ್ಯರ್ಥಿ ಜಸ್ವೀರ್ ಅವರು ಮತದಾರರ ಬಳಿ ತೆರಳುತ್ತಿದ್ದಾರೆ. ‘ನಾನು ಗೆದ್ದರೆ, ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುತ್ತೇನೆ ಹಾಗೂ ವ್ಯಾಪಾರವನ್ನು ಉತ್ತೇಜಿಸಲು ತೆರಿಗೆ ವಿನಾಯಿತಿಗೆ ಸರ್ಕಾರವನ್ನು ಒತ್ತಾಯಿಸುತ್ತೇನೆ’ ಎನ್ನುತ್ತಿದ್ದಾರೆ.

ಮುಖಾಮುಖಿ

ಲಖೀಂಪುರ ಖೀರಿ (ಉತ್ತರ ಪ್ರದೇಶ)



ಅಜಯ್ ಕುಮಾರ್ ಮಿಶ್ರಾ
ಬಿಜೆಪಿ

ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಮೂರು ಕೃಷಿ ನೀತಿಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ಹೋರಾಟ ನಡೆಸುತ್ತಿದ್ದ ರೈತರ ಮೇಲೆ ಕಾರು ಹರಿಸಿದ್ದ ಘಟನೆ ಉತ್ತರ ಪ್ರದೇಶದ ಲಖೀಂಪುರ ಖೀರಿಯಲ್ಲಿ 2021ರ ಅಕ್ಟೋಬರ್‌ನಲ್ಲಿ ನಡೆದಿತ್ತು. ಖೀರಿ ಕ್ಷೇತ್ರದ ಸಂಸದ, ಕೇಂದ್ರ ಗೃಹ ಖಾತೆ ರಾಜ್ಯ ಸಚಿವರಾಗಿದ್ದ ಅಜಯ್ ಕುಮಾರ್ ಮಿಶ್ರಾ ಅವರ ಪುತ್ರ ಆಶೀಶ್ ಮಿಶ್ರಾ ಅವರು ಕಾರು ಹರಿಸಿದ್ದರು ಎಂದು ಆರೋಪಿಸಲಾಗಿತ್ತು. ಅಜಯ್ ಕುಮಾರ್ ವಿರುದ್ಧ ರೈತ ಸಂಘಟನೆಗಳ ಮತ್ತು ಸಾಮಾಜಿಕ ಹೋರಾಟಗಾರರ ಆಕ್ರೋಶ ಇದ್ದರೂ ಬಿಜೆಪಿಯು ಈ ಬಾರಿ ಅವರನ್ನೇ ಕಣಕ್ಕಿಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಜನಪ್ರಿಯತೆಯ ಬಲದೊಂದಿಗೆ ಕಣಕ್ಕಿಳಿದಿರುವ ಮಿಶ್ರಾ, ‘ಹ್ಯಾಟ್ರಿಕ್’ ಗೆಲುವಿನ ವಿಶ್ವಾಸದಲ್ಲಿದ್ದಾರೆ.


v/s



ಉತ್ಕರ್ಷ್ ವರ್ಮಾ
ಸಮಾಜವಾದಿ ಪಕ್ಷ

ಈ ಕ್ಷೇತ್ರದಲ್ಲಿ ‘ಇಂಡಿಯಾ’ ಮೈತ್ರಿಕೂಟದ ಅಭ್ಯರ್ಥಿಯಾಗಿ ಸಮಾಜವಾದಿ ಪಕ್ಷದ ಉತ್ಕರ್ಷ್ ವರ್ಮಾ ಅವರು ಅಖಾಡಕ್ಕಿಳಿದಿದ್ದಾರೆ. ಪಕ್ಷದ ಪ್ರಮುಖ ವೋಟ್‌ಬ್ಯಾಂಕ್ ಎನಿಸಿರುವ ಯಾದವ ಸಮುದಾಯ ಮತ್ತು ಮುಸ್ಲಿಮರು ಮಾತ್ರವಲ್ಲದೆ, ರೈತ ಸಂಘಟನೆಗಳ ಬೆಂಬಲ ಅವರೊಂದಿಗಿದೆ. ಕುರ್ಮಿ ಮತ್ತು ವರ್ಮಾ ಜಾತಿಯವರೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರ ಬೆಂಬಲ ದೊರೆಯುವ ನಿರೀಕ್ಷೆಯನ್ನು ಎಸ್‌ಪಿ ಅಭ್ಯರ್ಥಿ ಹೊಂದಿದ್ದಾರೆ. ಆದರೆ ಈ ಹಿಂದೆ ಇದೇ ಕ್ಷೇತ್ರದಿಂದ ಗೆದ್ದಿದ್ದ ವರ್ಮಾ ಸಮುದಾಯದ ಕೆಲವು ಕುಟುಂಬಗಳ ವಿರೋಧವನ್ನು ಅವರು ಎದುರಿಸಬೇಕಿದೆ. ಕ್ಷೇತ್ರದಲ್ಲಿ ಅಜಯ್ ವಿರುದ್ಧ ಇರುವ ಅಲೆ ತಮ್ಮ ಗೆಲುವಿಗೆ ಕಾರಣವಾಗಬಹುದು ಎಂಬುದು ಅವರ ವಿಶ್ವಾಸ. ಈ ಕ್ಷೇತ್ರದಲ್ಲಿ ಮತದಾನ ನಾಲ್ಕನೇ ಹಂತದಲ್ಲಿ ಮೇ 13ರಂದು ನಡೆಯಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,419
ಇಂದಿನ ಅಂತ್ಯ	22,643
▲	223
ದಿನದ ಗರಿಷ್ಠ	22,655

ವಿನಿಮಯ ದರ

$ ಡಾಲರ್	83.45
£ ಪೌಂಡ್	104.62
€ ಯುರೊ	89.45
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹920 (925)
ಸೂರ್ಯಕಾಂತಿ (ರಿಫೈನ್ಡ್)	₹920 (915)
ಪಾಮೋಲಿನ್	₹910 (906)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹275-452
ದ್ವಿತಳಿ (ಬಿ.ವಿ)	₹279-570

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹175.50
ಆರ್‌ಎಸ್‌ಎಸ್-5	₹169.50
ಗುಡ್ ಲಾಟ್	₹159

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-9200
ಬೆಂಗಳೂರು	₹9500-11500
ಕೆ.ಆರ್.ಪೇಟೆ	₹9550-9550
ತಿಪಟೂರು	₹5500-8600

ಮಾರುಕಟ್ಟೆ ಧಾರಣೆ

ಅಡಿಕೆ

ಮಾರುಕಟ್ಟೆ	ತಳಿ	ದರ
ಬಂಟ್ವಾಳ	ಕೋಕ	18000-28500
ಬಂಟ್ವಾಳ	ಹೊಸತು	28500-36500
ಬಂಟ್ವಾಳ	ಹಳತು	36500-45000
ಚಿತ್ರದುರ್ಗ	ಅಪಿ	52119-52559
ಚಿತ್ರದುರ್ಗ	ಬೆಟ್ಟೆ	36129-36599
ಚಿತ್ರದುರ್ಗ	ಕೆಂಪುಗೋಟು	29609-30010
ಚಿತ್ರದುರ್ಗ	ರಾಶಿ	51639-52069
ಕುಮಟ	ಚಿಪ್ಪು	26509-28699
ಕುಮಟ	ಕೋಕ	13569-25999
ಕುಮಟ	ಫ್ಯಾಕ್ಟರಿ	11569-21469
ಕುಮಟ	ಹಳೆಚಾಲಿ	37569-39299
ಕುಮಟ	ಹೊಸಚಾಲಿ	31899-34899
ಪುತ್ತೂರು	ಹೊಸತು	26500-36500
ಸಾಗರ	ಬಿಳಿಗೋಟು	11219-28599
ಸಾಗರ	ಚಾಲಿ	30099-34744
ಸಾಗರ	ಕೋಕ	14989-28566
ಸಾಗರ	ಕೆಂಪುಗೋಟು	20199-37509
ಸಾಗರ	ರಾಶಿ	30299-52217
ಸಾಗರ	ಸಿಪ್ಪೆಗೋಟು	16319-20019
ಶಿವಮೊಗ್ಗ	ಬೆಟ್ಟೆ	45366-56000
ಶಿವಮೊಗ್ಗ	ಗೊರಬಲು	18009-40589
ಶಿವಮೊಗ್ಗ	ರಾಶಿ	34009-53609
ಶಿವಮೊಗ್ಗ	ಸರಕು	52200-84510
ಸಿದ್ದಾಪುರ	ಬಿಳಿಗೋಟು	27119-30319
ಸಿದ್ದಾಪುರ	ಚಾಲಿ	33899-36199
ಸಿದ್ದಾಪುರ	ಕೋಕ	25500-29500
ಸಿದ್ದಾಪುರ	ಹಳೆಚಾಲಿ	35769-36299
ಸಿದ್ದಾಪುರ	ಕೆಂಪುಗೋಟು	28699-31299
ಸಿದ್ದಾಪುರ	ರಾಶಿ	44899-49500
ಸಿದ್ದಾಪುರ	ತಟ್ಟಿಬೆಟ್ಟೆ	35700-38800
ಶಿರಸಿ	ಬೆಟ್ಟೆ	37699-46739
ಶಿರಸಿ	ಬಿಳಿಗೋಟು	24099-30800
ಶಿರಸಿ	ಚಾಲಿ	32029-36800
ಶಿರಸಿ	ಕೆಂಪುಗೋಟು	27099-32799
ಶಿರಸಿ	ರಾಶಿ	44218-49709
ಯಲ್ಲಾಪುರ	ಅಪಿ	56895-58179
ಯಲ್ಲಾಪುರ	ಬಿಳಿಗೋಟು	24899-31400
ಯಲ್ಲಾಪುರ	ಕೋಕ	14899-29499
ಯಲ್ಲಾಪುರ	ಹಳೆಚಾಲಿ	37410-38800
ಯಲ್ಲಾಪುರ	ಹೊಸಚಾಲಿ	32465-36678
ಯಲ್ಲಾಪುರ	ಕೆಂಪುಗೋಟು	24899-34899
ಯಲ್ಲಾಪುರ	ರಾಶಿ	43199-54992
ಯಲ್ಲಾಪುರ	ತಟ್ಟಿಬೆಟ್ಟೆ	36040-42812

ಸೆನ್ಸೆಕ್ಸ್ 941 ಅಂಶ ಏರಿಕೆ ● ₹2.48 ಲಕ್ಷ ಕೋಟಿ ಹೂಡಿಕೆದಾರರ ಸಂಪತ್ತು ವೃದ್ಧಿ

ಷೇರುಪೇಟೆಯಲ್ಲಿ ಗೂಳಿ ಓಟ



ಮುಂಬೈ/ನವದೆಹಲಿ (ಪಿಟಿಐ): ಬ್ಯಾಂಕಿಂಗ್, ಮೂಲಸೌಕರ್ಯ ಷೇರುಗಳ ಖರೀದಿಯಿಂದ ಷೇರು ಸೂಚ್ಯಂಕಗಳು ಸೋಮವಾರ ಭಾರಿ ಏರಿಕೆ ಕಂಡಿವೆ. ಇದರಿಂದ ಹೂಡಿಕೆದಾರರ ಸಂಪತ್ತಿಗೆ ಒಂದೇ ದಿನ ₹2.48 ಲಕ್ಷ ಕೋಟಿ ಸೇರ್ಪಡೆಯಾಗಿದ್ದು, ಬಿಎಸ್‌ಇ ಕಂಪನಿಗಳ ಒಟ್ಟು ಮೌಲ್ಯವು ₹406 ಲಕ್ಷ ಕೋಟಿ ದಾಟಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 941 ಅಂಶ (ಶೇ 1.28) ಏರಿಕೆಯಾಗಿ 74,671ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನ ವೇಳೆ ಈ ಸೂಚ್ಯಂಕ 74,721ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 223 ಅಂಶ (ಶೇ 1) ಹೆಚ್ಚಳವಾಗಿ 22,643ಕ್ಕೆ ಕೊನೆಗೊಂಡಿತು.

ಐಸಿಐಸಿಐ ಬ್ಯಾಂಕ್, ಅಲ್ಟ್ರಾಟೆಕ್ ಸಿಮೆಂಟ್, ಇಂಡಸ್‌ಇಂಡ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಕ್ಸಿಸ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಬಜಾಜ್ ಫೈನಾನ್ಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಏರಿಕೆಯಾಗಿದೆ.

ಗಳಿಕೆ ಕಂಡ ಕಂಪನಿಗಳು (ಶೇಕಡಾವಾರು)

ಕಂಪನಿ	ಶೇ
ಐಸಿಐಸಿಐ ಬ್ಯಾಂಕ್	4.67
ಎಸ್‌ಬಿಐ	3.09
ಅಲ್ಟ್ರಾಟೆಕ್ ಸಿಮೆಂಟ್	2.93
ಇಂಡಸ್‌ಇಂಡ್ ಬ್ಯಾಂಕ್	2.90
ಎಕ್ಸಿಸ್ ಬ್ಯಾಂಕ್	2.47

ಇಳಿಕೆ ಕಂಡ ಕಂಪನಿಗಳು (ಶೇಕಡಾವಾರು)

ಕಂಪನಿ	ಶೇ
ಎಚ್‌ಸಿಎಲ್ ಟೆಕ್	5.79
ಐಟಿಸಿ	0.44
ವಿಪ್ರೊ	0.37
ಬಜಾಜ್ ಫಿನ್‌ಸರ್ವ್	0.01

ಎಚ್‌ಸಿಎಲ್ ಟೆಕ್ನಾಲಜೀಸ್, ಐಟಿಸಿ, ವಿಪ್ರೊ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯ ಇಳಿಕೆಯಾಗಿದೆ. ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕ ಏರಿಕೆಯಾಗಿವೆ.

ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟಿನಲ್ಲಿ ಕೊನೆಗೊಂಡವು. ಜಾಗತಿಕ ಬ್ರೆಂಟ್ ಕಚ್ಚಾ ತೈಲವು ಶೇ 0.51ರಷ್ಟು ಇಳಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 89.04 ಡಾಲರ್‌ಗೆ (₹7,431) ಮುಟ್ಟಿದೆ.

ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಗಳ ಉತ್ತಮ ಗಳಿಕೆ, ಮಧ್ಯಪ್ರಾಚ್ಯ ಬಿಕ್ಕಟ್ಟು ಕಡಿಮೆ ಆಗಿರುವುದು, ಸ್ಥಿರ ಗಳಿಕೆಯು ಮಾರುಕಟ್ಟೆಯ ಏರಿಕೆಗೆ ಕಾರಣವಾದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಐಸಿಐಸಿಐ ಬ್ಯಾಂಕ್: ಎಂ–ಕ್ಯಾಪ್‌ಗೆ ₹36,555 ಕೋಟಿ ಸೇರ್ಪಡೆ

ಐಸಿಐಸಿಐ ಬ್ಯಾಂಕ್‌ನ ಷೇರಿನ ಮೌಲ್ಯ ಸೋಮವಾರ ಶೇ 5ರಷ್ಟು ಏರಿಕೆಯಾಗಿದೆ. ಇದರಿಂದ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ಒಂದೇ ದಿನ ₹36,555 ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಎಂ–ಕ್ಯಾಪ್ ₹8.14 ಲಕ್ಷ ಕೋಟಿಗೆ ಮುಟ್ಟಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಕ್ರಮವಾಗಿ ₹1,158 ಮತ್ತು ₹1,156ಕ್ಕೆ ಸ್ಥಿರಗೊಂಡಿತು. 2023–24ರ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹11,675 ಕೋಟಿ ನಿವ್ವಳ ಲಾಭ ಗಳಿಸಿದೆ. ಇದರಿಂದ ಬ್ಯಾಂಕ್‌ನ ಎಂ–ಕ್ಯಾಪ್ ಏರಿಕೆಯಾಗಿದೆ.

ಎಚ್‌ಸಿಎಲ್ ಟೆಕ್ ಷೇರು ಶೇ 6ರಷ್ಟು ಇಳಿಕೆ

ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯು 2023–24ರ ಮಾರ್ಚ್ ತ್ರೈಮಾಸಿಕದ ನಿವ್ವಳ ಲಾಭವು ನಿರೀಕ್ಷಿಸಿದಷ್ಟು ಪ್ರಗತಿ ಕಾಣದಿದ್ದರಿಂದ ಕಂಪನಿಯ ಷೇರಿನ ಮೌಲ್ಯ ಸೋಮವಾರ ಶೇ 6ರಷ್ಟು ಇಳಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ಕ್ರಮವಾಗಿ ₹1,387 ಮತ್ತು ₹1,388ಕ್ಕೆ ಇಳಿದಿದೆ. ಷೇರಿನ ಬೆಲೆ ಇಳಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯ ₹23,120 ಕೋಟಿ ಕರಗಿದ್ದು, ಒಟ್ಟು ಎಂ–ಕ್ಯಾಪ್ ₹3.76 ಲಕ್ಷ ಕೋಟಿಗೆ ಕುಸಿದಿದೆ.

ಕಂಪನಿಯು, ಮಾರ್ಚ್ ತ್ರೈಮಾಸಿಕದಲ್ಲಿ ₹3,986 ಕೋಟಿ ನಿವ್ವಳ ಲಾಭ ಗಳಿಸಿತ್ತು. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹3,983 ಕೋಟಿ ಲಾಭ ಗಳಿಸಿತ್ತು.

ಬಿಎಸ್‌ಇ ಷೇರುಮೌಲ್ಯ ಶೇ 13ರಷ್ಟು ಕುಸಿತ

ನವದೆಹಲಿ (ಪಿಟಿಐ): ಶುಲ್ಕ ಲೆಕ್ಕಾಚಾರದ ವಿಧಾನದಲ್ಲಿ ಬದಲಾವಣೆ ತರಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸೂಚಿಸಿರುವ ಪರಿಣಾಮವಾಗಿ, ಮುಂಬೈ ವಿನಿಮಯ ಕೇಂದ್ರವು (ಬಿಎಸ್‌ಇ) ಹೆಚ್ಚಿನ ಶುಲ್ಕವನ್ನು ತೆರಬೇಕಾಗಿದೆ.

ಪ್ರೀಮಿಯಂ ಮೌಲ್ಯದ ಬದಲು ನೋಷನಲ್ ಮೌಲ್ಯವನ್ನು ಆಧರಿಸಿ ಶುಲ್ಕವನ್ನು ಲೆಕ್ಕ ಹಾಕಬೇಕು ಎಂದು ಸೆಬಿ ಸೂಚಿಸಿದೆ. ಹಿಂದಿನ ವರ್ಷಗಳಿಗೆ ಅನ್ವಯವಾಗುವ ಹೆಚ್ಚುವರಿ ಮೊತ್ತವನ್ನು ಬಡ್ಡಿಸಹಿತ ಪಾವತಿಸಬೇಕು ಎಂದು ಕೂಡ ಸೆಬಿ ಸೂಚನೆ ನೀಡಿದೆ. ಬಿಎಸ್‌ಇ ಸಿದ್ಧಪಡಿಸಿರುವ ಪ್ರಾಥಮಿಕ ಅಂದಾಜಿನ ಪ್ರಕಾರ, ಅದು ₹165 ಕೋಟಿ ಶುಲ್ಕ ಹಾಗೂ ಅದಕ್ಕೆ ಸಂಬಂಧಿಸಿದ ಜಿಎಸ್‌ಟಿ ಮೊತ್ತ ಪಾವತಿಸಬೇಕಿದೆ.

ಸೆಬಿ ಸೂಚನೆಯ ಪರಿಣಾಮವಾಗಿ ಬಿಎಸ್‌ಇ ಷೇರುಮೌಲ್ಯವು ಸೋಮವಾರದ ದಿನದ ವಹಿವಾಟಿನಲ್ಲಿ ಶೇ 18.64ರವರೆಗೆ ಕುಸಿತ ಕಂಡಿತ್ತು. ದಿನದ ವಹಿವಾಟಿನ ಅಂತ್ಯಕ್ಕೆ, ಷೇರುಮೌಲ್ಯವು ಶೇ 13.31ರಷ್ಟು ಕುಸಿತ ಕಂಡಿದೆ.

ನೋಷನಲ್ ಮೌಲ್ಯ (ಡಿರೈವೇಟಿವ್ಸ್ ವಹಿವಾಟಿನ ಆಪ್ಷನ್ ಒಪ್ಪಂದಗಳ ಸ್ವತ್ತಿನ ಒಟ್ಟು ಮೌಲ್ಯ) ಹಾಗೂ ಪ್ರೀಮಿಯಂ ಮೌಲ್ಯದ (ಡಿರೈವೇಟಿವ್ಸ್ ವಹಿವಾಟಿನ ಆಪ್ಷನ್ ಒಪ್ಪಂದಗಳ ಸ್ವತ್ತಿನ ಮೇಲೆ ಪಾವತಿಸುವ ಪ್ರೀಮಿಯಂ) ನಡುವೆ ಗಣನೀಯ ವ್ಯತ್ಯಾಸ ಇರುವ ಕಾರಣ, ಬಿಎಸ್‌ಇ ಪಾವತಿಸಬೇಕಿರುವ ಶುಲ್ಕದ ಮೊತ್ತವು ಹೆಚ್ಚಾಗುವ ನಿರೀಕ್ಷೆ ಇದೆ.

ಡಿರೈವೇಟಿವ್ಸ್ ಒಪ್ಪಂದಗಳ ವಹಿವಾಟಿಗೆ ಅವಕಾಶ ಕಲ್ಪಿಸಿದಾಗಿನಿಂದ ಬಿಎಸ್‌ಇ, ಶುಲ್ಕಗಳನ್ನು ನೋಷನಲ್ ಮೌಲ್ಯದ ಬದಲು ಪ್ರೀಮಿಯಂ ಮೌಲ್ಯ ಆಧರಿಸಿ ಲೆಕ್ಕಹಾಕುತ್ತಿದೆ ಎಂದು ಸೆಬಿ ಹೇಳಿದೆ.

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹15600
ಎಸಿ	₹9520
ಆರ್‌ಪಿ	₹16200
ಆರ್‌ಸಿ	₹10090

ರಾಜ್ಯದಲ್ಲಿ 69 ಲಕ್ಷ 5ಜಿ ಗ್ರಾಹಕರು: ಏರ್‌ಟೆಲ್

ಬೆಂಗಳೂರು (ಪಿಟಿಐ): 'ಕರ್ನಾಟಕದಲ್ಲಿ ತನ್ನ 5ಜಿ ಸೌಲಭ್ಯವನ್ನು 69 ಲಕ್ಷ ಜನರು ಪಡೆದುಕೊಂಡಿದ್ದಾರೆ. 5ಜಿ ಸೇವೆ ಪಡೆದುಕೊಳ್ಳುತ್ತಿರುವ ಗ್ರಾಹಕರ ಸಂಖ್ಯೆಯು ಕಳೆದ 6 ತಿಂಗಳಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ' ಎಂದು ಭಾರ್ತಿ ಏರ್‌ಟೆಲ್ ಹೇಳಿಕೊಂಡಿದೆ.

'ನಮ್ಮ ಕಂಪನಿಯು 5ಜಿ ನೆಟ್‌ವರ್ಕ್ ಅನ್ನು ರಾಜ್ಯದಾದ್ಯಂತ ವಿಸ್ತರಿದ್ದು ಮತ್ತು 5ಜಿ ಸೇವೆ ಪಡೆದು ಕೊಳ್ಳುವ ಪ್ರಕ್ರಿಯೆಯನ್ನು ಸುಲಭಗೊಳಿ ಸಿದ್ದು ಗ್ರಾಹಕರ ಸಂಖ್ಯೆ ಏರಿಕೆಯಾಗಲು ಪ್ರಮುಖ ಕಾರಣಗಳು' ಎಂದು ಕಂಪನಿ ಹೇಳಿದೆ. 'ಕರ್ನಾಟಕದಾದ್ಯಂತ ನೆಟ್‌ವರ್ಕ್ ವಿಸ್ತರಿಸಿಕೊಳ್ಳಲು ಬೇಕಾದಮೂಲಸೌಕರ್ಯ ಹೆಚ್ಚು ಮಾಡಿಕೊಳ್ಳುವತ್ತ ನಾವು ಹೆಚ್ಚು ಗಮನ ಇರಿಸಿದ್ದೇವೆ' ಎಂದು ಕಂಪನಿಯ ಕರ್ನಾಟಕದ ಸಿಇಒ ವಿವೇಕ್ ಮೆಹೆಂದಿರಟ್ಟ ಹೇಳಿದ್ದಾರೆ.

₹2,258 ಕೋಟಿ ಲಾಭ: ಅಲ್ಟ್ರಾಟೆಕ್ ಸಿಮೆಂಟ್

ನವದೆಹಲಿ (ಪಿಟಿಐ): ಅಲ್ಟ್ರಾಟೆಕ್ ಕಂಪನಿಯು 2023–24ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹2,258.58 ಕೋಟಿ ನಿವ್ವಳ ಲಾಭಗಳಿಸಿದೆ. '2022–23ನೇ ಆರ್ಥಿಕ ವರ್ಷದಲ್ಲಿ ಗಳಿಸಿದ ಲಾಭಕ್ಕೆ ಹೋಲಿಸಿದರೆ, ಶೇ 35.24ರಷ್ಟು (₹1,670.10 ಕೋಟಿ) ಏರಿಕೆಯಾಗಿದೆ' ಎಂದು ಕಂಪನಿ ಸೋಮವಾರ ಮಾಹಿತಿ ನೀಡಿದೆ.

'ನಮ್ಮ ಮಾರಾಟದ ಪ್ರಮಾಣವು ಏರಿಕೆಯಾಗಿದ್ದು, ನಾಲ್ಕನೇ ತ್ರೈಮಾಸಿಕದಲ್ಲಿ 3.50 ಕೋಟಿ ಟನ್‌ನಷ್ಟು ಸಿಮೆಂಟ್ ಮಾರಾಟವಾಗಿದೆ. 3.22 ಕೋಟಿ ಟನ್‌ನಷ್ಟು ಗ್ರೇ ಸಿಮೆಂಟ್ ಮಾರಾಟವಾಗಿದೆ. ದೇಶೀಯ ಮಾರಾಟವು ವರ್ಷದಿಂದ ವರ್ಷಕ್ಕೆ ಶೇ 11ರಷ್ಟು ಏರಿಕೆಯಾಗಿದೆ' ಎಂದು ಕಂಪನಿ ಹೇಳಿಕೊಂಡಿದೆ.

'ಇದೇ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ₹20,418 ಕೋಟಿ ಆದಾಯ ಗಳಿಸಿದೆ.

ಸೆರೆಲಾಕ್ ಆಹಾರದಲ್ಲಿ ಹೆಚ್ಚಿನ ಸಕ್ಕರೆ ಇಲ್ಲ: ನೆಸ್ಲೆ ಇಂಡಿಯಾ ಅಧ್ಯಕ್ಷರ ಸ್ಪಷ್ಟನೆ

ಗುರುಗ್ರಾಮ (ಪಿಟಿಐ): 18 ತಿಂಗಳ ಒಳಗಿನ ಮಕ್ಕಳಿಗೆ ನೀಡಲಾಗುವ ಸೆರೆಲಾಕ್ ಶಿಶು ಆಹಾರವನ್ನು ಜಾಗತಿಕ ಗುಣಮಟ್ಟದ ಮಾನದಂಡಕ್ಕೆ ಅನುಗುಣವಾಗಿಯೇ ತಯಾರಿಸಲಾಗುತ್ತದೆ. ಆದರೆ, ಸೆರೆಲಾಕ್ ವಿರುದ್ಧ ಮಾಡಲಾದ ಆರೋಪ ದುರದೃಷ್ಟಕರ ಮತ್ತು ಅಸತ್ಯ ಎಂದು ಬಹುರಾಷ್ಟ್ರೀಯ ಕಂಪನಿ ನೆಸ್ಲೆ ಇಂಡಿಯಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾರಾಯಣನ್ ಅವರು ಸೋಮವಾರ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಶಿಶು ಆಹಾರದಲ್ಲಿನ ಸಕ್ಕರೆ ಅಂಶದ ಪ್ರಮಾಣವನ್ನು ನಿರ್ದಿಷ್ಟ ವಯೋಮಾನದ ಮಕ್ಕಳಿಗೆ ನೀಡಲಾಗುವ ಪೌಷ್ಟಿಕಾಂಶಕ್ಕೆ ಅನುಗುಣವಾಗಿ ನಿಗದಿಪಡಿಸಲಾಗಿದೆ ಮತ್ತು ಅದು ಸಾರ್ವತ್ರಿಕವೂ ಆಗಿದೆ. ಸೆರೆಲಾಕ್‌ನಲ್ಲಿ ನೆಸ್ಲೆ ಇಂಡಿಯಾ ಸೇರಿಸಿದ



ಸಕ್ಕರೆ ಅಂಶವು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸೂಚಿಸಿದ ಮಿತಿಗಿಂತಲೂ ತುಂಬಾ ಕಡಿಮೆ ಇದೆ ಎಂದು ಅವರು ಒತ್ತಿ ಹೇಳಿದರು.

'ಈ ಉತ್ಪನ್ನದಲ್ಲಿ ಮಗುವಿಗೆ ಯಾವುದೇ ಅಪಾಯ ಅಥವಾ ಯಾವುದೇ ರೀತಿಯ ಹಾನಿಯನ್ನು ಉಂಟುಮಾಡುವಂತಹ ಅಂಶಗಳು ಇಲ್ಲ. ನೆಸ್ಲೆ ತಯಾರಿಕೆಯ ಶಿಶು ಆಹಾರ ಉತ್ಪನ್ನದಲ್ಲಿ ಇರುವ ಹೆಚ್ಚಿನ ಸಕ್ಕರೆಗಳು ನೈಸರ್ಗಿಕ ಸಕ್ಕರೆಗಳಾಗಿವೆ' ಎಂದು ಅವರು ಹೇಳಿದ್ದಾರೆ.

ಪ್ರತಿ 100 ಗ್ರಾಂ ಶಿಶು ಆಹಾರದಲ್ಲಿ 13.6 ಗ್ರಾಂನಷ್ಟು ಸಕ್ಕರೆ ಸೇರಿಸಲು ಎಫ್‌ಎಸ್‌ಎಸ್‌ಎಐ ಅನುಮತಿಸಿದೆ. ಆದರೆ ನೆಸ್ಲೆಯ 100 ಗ್ರಾಂ ಆಹಾರದಲ್ಲಿ ಕೇವಲ 7.1 ಗ್ರಾಂನಷ್ಟು ಮಾತ್ರ ಸಕ್ಕರೆ ಸೇರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಬಹುರಾಷ್ಟ್ರೀಯ ಕಂಪನಿ ನೆಸ್ಲೆ ಇಂಡಿಯಾವು ಭಾರತ, ಆಫ್ರಿಕಾ, ಲ್ಯಾಟಿನ್ ಅಮೆರಿಕ ಸೇರಿ ಹಲವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾರಾಟ ಮಾಡುತ್ತಿರುವ ತನ್ನ ಶಿಶು ಆಹಾರ ಉತ್ಪನ್ನಗಳಲ್ಲಿ ಹೆಚ್ಚುವರಿಯಾಗಿ ಸಕ್ಕರೆ ಅಂಶ ಸೇರಿಸಿದೆ ಮತ್ತು ಅದು ಅಧಿಕ ಪ್ರಮಾಣದಲ್ಲಿ ಇದೆ ಎಂಬ ಅಂಶ ಅಧ್ಯಯನಗಳಿಂದ ಗೊತ್ತಾಗಿದೆ ಎಂದು ಸ್ವಿಸ್ ಮೂಲದ ಸ್ವಯಂಸೇವಾ ಸಂಸ್ಥೆ ಪಬ್ಲಿಕ್ ಐ ಹಾಗೂ ಇಂಟರ್‌ನ್ಯಾಷನಲ್ ಬೇಬಿ ಫುಡ್ ಆ್ಯಕ್ಷನ್ ನೆಟ್‌ವರ್ಕ್ (ಐಬಿಎಫ್‌ಎಎನ್) ಈ ತಿಂಗಳ ಆರಂಭದಲ್ಲಿ ಆರೋಪಿಸಿತ್ತು.

ಎರಡು ತಿಂಗಳು ತರಗತಿಗಳಿಗೆ ಕುತ್ತು

ಒಂದನೇ ಪುಟದಿಂದ...

ಬೆಳಗಾವಿಯ ರಾಣಿ ಪಾರ್ವತಿ ದೇವಿ ಪದವಿ ಕಾಲೇಜು, ಕೊಪ್ಪಳದ ಗವಿಸಿದ್ದೇಶ್ವರ ಪದವಿ ಕಾಲೇಜು, ಕುಮಟಾದ (ಉತ್ತರ ಕನ್ನಡ ಕ್ಷೇತ್ರ) ಡಾ.ಎ.ವಿ. ಬಾಳಿಗಾ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗೂ ಪಿಯು ಕಾಲೇಜು ಕಟ್ಟಡದಲ್ಲಿ ಪಾಠ ಮಾಡಲಾಗುತ್ತಿದೆ.

ಬೀದರ್‌ನ ಬಿ.ವಿ. ಭೂಮರಡ್ಡಿ ಕಾಲೇಜಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿ ನಡೆಸಲಾಗುತ್ತಿದೆ. ಮೈಸೂರು ಮಹಾರಾಣಿ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳಿಗೂ ಆನ್‌ಲೈನ್ ಮೂಲಕ ಪಾಠ ಮಾಡಲಾಗುತ್ತಿದೆ. ಅಗತ್ಯವಿದ್ದಾಗ ಪಕ್ಕದ ಹಾಸ್ಟೆಲ್ ಕಟ್ಟಡವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಕೆಲ ಪದವಿಪೂರ್ವ ಕಾಲೇಜುಗಳನ್ನೂ ಮತ ಎಣಿಕೆಗೆ ಪಡೆಯಲಾಗಿದೆ. ಪ್ರಸ್ತುತ ಪಿಯು ವಿದ್ಯಾರ್ಥಿಗಳಿಗೆ ರಜೆ ಇರುವ ಕಾರಣ ಸಮಸ್ಯೆ ಇಲ್ಲ. ಹಾಗೆಯೇ, ಕೆಲ ಲೋಕಸಭಾ ಕ್ಷೇತ್ರಗಳಲ್ಲಿ ಅಲ್ಲಿನ ವಿಶ್ವವಿದ್ಯಾಲಯಗಳನ್ನು ಬಳಸಿಕೊಳ್ಳಲಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಸಾಕಷ್ಟು ಕಟ್ಟಡಗಳು ಲಭ್ಯ ಇರುವುದರಿಂದ ಅಂತಹ ಮತ ಎಣಿಕೆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗಿಲ್ಲ.

ಸೌತ್ ಇಂಡಿಯನ್ ಬ್ಯಾಂಕ್ ಜೊತೆ ಟಾಟಾ ಮೋಟರ್ಸ್ ಒಪ್ಪಂದ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್, ತನ್ನ ವಾಣಿಜ್ಯ ವಾಹನ ಗ್ರಾಹಕರಿಗೆ ಮತ್ತು ಡೀಲರ್‌ಶಿಪ್‌ಗಳಿಗೆ (ವಿತರಕರಿಗೆ) ಹಣಕಾಸು ನೆರವು ಸೌಲಭ್ಯ ಒದಗಿಸಲು ಸೌತ್ ಇಂಡಿಯನ್ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಕಂಪನಿಯು 1 ಟನ್‌ಗಿಂತಲೂ ಕಡಿಮೆ ಸಾಮರ್ಥ್ಯದ ಸರಕು ಸಾಗಣೆ ವಾಹನಗಳಿಂದ 55 ಟನ್ ಸಾಮರ್ಥ್ಯದ ಸರಕು ಸಾಗಣೆ ವಾಹನಗಳು ಹಾಗೂ 10 ಆಸನದ ಪ್ರಯಾಣಿಕ ಸಾರಿಗೆ ವಾಹನಗಳಿಂದ 51 ಆಸನದ ಸಾರಿಗೆ ವಾಹನಗಳನ್ನು ಮಾರಾಟ ಮಾಡುತ್ತದೆ. ಈ ಒಪ್ಪಂದದಿಂದ ಈ ಎಲ್ಲ ವಾಹನಗಳಿಗೆ ಹಣಕಾಸಿನ ನೆರವು ಸೌಲಭ್ಯ ದೊರೆಯಲಿದೆ ಎಂದು ಕಂಪನಿ ತಿಳಿಸಿದೆ.

ವಾಹನ ಮಾಲೀಕರನ್ನು ಸಬಲೀಕರಣಗೊಳಿಸುವುದು ಮತ್ತು ವಿತರಕರು ತಮ್ಮ ವ್ಯಾಪಾರ ಗುರಿಗಳನ್ನು ಸಾಧಿಸುವುದೇ ನಮ್ಮ ಒಪ್ಪಂದದ ಗುರಿಯಾಗಿದೆ ಎಂದು ಟಾಟಾ ಮೋಟರ್ಸ್ ವಾಣಿಜ್ಯ ವಾಹನಗಳ ಉಪಾಧ್ಯಕ್ಷ ರಾಜೇಶ್ ಕೌಲ್ ಹೇಳಿದ್ದಾರೆ.

ಟಾಟಾ ಮೋಟರ್ಸ್‌ನೊಂದಿಗಿನ ನಮ್ಮ ಸಹಯೋಗವು ವಾಣಿಜ್ಯ ವಾಹನ ವಿತರಕರು ಮತ್ತು ಗ್ರಾಹಕರಿಗೆ ಹಣಕಾಸು ಪರಿಹಾರಗಳನ್ನು ನೀಡಲು ಅನುವು ಮಾಡಿಕೊಡುತ್ತದೆ ಎಂದು ಸೌತ್ ಇಂಡಿಯನ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಪಿ.ಆರ್. ಶೇಷಾದ್ರಿ ಹೇಳಿದ್ದಾರೆ.

ಹೌಥಿ ಬಂಡುಕೋರರಿಂದ ಹಡಗಿನ ಮೇಲೆ ಕ್ಷಿಪಣಿ ದಾಳಿ?

ಜೆರುಸಲೇಂ (ಎಪಿ): ಕೆಂಪು ಸಮುದ್ರ ಪ್ರದೇಶದಲ್ಲಿ ಸೋಮವಾರ ಸರಕು ಸಾಗಣೆ ಹಡಗೊಂದರ ಮೇಲೆ ಕ್ಷಿಪಣಿ ದಾಳಿ ನಡೆದಿದೆ. ಈ ದಾಳಿ ನಡೆಸಿದ್ದು ಹೌಥಿ ಬಂಡುಕೋರರು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಯೆಮನ್‌ನ ಮೊಖಾ ಸಮುದ್ರ ತೀರದ ಸಮೀಪದಲ್ಲಿ ಈ ದಾಳಿ ನಡೆದಿದೆ ಎಂದು ಬ್ರಿಟನ್ ಮಿಲಿಟರಿಯ ಸಂಸ್ಥೆಯೊಂದು ತಿಳಿಸಿದೆ. ಹೆಚ್ಚಿನ ವಿವರ ಲಭ್ಯವಾಗಿಲ್ಲ. ಈ ಪ್ರದೇಶದಲ್ಲಿ ಹಡಗುಗಳು ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದು ಅದು ಸೂಚಿಸಿದೆ.



ಮಾಲ್ಟಾ ದೇಶಕ್ಕೆ ಸೇರಿರುವ ಸರಕು ಸಾಗಣೆ ಹಡಗಿನ ಮೇಲೆ ಮೂರು ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ಖಾಸಗಿ ಭದ್ರತಾ ಸಂಸ್ಥೆ ಆ್ಯಂಬ್ರೆ ತಿಳಿಸಿದೆ. ಈ ಹಡಗು ಸೌದಿ ಅರೇಬಿಯಾದ ಜೆದ್ದಾ ಕಡೆ ತೆರಳುತ್ತಿತ್ತು.

ದಾಳಿ ನಡೆಸಿರುವುದನ್ನು ಹೌಥಿ ಬಂಡುಕೋರರ ಕಡೆಯವರು ತಕ್ಷಣಕ್ಕೆ ಒಪ್ಪಿಕೊಂಡಿಲ್ಲ. ಈ ಬಂಡುಕೋರರು ಯಾವುದೇ ದಾಳಿಯ ಬಗ್ಗೆ ಹೊಣೆ ಹೊರಲು ಕೆಲವು ಗಂಟೆಗಳು ಬೇಕಾಗುತ್ತವೆ.

ಇಸ್ರೇಲ್ ದೇಶವು ಗಾಜಾದಲ್ಲಿ ನಡೆಸುತ್ತಿರುವ ದಾಳಿಯನ್ನು ಕೊನೆಗೊಳಿಸಬೇಕು ಎಂಬ ಒತ್ತಡ ಹೇರುವ ಉದ್ದೇಶದಿಂದ ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿ ಪ್ರದೇಶದಲ್ಲಿ ಸರಕು ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸುತ್ತಿರುವುದಾಗಿ ಹೌಥಿ ಬಂಡುಕೋರರು ಹೇಳಿದ್ದಾರೆ.

ನವೆಂಬರ್ ನಂತರದಲ್ಲಿ ಹೌಥಿ ಬಂಡುಕೋರರು ಹಡಗುಗಳ ಮೇಲೆ 50ಕ್ಕೂ ಹೆಚ್ಚು ಬಾರಿ ದಾಳಿ ನಡೆಸಿದ್ದಾರೆ, ಒಂದು ಹಡಗನ್ನು ವಶಪಡಿಸಿಕೊಂಡಿದ್ದಾರೆ. ಇನ್ನೊಂದು ಹಡಗನ್ನು ಮುಳುಗಿಸಿದ್ದಾರೆ ಎಂದು ಅಮೆರಿಕ ಹೇಳಿದೆ.



ನೃತ್ಯ ಪ್ರದರ್ಶನ ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಅಂತರರಾಷ್ಟ್ರೀಯ ನೃತ್ಯ ದಿನವಾದ ಸೋಮವಾರದಂದು ರಸ್ತೆಯೊಂದರಲ್ಲಿ ನೃತ್ಯ ಪ್ರದರ್ಶಿಸಿದ ಮಹಿಳೆಯರು– ಪಿಟಿಐ ಚಿತ್ರ

'ಲೋಪ ಎಸಗಿದವರ ವಿರುದ್ಧ ಕ್ರಮ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಸೇರಲು ಕಾರಣರಾದವರ ವಿರುದ್ಧ ಕ್ರಮ ಜರುಗಿಸಲು ಉನ್ನತ ಶಿಕ್ಷಣ ಇಲಾಖೆ ನಿರಾಸಕ್ತಿ ತೋರಿದೆ.

ವಿದ್ಯಾರ್ಥಿಗಳಿಗೆ ಪರಿಹಾರ ದೊರಕಿಸಲು ನಾಲ್ಕು ಸಮಿತಿಗಳನ್ನು ರಚಿಸಿ, ನಾಲ್ಕು ದಿನಗಳಲ್ಲಿ ವರದಿ ಪಡೆದು ತ್ವರಿತ ಕ್ರಮ ಕೈಗೊಂಡ ಇಲಾಖೆ, ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಾಗ ಲೋಪ ಎಸಗಿದವರನ್ನು ಪತ್ತೆ ಮಾಡಿ, ಕ್ರಮ ಕೈಗೊಳ್ಳಲು ಹಿಂದೇಟು ಹಾಕಿದೆ.

'ಪ್ರಶ್ನೆ ಪತ್ರಿಕೆ ಸೋರಿಕೆ ತಡೆಯಲು ಕೆಇಎ ಹೊರಗಿನ ವಿಷಯ ತಜ್ಞರನ್ನು ಬಳಸಿಕೊಂಡಿತ್ತು. ಕೋರಿಕೆ ಮೇರೆಗೆ ಅವರು ಕೆಲಸ ಮಾಡಿದ್ದಾರೆ. ಸಂವಹನದ ಕೊರತೆ, ಪಿಯು ಇಲಾಖಾ ವೆಬ್‌ಸೈಟ್‌ನಲ್ಲಿ ಕೈಬಿಟ್ಟ ಪಠ್ಯಗಳನ್ನು ಸಕಾಲಕ್ಕೆ ಅಪ್‌ಲೋಡ್ ಮಾಡದ ಕಾರಣಗಳಿಂದ ಸಮಸ್ಯೆಯಾಗಿದೆ. ಹಾಗಾಗಿ, ಅಧಿಕಾರಿಗಳು ಹಾಗೂ ವಿಷಯ ತಜ್ಞರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ಬದಲು ಭವಿಷ್ಯದಲ್ಲಿ ಇಂತಹ ಪ್ರಮಾದ ಆಗದಂತೆ ತಡೆಯಲು ಆದ್ಯತೆ ನೀಡಲಾಗಿದೆ' ಎನ್ನುತ್ತಾರೆ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು.

ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ಮಾನದಂಡ

ಪಠ್ಯಕ್ಕೆ ಹೊರತಾದ ಪ್ರಶ್ನೆಗಳ ಸೇರುವಿಕೆಯಿಂದ ಆದ ಗೊಂದಲ, ವಿದ್ಯಾರ್ಥಿಗಳ ಆತಂಕವನ್ನು ಸರ್ಕಾರ ಸೂಕ್ಷ್ಮವಾಗಿ ಗಮನಿಸಿದೆ. ಸಿಇಟಿ ವ್ಯವಸ್ಥೆಯ ವಿಶ್ವಾಸಾರ್ಹತೆ ಉಳಿಸಿಕೊಳ್ಳಬೇಕು. ಇಂತಹ ಘಟನೆಗಳು ಭವಿಷ್ಯದಲ್ಲಿ ಮರುಕಳಿಸದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಸಿಇಟಿ ಸೇರಿದಂತೆ ಕೆಇಎ ನಡೆಸುವ ಎಲ್ಲ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲು ಪ್ರತ್ಯೇಕ ಮಾನದಂಡ ರೂಪಿಸಿಕೊಳ್ಳಬೇಕು ಎಂದು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀಕರ್ ಅವರು ಕೆಇಎಗೆ ಸೂಚಿಸಿದ್ದಾರೆ.

ಸಿಇಟಿ: ಕೀ ಉತ್ತರ ಪ್ರಕಟ

ಸಿಇಟಿ ಪ್ರಶ್ನೆಗಳ ಕೀ ಉತ್ತರಗಳನ್ನು ಕೆಇಎ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು ಮೇ 7ರ ಬೆಳಿಗ್ಗೆ 11ರವರೆಗೆ ಅವಕಾಶ ನೀಡಿದೆ.

ಪಠ್ಯಕ್ಕೆ ಹೊರತಾದ ಪ್ರಶ್ನೆಗಳನ್ನು ಕೀ ಉತ್ತರದ ಪಟ್ಟಿಯಿಂದ ಕೈಬಿಡಲಾಗಿದೆ. ನಾಲ್ಕೂ ವಿಷಯಗಳ ಉಳಿದ ಪ್ರಶ್ನೆಗಳ ತಾತ್ಕಾಲಿಕ ಸರಿ ಉತ್ತರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ಪ್ರಾಧಿಕಾರದ ಆನ್‌ಲೈನ್ ಪೋರ್ಟಲ್ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಮೆಕ್ಸಿಕೊ: ಬಸ್ ಅಪಘಾತದಲ್ಲಿ 18 ಸಾವು

ಮೆಕ್ಸಿಕೊ (ರಾಯಿಟರ್ಸ್): ಮೆಕ್ಸಿಕೊದಲ್ಲಿ ಭೀಕರ ಬಸ್ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ಕನಿಷ್ಠ 18 ಜನರು ಸಾವನ್ನಪ್ಪಿದ್ದಾರೆ. ಅಲ್ಲದೇ ಇತರ 32 ಜನರು ಗಾಯಗೊಂಡಿದ್ದಾರೆ ಎಂದು ಮೆಕ್ಸಿಕೊದ ನಾಗರಿಕ ರಕ್ಷಣಾ ಸಮಿತಿ ತಿಳಿಸಿದೆ. ಮೆಕ್ಸಿಕೊ ರಾಜ್ಯದ ದಕ್ಷಿಣ ಪ್ರದೇಶದ ಮಲಿನಾಲ್ಕೊದಲ್ಲಿ ಈ ಅಪಘಾತ ಸಂಭವಿಸಿದೆ.

ಗುವಾನಾಜುವಾಟೊದ ಸ್ಯಾನ್ ಲೂಯಿಸ್ ಡೆ ಲಾ ಪಾಜ್‌ನಿಂದ ಚಾಲ್ಮಾಗೆ ಹೋಗುತ್ತಿದ್ದ ವೇಳೆ ಹೆದ್ದಾರಿಯಲ್ಲಿ ಬಸ್ ಪಲ್ಟಿಯಾಗಿದೆ. 14 ಜನರು ಸ್ಥಳದಲ್ಲೇ ಮೃತಪಟ್ಟಿದ್ದರೆ, ನಾಲ್ವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಮೆಕ್ಸಿಕೊ ಭದ್ರತಾ ಕಾರ್ಯದರ್ಶಿ ತಿಳಿಸಿದ್ದಾರೆ.

ಅಪಘಾತದಲ್ಲಿ ಗಾಯಗೊಂಡವರಿಗೆ ಅವರ ಸಂಬಂಧಿಕರು ನೀರು ಮತ್ತು ಹೊದಿಕೆಗಳನ್ನು ನೀಡುತ್ತಿರುವ ದೃಶ್ಯಗಳನ್ನು ಸ್ಥಳೀಯ ಮಾಧ್ಯಮಗಳು ಪ್ರಸಾರ ಮಾಡಿವೆ.





ತೆಲಂಗಾಣ ಮುಖ್ಯಮಂತ್ರಿಗೆ ಸಮನ್ಸ್

ಸಚಿವ ಅಮಿತ್ ಶಾ ವಿಡಿಯೊ ತಿರುಚಿದ ಪ್ರಕರಣ • ವಿಚಾರಣೆಗೆ ಹಾಜರಾಗಿ: ದೆಹಲಿ ಪೊಲೀಸರು

ಪ್ರಜಾವಾಣಿ ವಾರ್ತೆ

ನವದೆಹಲಿ: ಮೀಸಲಾತಿ ಕುರಿತ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯ ತಿರುಚಿದ ವಿಡಿಯೊ ಪ್ರಕರಣಕ್ಕೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರಿಗೆ ಮೇ 1ರಂದು ವಿಚಾರಣೆಗೆ ಹಾಜರಾಗಿ ಹೇಳಿಕೆ ನೀಡುವಂತೆ ದೆಹಲಿ ಪೊಲೀಸರು ಸೋಮವಾರ ಸೂಚಿಸಿದ್ದಾರೆ.

ತಿರುಚಿದ ಈ ನಕಲಿ ವಿಡಿಯೊ ಅನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ರೇವಂತ್ ರೆಡ್ಡಿ ಸೇರಿದಂತೆ ತೆಲಂಗಾಣ ಕಾಂಗ್ರೆಸ್‌ನ ಐವರು ನಾಯಕರಿಗೆ ದೆಹಲಿ ಪೊಲೀಸರು ಸಮನ್ಸ್ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ರೇವಂತ್ ರೆಡ್ಡಿ ಅವರು 'ಎಕ್ಸ್'ನಲ್ಲಿ ವಿಡಿಯೊ ಹಂಚಿಕೊಂಡಿದ್ದರು. ವಿಡಿಯೊ ಪೋಸ್ಟ್ ಮಾಡಿದ ಮೊಬೈಲ್ ಫೋನ್ ಸೇರಿ ಎಲೆಕ್ಟ್ರಾನಿಕ್ ಸಾಧನಗಳನ್ನು ತನಿಖೆ ವೇಳೆ ಹಾಜರುಪಡಿಸಲು ಪೊಲೀಸರು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಗೃಹ ಸಚಿವಾಲಯ ಅಧೀನದ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ (ಐ4ಸಿ) ಡೆಪ್ಯೂಟಿ ಕಮಾಂಡಂಟ್ ಸಿಂಕು ಶರಣ್ ಸಿಂಗ್ ಅವರು 'ಸಾರ್ವಜನಿಕ ಶಾಂತಿ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವ, ಸಮುದಾಯಗಳ ನಡುವೆ ಸಂಘರ್ಷ ಉಂಟುಮಾಡುವ ಉದ್ದೇಶದಿಂದ ಕೆಲವು ತಿರುಚಿದ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಲಾಗುತ್ತಿದೆ' ಎಂದು ದೂರು ನೀಡಿದ್ದರು. ಇದಕ್ಕೆ ಸಂಬಂಧಿಸಿದ ವಿಡಿಯೊಗಳ ಲಿಂಕ್‌ಗಳನ್ನು ಸಹ ದೆಹಲಿ ಪೊಲೀಸರೊಂದಿಗೆ ಸಿಂಗ್ ಹಂಚಿಕೊಂಡಿದ್ದಾರೆ.

ಈ ದೂರು ಆಧರಿಸಿ ದೆಹಲಿ ಪೊಲೀಸರ ವಿಶೇಷ ಘಟಕವು ಭಾರತೀಯ ದಂಡ ಸಂಹಿತೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದೆ.

ಧರ್ಮಾಧಾರಿತವಾಗಿ ನೀಡಲಾದ ಮುಸ್ಲಿಮರ ಮೀಸಲಾತಿ ರದ್ದುಪಡಿಸಲು ಬದ್ಧ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತೆಲಂಗಾಣದಲ್ಲಿ ನೀಡಿದ್ದ ಹೇಳಿಕೆಯನ್ನು, ಅವರು ಎಲ್ಲ ಮೀಸಲಾತಿಯನ್ನು ರದ್ದುಗೊಳಿಸುವುದಾಗಿ ಪ್ರತಿಪಾದಿಸುತ್ತಿದ್ದಾರೆ ಎಂದು ಬಿಂಬಿಸುವಂತೆ ಬದಲಾಯಿಸಿ ತಿರುಚಿದ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾಗಿದೆ.

ಅಸ್ಸಾಂ ಕಾಂಗ್ರೆಸ್ ಪದಾಧಿಕಾರಿ ಸೆರೆ

ಗುವಾಹಟಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ತಿರುಚಿದ ವಿಡಿಯೊ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿದ ಆರೋಪದ ಮೇಲೆ ಸೋಮವಾರ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸೋಮವಾರ ಹೇಳಿದ್ದಾರೆ.

ರೀತೋಮ್ ಸಿಂಗ್ (31) ಬಂಧಿತ ವ್ಯಕ್ತಿ. ಇವರು ಅಸ್ಸಾಂ ಕಾಂಗ್ರೆಸ್‌ನೊಂದಿಗೆ ನಂಟು ಹೊಂದಿದ್ದು, ಅವರ 'ಎಕ್ಸ್' ಖಾತೆಯ ಪ್ರೊಫೈಲ್ ಪ್ರಕಾರ ಪಕ್ಷದ 'ವಾರ್ ರೂಮ್ ಸಂಯೋಜಕ'ರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಿಂಗ್ ಅವರ ಬಳಿಯಿದ್ದ ಎರಡು ಮೊಬೈಲ್ ಫೋನ್‌ಗಳು ಮತ್ತು ಒಂದು ಲ್ಯಾಪ್‌ಟಾಪ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನಕಲಿ ವಿಡಿಯೊ ಹಂಚಿಕೆ: ಮೋದಿ ಕಳವಳ

ಸತಾರಾ (ಮಹಾರಾಷ್ಟ್ರ) (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಎದುರಿಸಲು ಸಾಧ್ಯವಾಗದ ರಾಜಕೀಯ ಪ್ರತಿಸ್ಪರ್ಧಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ವಿಡಿಯೊಗಳನ್ನು ಪ್ರಸಾರ ಮಾಡಲು ತಂತ್ರಜ್ಞಾನ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಆರೋಪಿಸಿದ್ದಾರೆ.

ಸತಾರಾ ಜಿಲ್ಲೆಯ ಕರಾಡ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎ.ಐ) ಬಳಸಿ ಸೃಷ್ಟಿಸಿದ ನಕಲಿ ವಿಡಿಯೊಗಳ ಹಂಚಿಕೆ ಕುರಿತು ಕಳವಳ ವ್ಯಕ್ತಪಡಿಸಿದರು.

'ನಾನು ಸೇರಿದಂತೆ ಅಮಿತ್ ಶಾ ಮತ್ತು ಜೆ.ಪಿ. ನಡ್ಡಾ ಅವರಂತಹ ನಾಯಕರ ಹೇಳಿಕೆಗಳನ್ನು ತಿರುಚಿ, ಸಾಮಾಜಿಕ ಸಂಘರ್ಷ ಸೃಷ್ಟಿಸಲು ನಮ್ಮ ರಾಜಕೀಯ ವಿರೋಧಿಗಳು ಎ.ಐ ಬಳಸುತ್ತಿದ್ದಾರೆ' ಎಂದು ಆರೋಪಿಸಿದರು.

'ನಾನು ಬದುಕಿರುವವರೆಗೆ ಧರ್ಮಾಧಾರಿತ ಮೀಸಲಾತಿ ಮತ್ತು ಸಂವಿಧಾನದ ಬದಲಾವಣೆಗೆ ಯಾವುದೇ ಅವಕಾಶ ನೀಡುವುದಿಲ್ಲ. ಎ.ಐ ತಂತ್ರಜ್ಞಾನ ಬಳಸಿ ನನ್ನ ಧ್ವನಿಯಲ್ಲಿ ನಕಲಿ ವಿಡಿಯೊ ಮಾಡಿ ಅಪಾಯ ಸೃಷ್ಟಿಸುತ್ತಿದ್ದಾರೆ. ಇಂತಹ ನಕಲಿ ವಿಡಿಯೊ ಕಂಡರೆ ಪೊಲೀಸರಿಗೆ ಮಾಹಿತಿ ನೀಡಿ' ಎಂದು ಮೋದಿ ಮನವಿ ಮಾಡಿದರು.

'ನಕಲಿ ವಿಡಿಯೊಗಳ ಬಗ್ಗೆ ಜನರು ಜಾಗರೂಕರಾಗಿರಬೇಕು. ಯಾವುದೇ ನಕಲಿ ವಿಡಿಯೊಗಳನ್ನು ಕಂಡಾಗ ಅವುಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಬೇಕು. ಇಂತಹ ನಕಲಿ ವಿಡಿಯೊಗಳನ್ನು ಸೃಷ್ಟಿಸುವವರ ವಿರುದ್ಧ ಚುನಾವಣಾ ಆಯೋಗವೂ ಕ್ರಮ ತೆಗೆದುಕೊಳ್ಳಬೇಕು' ಎಂದು ಮೋದಿ ಮನವಿ ಮಾಡಿದರು.

ಕಾಂಗ್ರೆಸ್ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

ನವದೆಹಲಿ (ಪಿಟಿಐ): ಚುನಾವಣಾ ಪ್ರಕ್ರಿಯೆಯ ಹಳಿತಪ್ಪಿಸಲು ಗೃಹ ಸಚಿವ ಅಮಿತ್ ಶಾ ಅವರ 'ಡೀಪ್ ಫೇಕ್ ಮತ್ತು ತಿರುಚಿದ' ವಿಡಿಯೊವನ್ನು ಕಾಂಗ್ರೆಸ್ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡಿದೆ ಎಂದು ಬಿಜೆಪಿ ಆರೋಪಿಸಿ ಸೋಮವಾರ ಕಾಂಗ್ರೆಸ್ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ಕಾಂಗ್ರೆಸ್ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ನಾಯಕರು ಒತ್ತಾಯಿಸಿದ್ದಾರೆ.

ಹಾಗೆಯೇ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷವು ಹಿಂಸಾಚಾರವನ್ನು ಅಸ್ತ್ರವಾಗಿ ಬಳಸುತ್ತಿದೆ ಎಂದು ಆರೋಪಿಸಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಮತ್ತು ಬಿಜೆಪಿ ರಾಷ್ಟ್ರೀಯ ಮಾಧ್ಯಮ ವಿಭಾಗದ ಉಸ್ತುವಾರಿ ಅನಿಲ್ ಬಲೂನಿ ಅವರನ್ನೊಳಗೊಂಡ ಬಿಜೆಪಿ ನಿಯೋಗವು ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧವು ದೂರು ನೀಡಿದೆ.

ಚುನಾವಣಾ ಆಯೋಗದ ಅಧಿಕಾರಿಗಳನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಅಶ್ವಿನಿ ವೈಷ್ಣವ್, 'ಕಾಂಗ್ರೆಸ್ ನಕಲಿ ಮತ್ತು ತಿರುಚಿದ ವಿಡಿಯೊ ಮೂಲಕ ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣ ಹಳಿತಪ್ಪಿಸಲು ಬಯಸಿದೆ. ಇದರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ. ಕಾಂಗ್ರೆಸ್ ಸಾಮಾಜಿಕ ಮಾಧ್ಯಮಗಳ ತನ್ನ ಅಧಿಕೃತ ಖಾತೆಯಲ್ಲಿ ನಕಲಿ ವಿಡಿಯೊ ಹಂಚುವ ಮಾಡುವ ಮೂಲಕ ಜನರಲ್ಲಿ ಗೊಂದಲ ಮೂಡಿಸಲು ಪ್ರಯತ್ನಿಸಿದೆ' ಎಂದು ಅವರು ತಿಳಿಸಿದರು.

'ವಾಷಿಂಗ್ಟನ್ ಪೋಸ್ಟ್'ನಲ್ಲಿ 'ರಾ' ಅಧಿಕಾರಿ ಹೆಸರು

ಪನ್ನೂ ಹತ್ಯೆ ಸಂಚಿನಲ್ಲಿ ವಿಕ್ರಮ್ ಪಾತ್ರ

ವಾಷಿಂಗ್ಟನ್ (ಪಿಟಿಐ): 'ಅಮೆರಿಕದಲ್ಲಿ ನಡೆದಿದ್ದ, ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಯ ಸಂಚಿನಲ್ಲಿ 'ರಾ' ಅಧಿಕಾರಿ ವಿಕ್ರಮ್ ಯಾದವ್ ಅವರು ಭಾಗಿಯಾಗಿದ್ದರು' ಎಂದು ಸ್ಥಳೀಯ 'ವಾಷಿಂಗ್ಟನ್ ಪೋಸ್ಟ್' ದೈನಿಕ ವರದಿ ಮಾಡಿದೆ.

ವಿಕ್ರಮ್ ಯಾದವ್ ಅವರು ಸಂಚಿನ ಭಾಗವಾಗಲು ಆಗ ಭಾರತೀಯ ಗುಪ್ತದಳ ಸಂಸ್ಥೆ 'ರಾ' ಮುಖ್ಯಸ್ಥರಾಗಿದ್ದ ಸಾಮಂತ್ ಗೋಯಲ್ ಅವರ ಅನುಮೋದನೆ ಸಿಕ್ಕಿತ್ತು ಎಂದು ಕೂಡ ಈ ವರದಿಯು ಉಲ್ಲೇಖಿಸಿದೆ.

ಖಾಲಿಸ್ತಾನ ಪರ ಆಂದೋಲನದ ಪ್ರಮುಖ ನಾಯಕನಾದ ಪನ್ನೂ, 'ಸಿಖ್ಸ್ ಫಾರ್ ಜಸ್ಟೀಸ್' (ಎಸ್‌ಎಫ್‌ಜೆ) ಸಂಘಟನೆಯ ಕಾನೂನು ಸಲಹೆಗಾರ ಮತ್ತು ವಕ್ತಾರನೂ ಆಗಿದ್ದನು.

ಭಾರತ ಸರ್ಕಾರವು ಪನ್ನೂ ಒಬ್ಬ ಭಯೋತ್ಪಾದಕ ಎಂದು ಘೋಷಿಸಿದೆ.

'ವಾಷಿಂಗ್ಟನ್ ಪೋಸ್ಟ್' ದೈನಿಕದಲ್ಲಿ ಪ್ರಕಟವಾದ ವಿಶೇಷ ತನಿಖಾ ವರದಿಯು, 'ದಕ್ಷಿಣ ಅಮೆರಿಕದಲ್ಲಿ ನಡೆದಿದ್ದ ಹತ್ಯೆ ಸಂಚಿನ ವಿಷಯದಲ್ಲಿ ಭಾರತದ ಧೋರಣೆ ಅಮೆರಿಕದ ಭದ್ರತಾ ಅಧಿಕಾರಿಗಳಲ್ಲಿ ದಿಗ್ಭ್ರಮೆ ಮೂಡಿಸಿತ್ತು' ಎಂದೂ ಹೇಳಿದೆ.

ಯಾದವ್ ಅವರ ಗುರುತು ಮತ್ತು ಅವರೂ ಸಂಚಿನಲ್ಲಿ ಭಾಗಿಯಾಗಿದ್ದರು ಎಂಬುದು ಈ ಮೊದಲು ವರದಿ ಆಗಿರಲಿಲ್ಲ. ಈಗ ಬಯಲಾಗಿರುವ ಈ ಅಂಶ ಹತ್ಯೆಗೆ ಭಾರತ ಗುಪ್ತದಳ ಸಂಸ್ಥೆಯ ನಿರ್ದೇಶನವಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಪ್ರತಿಪಾದಿಸಿದೆ.

'ಸಿಐಎ, ಎಫ್‌ಬಿಐ ಮತ್ತು ಇತರೆ ಸಂಸ್ಥೆಗಳ ತನಿಖೆ ಪ್ರಕಾರ ಪ್ರಧಾನಿ ನರೇಂದ್ರ ಮೋದಿ ಅವರ ಆಪ್ತ ವಲಯದ ಸಂಪರ್ಕ ಹೊಂದಿರುವ 'ರಾ' ಸಂಸ್ಥೆಯ ಉನ್ನತ ಅಧಿಕಾರಿಗಳ ಪಾತ್ರ ಕೂಡ ಹತ್ಯೆ ಸಂಚಿನಲ್ಲಿ ಇರುವುದು ದೃಢಪಟ್ಟಿದೆ' ಎಂದು ಭದ್ರತಾ ಅಧಿಕಾರಿಯೊಬ್ಬರ ಹೇಳಿಕೆಯನ್ನು ವರದಿ ಉಲ್ಲೇಖಿಸಿದೆ.

ಈ ವಿಶೇಷ ವರದಿಗಾಗಿ ಪತ್ರಿಕೆಯ ಪ್ರತಿನಿಧಿಗಳು ದೆಹಲಿ, ವಾಷಿಂಗ್ಟನ್, ಒಟ್ಟಾವಾ, ಲಂಡನ್, ಪ್ರಾಗ್, ಬರ್ಲಿನ್‌ನಲ್ಲಿ 12ಕ್ಕೂ ಹೆಚ್ಚು ಅಧಿಕಾರಿಗಳು, ಪರಿಣತರು, ಪ್ರಮುಖರನ್ನು ಸಂದರ್ಶಿಸಿದ್ದಾರೆ ಎಂದು 'ವಾಷಿಂಗ್ಟನ್ ಪೋಸ್ಟ್'ನ ಮಾಲೀಕ ಜೆಫ್ ಬೆಜೋಸ್ ತಿಳಿಸಿದ್ದಾರೆ.

ಭಾರತದ ಪ್ರಧಾನಿಯವರ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ಅವರಿಗೂ ಬಹುಶಃ, ಸಿಖ್ ಕಾರ್ಯಕರ್ತನ ಕೊಲ್ಲುವ 'ರಾ' ಸಂಚಿನ ಅರಿವಿತ್ತು ಎಂದು ವರದಿ ಹೇಳಿದೆ.

ಜೂನ್ 18ರಂದು ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದಲ್ಲಿ ಖಾಲಿಸ್ತಾನಿ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ನಡೆದಿತ್ತು. ಅದೇ ಅವಧಿಯಲ್ಲಿ ಪನ್ನೂ ಹತ್ಯೆಗೂ ಸಂಚು ನಡೆದಿದ್ದು, ಆ ಕಾರ್ಯಾಚರಣೆಗೂ ವಿಕ್ರಂ ಯಾದವ್ ಅವರಿಗೂ ಸಂಪರ್ಕವಿದೆ ಎಂದೂ ತಿಳಿಸಿದೆ.

ಕೋಟಾ: ವಿದ್ಯಾರ್ಥಿ ಆತ್ಮಹತ್ಯೆ

ಕೋಟಾ (ಪಿಟಿಐ): ರಾಜಸ್ಥಾನದ ಕೋಟಾದಲ್ಲಿ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶಾತಿ ಪರೀಕ್ಷೆಗೆ ('ನೀಟ್') ಸಿದ್ಧತೆ ನಡೆಸುತ್ತಿದ್ದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹರಿಯಾಣದ ರೋಹಟಕ್‌ನ ಸುಮಿತ್ ಪಂಚಾಲ್ (20) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

ಮೇ5ರಂದು ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಯುವ ಮುನ್ನವೇ ಈ ಘಟನೆ ನಡೆದಿದೆ. ಘಟನೆ ಬಗ್ಗೆ ಅಸ್ವಾಭಾವಿಕ ಸಾವಿನ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

2023ರಲ್ಲಿ ಕೋಟಾದಲ್ಲಿ ನೀಟ್ ಮತ್ತು ಜೆಇಇಗೆ ಸಿದ್ಧತೆ ನಡೆಸುತ್ತಿದ್ದ 26 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದರು. ಈ ವರ್ಷ ಇದುವರೆಗೆ ಎಂಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪ್ರತಿ ವರ್ಷ ಪಠ್ಯಕ್ರಮ ಪರಿಷ್ಕರಿಸಿ: ಶಿಕ್ಷಣ ಇಲಾಖೆ

ನವದೆಹಲಿ (ಪಿಟಿಐ): ಪಠ್ಯ ಕ್ರಮವನ್ನು ಪರಿಶೀಲಿಸುವಂತೆ ಮತ್ತು ಪ್ರತಿ ವರ್ಷ ಅವುಗಳನ್ನು ಪರಿಷ್ಕರಿಸುವಂತೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ತರಬೇತಿ ಮಂಡಳಿಗೆ (ಎನ್‌ಸಿಇಆರ್‌ಟಿ) ಶಿಕ್ಷಣ ಸಚಿವಾಲಯ ತಿಳಿಸಿದೆ.

ಒಂದು ಬಾರಿ ಮುದ್ರಣವಾದ ಪಠ್ಯ-ಪುಸ್ತಕಗಳನ್ನು ಹಲವು ವರ್ಷ ಉಳಿಸಿಕೊಳ್ಳಬಾರದು. ಜಗತ್ತು ವೇಗವಾಗಿ ಬದಲಾಗುತ್ತಿದೆ. ಹೀಗಾಗಿ ಪಠ್ಯ ಪುಸ್ತ-ಕಗಳನ್ನು ಪರಿಷ್ಕರಿಸುವುದು ಅತ್ಯಗತ್ಯ. ಪ್ರತಿ ಶೈಕ್ಷಣಿಕ ವರ್ಷ ಆರಂಭದಲ್ಲಿ ಪಠ್ಯ ಪುಸ್ತಕಗಳನ್ನು ಪರಿಷ್ಕರಿಸಬೇಕು. ಉದಾಹರಣೆಗೆ ಕೃತಕ ಬುದ್ಧಿಮತ್ತೆ(ಎಐ) ವಿಷಯಗಳನ್ನು ಸೇರಿಸಬಹುದು. ಎಂದು ತಿಳಿಸಿದೆ ಎಂದು ಮೂಲಗಳು ತಿಳಿಸಿವೆ.

'ಪ್ರತಿ ವರ್ಷ ಮುದ್ರಣಕ್ಕೆ ಕಳುಹಿಸುವ ಮೊದಲು ಪಠ್ಯಪುಸ್ತಕಗಳನ್ನು ಪರಿಶೀಲಿಸಬೇಕು. ಬದಲಾವಣೆಗಳಿದ್ದರೆ ಸರಿಪಡಿಸಬೇಕು ಅಥವಾ ಅಗತ್ಯವಿದ್ದರೆ ಹೊಸ ಅಂಶ ಸೇರಿಸಬೇಕು' ಎಂದು ತಿಳಿಸಿವೆ.

ಎನ್‌ಸಿಇಆರ್‌ಟಿ ಸದ್ಯ ನೂತನ ಪಠ್ಯಕ್ರಮ ಚೌಕಟ್ಟಿನ ಅನುಸಾರ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತಿದೆ. ಈ ಪುಸ್ತಕಗಳು 2026ರ ವೇಳೆಗೆ ಎಲ್ಲ ತರಗತಿಗಳಿಗೆ ಲಭ್ಯವಾಗಲಿವೆ ಎಂದು ತಿಳಿಸಿವೆ.

ಕೆನಡಾ ರಾಯಭಾರಿಗೆ ಸಮನ್ಸ್

ನವದೆಹಲಿ (ಪಿಟಿಐ): ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಮತ್ತು ಹಲವು ನಾಯಕರು ಭಾಗವಹಿಸಿದ್ದ ಟೊರಾಂಟೊದಲ್ಲಿನ ಸಾರ್ವಜನಿಕ ಕಾರ್ಯಕ್ರಮದಲ್ಲಿ 'ಖಾಲಿಸ್ತಾನ' ಪರ ಘೋಷಣೆ ಕೂಗಿರುವುದನ್ನು ಖಂಡಿಸಿ ಭಾರತವು ಸೋಮವಾರ ಕೆನಡಾದ ಡೆಪ್ಯುಟಿ ಹೈಕಮಿಷನರ್ ಅವರನ್ನು ಕರೆಸಿ ತೀವ್ರ ಪ್ರತಿಭಟನೆ ದಾಖಲಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ), ಟ್ರೂಡೊ ಅವರು ಭಾನುವಾರ ಭಾಷಣ ಮಾಡುತ್ತಿದ್ದ ಕಾರ್ಯಕ್ರಮದಲ್ಲಿ ಈ ರೀತಿ ಘೋಷಣೆಗಳನ್ನು ಕೂಗಿರುವುದು ಕೆನಡಾದಲ್ಲಿ ಪ್ರತ್ಯೇಕತಾವಾದ, ಉಗ್ರವಾದ ಮತ್ತು ಹಿಂಸಾಚಾರಕ್ಕೆ ರಾಜಕೀಯ ಬೆಂಬಲ ನೀಡುತ್ತಿರುವುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ದೂಷಿಸಿದೆ.

ಇಂತಹ ಕ್ರಮಗಳು ಭಾರತ-ಕೆನಡಾ ಸಂಬಂಧಗಳ ಮೇಲೆ ಪರಿಣಾಮ ಬೀರುವುದಲ್ಲದೆ, ಕೆನಡಾದಲ್ಲಿ ತನ್ನದೇ ದೇಶದ ನಾಗರಿಕರ ಮೇಲೆ ಹಾನಿಯಾಗುವಂತೆ ಹಿಂಸಾಚಾರ ಮತ್ತು ಅಪರಾಧ ಕೃತ್ಯವನ್ನು ಉತ್ತೇಜಿಸುವ ವಾತಾವರಣ-ವನ್ನು ಸೃಷ್ಟಿಸುತ್ತದೆ ಎಂದೂ ಅದು ಹೇಳಿದೆ. ಸಾರ್ವಜನಿಕ ಸಮಾರಂಭದಲ್ಲಿ ಟ್ರೂಡೊ ಅವರು ಮಾಡಿದ ಭಾಷಣದಲ್ಲಿ, ಸಿಖ್ ಸಮುದಾಯದ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸಲು ಕೆನಡಾ ಅಚಲವಾದ ಬದ್ಧತೆ ಹೊಂದಿದೆ ಎಂದು ಪುನರುಚ್ಚರಿಸಿದರು.



ಮಂಜಿನ ಹೊದಿಕೆ ಜಮ್ಮು–ಕಾಶ್ಮೀರದ ಗುಲ್‌ಮಾರ್ಗ್ ಪಟ್ಟಣದಲ್ಲಿ ಸೋಮವಾರ ಬೆಳಿಗ್ಗೆ ದಟ್ಟ ಮಂಜು ಸುರಿಯಿತು –ಪಿಟಿಐ ಚಿತ್ರ

ಶಿಕ್ಷಕರ ನೇಮಕಾತಿ: ಸಿಬಿಐ ತನಿಖೆಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಶಿಕ್ಷಕರ ಹಾಗೂ ಶಿಕ್ಷಕೇತರರ ನೇಮಕಾತಿ ಹಗರಣದಲ್ಲಿ ಪಶ್ಚಿಮ ಬಂಗಾಳದ ಸರ್ಕಾರಿ ಅಧಿಕಾರಿಗಳ ಪಾತ್ರದ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಕಲ್ಕತ್ತ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ. ಆದರೆ, 25 ಸಾವಿರಕ್ಕೂ ಹೆಚ್ಚಿನ ಶಿಕ್ಷಕರ ಹಾಗೂ ಶಿಕ್ಷಕೇತರ ಹುದ್ದೆಗಳ ನೇಮಕಾತಿ ರದ್ದುಪಡಿಸಿದ ಕ್ರಮಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

25,753 ಶಿಕ್ಷಕರು ಹಾಗೂ ಶಿಕ್ಷಕೇತರರ ನೇಮಕಾತಿಯನ್ನು ಅಸಿಂಧುಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಈ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ನಡೆಸಿತು. ಅರ್ಜಿಯ ವಿಚಾರಣೆಯನ್ನು ಪೀಠವು ಮೇ 6ಕ್ಕೆ ಮುಂದೂಡಲಾಗಿದೆ.

ಸರಿಸುಮಾರು 25 ಸಾವಿರ ಮಂದಿಯ ಉದ್ಯೋಗವನ್ನು ಕಿತ್ತುಕೊಳ್ಳುವುದು ಗಂಭೀರ ವಿಚಾರ ಎಂದು ಹೇಳಿರುವ ತ್ರಿಸದಸ್ಯ ಪೀಠವು, ಲಭ್ಯ ಮಾಹಿತಿ ಆಧರಿಸಿ ಸಕ್ರಮ ಹಾಗೂ ಅಕ್ರಮ ನೇಮಕಾತಿಗಳನ್ನು ಪ್ರತ್ಯೇಕಿಸಲು ಸಾಧ್ಯವೇ, ಅಕ್ರಮದ ಲಾಭ ಪಡೆದವರು ಯಾರು ಎಂಬುದನ್ನು ಗುರುತಿಸಲು ಸಾಧ್ಯವೇ ಎಂದು ಪ್ರಶ್ನಿಸಿದೆ.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿರುವ ಅರ್ಜಿಯಲ್ಲಿ ಪಶ್ಚಿಮ ಬಂಗಾಳ ಸರ್ಕಾರವು, ನೇಮಕಾತಿಯನ್ನು ಸಕಾರಣ ಇಲ್ಲದೆಯೇ ರದ್ದುಪಡಿಸಲಾಗಿದೆ ಎಂದು ದೂರಿದೆ. 'ಇಡೀ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಪರಿಣಾಮವನ್ನು ಅರ್ಥಮಾಡಿಕೊಳ್ಳುವಲ್ಲಿ ಹೈಕೋರ್ಟ್ ಸೋತಿದೆ ಎಂದು ಹೇಳಿತ್ತು.

ಯುಜಿಸಿ–ಎನ್‌ಇಟಿ ಜೂನ್ 18ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗದ(ಯುಪಿಎಸ್‌ಸಿ) ಪ್ರಿಲಿಮಿನರಿ ಪರೀಕ್ಷೆಯ ಹಿನ್ನೆಲೆಯಲ್ಲಿ ಯುಜಿಸಿ–ರಾಷ್ಟ್ರೀಯ ಅರ್ಹತಾ ಪರೀಕ್ಷೆಯನ್ನು(ಯುಜಿಸಿ–ಎನ್‌ಇಟಿ) ಜೂನ್ 18ಕ್ಕೆ ಮುಂದೂಡಲಾಗಿದೆ.

'ವಿದ್ಯಾರ್ಥಿಗಳ ಅಭಿಪ್ರಾಯವನ್ನು ಪರಿಗಣಿಸಿ, ಜೂನ್ 16ರಂದು ನಿಗದಿಯಾಗಿದ್ದ ಯುಜಿಸಿ–ಎನ್‌ಇಟಿಯನ್ನು ಜೂನ್ 18ರಂದು ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮತ್ತು ವಿಶ್ವವಿದ್ಯಾಲಯಗಳ ಅನುದಾನ ಆಯೋಗ(ಯುಜಿಸಿ) ನಿರ್ಧರಿಸಿದೆ' ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

'ಒಎಮ್‌ಆರ್ ಮಾದರಿಯಲ್ಲಿ ದೇಶದಾದ್ಯಂತ ಒಂದೇ ದಿನ ಯುಜಿಸಿ–ಎನ್‌ಇಟಿ ನಡೆಯಲಿದೆ' ಎಂದು ತಿಳಿಸಿದ್ದಾರೆ.

'ಶರಿಯತ್ ಕಾಯ್ದೆ ವ್ಯಾಪ್ತಿ ಪರಿಶೀಲನೆ'

ಮುಸಲ್ಮಾನರಿಗೆ ವೈಯಕ್ತಿಕ ಕಾನೂನು ಅನ್ವಯ ಕುರಿತ ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರಾಧಿಕಾರ ಕುರಿತಂತೆ ಇಸ್ಲಾಂ ಮೇಲೆ ನಂಬಿಕೆ ಇಲ್ಲದವರು 'ಮುಸಲ್ಮಾನರ ವೈಯಕ್ತಿಕ ಕಾನೂನು, 1937ರ ಶರಿಯತ್ ಕಾಯ್ದೆ' ಅನ್ವಯವಾಗುವುದೇ ಅಥವಾ ಈ ನೆಲದ ಜಾತ್ಯತೀತ ಕಾಯ್ದೆಗಳು ಅನ್ವಯವಾಗಲಿವೆಯೇ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರ್ಧರಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠ, ಈ ಬಗ್ಗೆ ಕೇಂದ್ರ ಸರ್ಕಾರ, ಅರ್ಜಿದಾರರಾದ ಕೇರಳದ ಮಹಿಳೆ ಸೋಫಿಯಾ ಪಿ.ಎಂ ಅವರಿಗೆ ನೋಟಿಸ್ ಜಾರಿ ಮಾಡಿತು. 'ಇದು, ಬಹುಮುಖ್ಯವಾದ ಪ್ರಶ್ನೆ' ಎಂದು ಹೇಳಿತು.

ಅರ್ಜಿದಾರರ ಪರ ವಕೀಲ ಪ್ರಶಾಂತ್ ಪದ್ಮನಾಭನ್ ಅವರ ಪ್ರಾಥಮಿಕ ವಾದ ಆಲಿಸಿದ ಪೀಠ, ಈ ಕುರಿತು ಕೋರ್ಟ್‌ಗೆ ಸಹಕರಿಸಲು ನ್ಯಾಯಾಂಗ ಅಧಿಕಾರಿ ನೇಮಿಸಬೇಕು ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ತಿಳಿಸಿತು.

'ಮುಸ್ಲಿಂ ವೈಯಕ್ತಿಕ ಕಾನೂನು ನಿಮಗೆ ಅನ್ವಯವಾಗುವುದಿಲ್ಲ ಎಂಬ ಘೋಷಣೆ ನಿಮಗೆ ಬೇಕೆ? ನಿಮಗೆ ಘೋಷಣೆ ಅಗತ್ಯವಿಲ್ಲ. ಏಕೆಂದರೆ, ಶರಿಯತ್ ಕಾಯ್ದೆ ಸೆಕ್ಷನ್ 3ರ ಪ್ರಕಾರ, ನೀವು ಸ್ವತಃ ಘೋಷಿಸಿಕೊಳ್ಳದಿದ್ದಲ್ಲಿ ಉಯಿಲು, ದತ್ತು, ಉತ್ತರಾಧಿಕಾರ ಕುರಿತಂತೆ ವೈಯಕ್ತಿಕ ಕಾಯ್ದೆ ಅನ್ವಯವಾಗದು. ನೀವು ಅಥವಾ ನಿಮ್ಮ ತಂದೆ ಈ ಘೋಷಣೆ ಮಾಡಿಕೊಳ್ಳದಿದ್ದಲ್ಲಿ ವೈಯಕ್ತಿಕ ಕಾಯ್ದೆಗೆ ವ್ಯಾಪ್ತಿಗೆ ನೀವು ಒಳಪಡುವುದಿಲ್ಲ ಎಂದು ಪೀಠವು ಅಭಿಪ್ರಾಯಪಟ್ಟಿತು.



ಆದರೆ, ಇಲ್ಲೊಂದು ಸಮಸ್ಯೆಯೂ ಇದೆ. ನೀವು ಘೋಷಣೆ ಮಾಡದೇ ಇದ್ದರೂ, ನಿಮಗೆ ಜಾತ್ಯತೀತ ಕಾಯ್ದೆಗಳು ಅನ್ವಯ ಆಗುವುದಿಲ್ಲ ಎಂಬ ಅಂಶವೂ ಊರ್ಜಿತವಾಗಲಿವೆ ಎಂದು ಪೀಠವು ಅಭಿಪ್ರಾಯಪಟ್ಟಿತು.

'ನನ್ನ ಕಕ್ಷಿದಾರರಿಗೆ ಮುಕ್ತ ಆಯ್ಕೆ ಇದ್ದು, ಅವರಿಗೆ ಇಸ್ಲಾಂನಲ್ಲಿ ನಂಬಿಕೆ ಇಲ್ಲ ಎಂಬ ಹಕ್ಕು ಉಳ್ಳವರಾದಾಗ, ಅವರಿಗೆ ವೈಯಕ್ತಿಕ ಕಾಯ್ದೆಯು ಅನ್ವಯವಾಗಬಾರದು' ಎಂದು ಅರ್ಜಿದಾರರ ಪರ ವಕೀಲರು ಪ್ರತಿಪಾದಿಸಿದರು.

ಒಂದು ಹಂತದಲ್ಲಿ ಈ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸುವ ಕುರಿತು ಸಹಮತ ವ್ಯಕ್ತಪಡಿಸದ ಪೀಠವು, 'ಎಲ್ಲಿಯವರೆಗೆ ವ್ಯಕ್ತಿ ಉಯಿಲು ಅನ್ನು ಮುಸ್ಲಿಂ ವೈಯಕ್ತಿಕ ಕಾಯ್ದೆ (ಶರಿಯತ್) ಅರ್ಜಿ ಕಾಯ್ದೆ 1937ರ ಸೆಕ್ಷನ್ 3ರ ಅನ್ವಯ ಘೋಷಿಸದಿದ್ದಲ್ಲಿ, ಈ ಕಾಯ್ದೆಯಡಿ ಅವರ ನಿರ್ವಹಣೆ ಮಾಡಲಾಗದು ಎಂದು ಹೇಳಿತು.

'ಈ ಅರ್ಜಿಯ ಮೂಲಕ ಬಹುಮುಖ್ಯ ಪ್ರಶ್ನೆಯನ್ನು ಎತ್ತಲಾಗಿರುವ ಕಾರಣ, ಈ ವಿಷಯದಲ್ಲಿ ಕೋರ್ಟ್‌ನ ಮಧ್ಯ ಪ್ರವೇಶವು ಅಗತ್ಯವಾಗಿದೆ' ಎಂದು ವಕೀಲ ಪದ್ಮನಾಭನ್ ಅವರು ಪೀಠದ ಗಮನ ಸೆಳೆದರು.

ಆಗ, ಈ ಅರ್ಜಿಯನ್ನು ಓದುವಾಗ, ಇದೆಂತಹ ಅರ್ಜಿ ಎಂದು ಭಾವಿಸಿದೆವು. ಆದರೆ, ಬಳಿಕ ಮುಖ್ಯವಾದ ಅಂಶ ಗುರುತಿಸಿದೆವು. ನಾವು ನೋಟಿಸ್ ಜಾರಿ ಮಾಡುತ್ತೇವೆ' ಎಂದು ಅರ್ಜಿದಾರರ ಪರ ವಕೀಲರಿಗೆ ಪೀಠ ಪ್ರತಿಕ್ರಿಯಿಸಿತು.

ಅರ್ಜಿದಾರರು ಕೇರಳದ ಮಾಜಿ ಮುಸಲ್ಮಾನರ ಸಂಘದ ಪ್ರಧಾನ ಕಾರ್ಯದರ್ಶಿ ಆಗಿದ್ದಾರೆ.

ಭಾರತದಲ್ಲಿ ಜನಿಸುವ ಮುಸಲ್ಮಾನರು ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅರ್ಜಿ ಕಾಯ್ದೆ 1937ರ ವ್ಯಾಪ್ತಿಗೆ ಬರುತ್ತಾರೆ. ಶರಿಯತ್ ಕಾಯ್ದೆ ಪ್ರಕಾರ, ಇಸ್ಲಾಂ ಮೇಲೆ ನಂಬಿಕೆ ಕಳೆದುಕೊಳ್ಳುವ ವ್ಯಕ್ತಿ ಸಮುದಾಯದಿಂದ ಹೊರಗುಳಿಯುತ್ತಾರೆ. ನಂತರ ಮಹಿಳೆ ತಂದೆ–ತಾಯಿ ಆಸ್ತಿಯ ಮೇಲೆ ಯಾವುದೇ ಪಿತ್ರಾರ್ಜಿತ ಹಕ್ಕು ಹೊಂದಿರುವುದಿಲ್ಲ. ಈ ಪ್ರಕರಣದಲ್ಲಿ ಅರ್ಜಿದಾರರು, ತಾನು ಅಧಿಕೃತವಾಗಿ ಧರ್ಮದಿಂದ ಹೊರಗುಳಿದರೆ ತನ್ನ ಏಕಮಾತ್ರ ಪುತ್ರಿಗೆ ವೈಯಕ್ತಿಕ ಕಾನೂನು ಅನ್ವಯವಾಗಬಹುದೇ ಎಂಬ ಆತಂಕವನ್ನು ಹೊಂದಿದ್ದರು.

ಸಂದೇಶ್‌ಖಾಲಿ: ಸುಪ್ರೀಂ ವಿಚಾರಣೆ

ನವದೆಹಲಿ (ಪಿಟಿಐ): ಸಂದೇಶ್‌ಖಾಲಿ ಪ್ರಕರಣದಲ್ಲಿ ಕೆಲವು ವ್ಯಕ್ತಿಗಳ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ರಾಜ್ಯ ಸರ್ಕಾರವು ಏಕೆ ಅರ್ಜಿ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಪ್ರಶ್ನಿಸಿದೆ.

ಸಂದೇಶ್‌ಖಾಲಿಯಲ್ಲಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆದಿದೆ ಎನ್ನಲಾದ ದೌರ್ಜನ್ಯ ಹಾಗೂ ಜಮೀನು ಕಬಳಿಕೆ ಪ್ರಕರಣದ ಕುರಿತು ಸಿಬಿಐ ತನಿಖೆಗೆ ಕಲ್ಕತ್ತ ಹೈಕೋರ್ಟ್ ಏಪ್ರಿಲ್ 10ರಂದು ಆದೇಶಿಸಿದೆ. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಅರ್ಜಿಗೆ ಪ್ರತಿಯಾಗಿ ಸುಪ್ರೀಂ ಕೋರ್ಟ್ ಈ ಬಗೆಯಲ್ಲಿ ಪ್ರಶ್ನಿಸಿದೆ.

'ಕೆಲವು ಖಾಸಗಿ ವ್ಯಕ್ತಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ರಾಜ್ಯ ಏಕೆ ಅರ್ಜಿ ಸಲ್ಲಿಸಬೇಕು' ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ವಿಭಾಗೀಯ ಪೀಠ ಪ್ರಶ್ನಿಸಿದೆ.

ಹೈಕೋರ್ಟ್ ಆಡಿದ ಕೆಲವು ಮಾತುಗಳು ಒಪ್ಪಿಗೆ ಆಗುತ್ತಿಲ್ಲ ಎಂದು ಪಶ್ಚಿಮ ಬಂಗಾಳ ಸರ್ಕಾರದ ಪರ ವಕೀಲರು ಪೀಠಕ್ಕೆ ತಿಳಿಸಿದರು. 'ರಾಜ್ಯ ಸರ್ಕಾರದ ಬಗ್ಗೆ ಕೋರ್ಟ್ ಕೆಲವು ಮಾತುಗಳನ್ನು ಆಡಿದೆ. ಆ ಮಾತುಗಳು ನ್ಯಾಯಸಮ್ಮತವಾಗಿಲ್ಲ. ಏಕೆಂದರೆ, ಸರ್ಕಾರವು ಎಲ್ಲ ಬಗೆಯ ಕ್ರಮಗಳನ್ನು ಕೈಗೊಂಡಿದೆ' ಎಂದು ವಕೀಲರು ಉತ್ತರಿಸಿದರು.

ಕೆಲವು ಮಾತುಗಳಿಂದ ನೋವಾಗಿದ್ದಲ್ಲಿ, ಆ ಮಾತುಗಳನ್ನು ಆದೇಶದಿಂದ ತೆಗೆದುಹಾಕುವಂತೆ ಕೋರಿ ಹೈಕೋರ್ಟ್‌ಗೇ ಮನವಿ ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿತು. ಅರ್ಜಿಯ ವಿಚಾರಣೆಯನ್ನು ಮುಂದೂಡಲಾಗಿದೆ.

ಹೈಕೋರ್ಟ್ ಆದೇಶವು ರಾಜ್ಯದ ಪೊಲೀಸ್ ಪಡೆ ಸೇರಿದಂತೆ ಇಡೀ ವ್ಯವಸ್ಥೆಯ ನೈತಿಕ ಸ್ಥೈರ್ಯವನ್ನು ಕುಂದಿಸಿದೆ ಎಂದು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಿದೆ. ಸಂದೇಶ್‌ಖಾಲಿ ಕುರಿತ ಸಿಬಿಐ ತನಿಖೆಯನ್ನು ತಾನು ಮೇಲ್ವಿಚಾರಣೆ ನಡೆಸುವುದಾಗಿ ಹೈಕೋರ್ಟ್ ಹೇಳಿದೆ.

'ಲಕ್ಷ್ಮಣ ರೇಖೆ ದಾಟಿರುವ ರಾಮದೇವ'

ನವದೆಹಲಿ (ಪಿಟಿಐ): ಕೋವಿಡ್‌–19 ಕಾಯಿಲೆಯನ್ನು ಶಮನಗೊಳಿಸಲು ತಮ್ಮಿಂದ ಸಾಧ್ಯ ಎಂದು ಹೇಳಿ, ಆಧುನಿಕ ವಿಜ್ಞಾನವು 'ಮೂರ್ಖತನದ ಮತ್ತು ದಿವಾಳಿಯೆದ್ದಿರುವ ವಿಜ್ಞಾನ' ಎನ್ನುವ ಮೂಲಕ ಯೋಗ ಗುರು ಬಾಬಾ ರಾಮದೇವ ಅವರು ಲಕ್ಷ್ಮಣ ರೇಖೆಯನ್ನು ದಾಟಿದ್ದರು ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಅಧ್ಯಕ್ಷ ಡಾ.ಆರ್.ವಿ. ಅಶೋಕನ್ ಹೇಳಿದ್ದಾರೆ.

ತಪ್ಪುದಾರಿಗೆ ಎಳೆಯುವ ಜಾಹೀರಾತು ನೀಡಿದ ಪ್ರಕರಣದ ಬೆಳವಣಿಗೆಗಳ ನಂತರ ಐಐಎಂ ಹೇಳಿಕೆ ನೀಡುತ್ತಿರುವುದು ಇದೇ ಮೊದಲು. 'ಸುಪ್ರೀಂ ಕೋರ್ಟ್, ಐಎಂಎ ಬಗ್ಗೆ ಟೀಕೆ ಮಾಡಿರುವುದು ದುರದೃಷ್ಟಕರ' ಎಂದೂ ಅವರು ಹೇಳಿದ್ದಾರೆ.

14 ಔಷಧ ತಯಾರಿಕಾ ಪರವಾನಗಿ ಅಮಾನತು

ನವದೆಹಲಿ (ರಾಯಿಟರ್ಸ್): ಯೋಗ ಗುರು ಬಾಬಾ ರಾಮದೇವ ಅವರಿಗೆ ಸೇರಿದ ಔಷಧ ಕಂಪನಿಗಳು ತಯಾರಿಸುವ 14 ಬಗೆಯ ಉತ್ಪನ್ನಗಳ ತಯಾರಿಕೆಗೆ ನೀಡಿರುವ ಪರವಾನಗಿಯನ್ನು ಉತ್ತರಾಖಂಡ ಸರ್ಕಾರವು ಅಮಾನತಿನಲ್ಲಿ ಇರಿಸಿದೆ. ಔಷಧಗಳ ಸಾಮರ್ಥ್ಯದ ಬಗ್ಗೆ ತಪ್ಪುದಾರಿಗೆ ಎಳೆಯುವ ಜಾಹೀರಾತುಗಳನ್ನು ಮತ್ತೆ ಮತ್ತೆ ಪ್ರಕಟಿಸಿದ್ದಕ್ಕಾಗಿ ಈ ರೀತಿ ಮಾಡಲಾಗಿದೆ.

ಈ ಆದೇಶವು ರಾಮದೇವ ಅವರಿಗೆ ಆಗಿರುವ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ. ರಾಮದೇವ ಅವರು ಈಚಿನ ದಿನಗಳಲ್ಲಿ ಸುಪ್ರೀಂ ಕೋರ್ಟ್‌ನ ಕೋಪಕ್ಕೂ ತುತ್ತಾಗಿದ್ದಾರೆ.

ಉತ್ತರಾಖಂಡ ಸರ್ಕಾರವು ಏಪ್ರಿಲ್ 15ರಂದು ಈ ಅಮಾನತು ಆದೇಶ ಹೊರಡಿಸಿದೆ. ಅಸ್ತಮಾ, ಶ್ವಾಸನಾಳಗಳ ಒಳಪೊರೆಯ ಉರಿಯೂತ (ಬ್ರಾಂಕೈಟಿಸ್) ಮತ್ತು ಮಧುಮೇಹ ಔಷಧಿಗಳ ತಯಾರಿಕಾ ಪರವಾನಗಿಯನ್ನು ಅಮಾನತು ಮಾಡಲಾಗಿದೆ. ಈ ಕುರಿತು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಲು ರಾಮದೇವ ಅವರ ವಕ್ತಾರರು ನಿರಾಕರಿಸಿದ್ದಾರೆ.

'ಸುದೀರ್ಘ ಕಾಲ ಕರ್ತವ್ಯವಿಮುಖಿ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧ'

ನವದೆಹಲಿ (ಪಿಟಿಐ): ಯಾವುದೇ ಮುಖ್ಯಮಂತ್ರಿ ಸುದೀರ್ಘ ಕಾಲ ಕರ್ತವ್ಯದಿಂದ ಗೈರುಹಾಜರಾಗುವುದು, ರಾಷ್ಟ್ರೀಯ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದುದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

'ಬಂಧನದ ನಂತರವೂ ದೆಹಲಿ ಮುಖ್ಯಮಂತ್ರಿಯಾಗಿ ಮುಂದುವರಿಯುವ ಅರವಿಂದ ಕೇಜ್ರಿವಾಲ್ ಅವರ ನಿರ್ಧಾರವು ಅವರ ವೈಯಕ್ತಿಕವಾದುದು' ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್, ನ್ಯಾಯಮೂರ್ತಿ ಮನ್‌ಮೀತ್ ಪಿ.ಎಸ್.ಅರೋರಾ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.

'ಮುಖ್ಯಮಂತ್ರಿ ಸ್ಥಾನ ಆಲಂಕಾರಿಕವಾದುದಲ್ಲ. ಪ್ರಾಕೃತಿಕ ವಿಕೋಪಗಳು ಸೇರಿದಂತೆ ಯಾವುದೇ ಪರಿಸ್ಥಿತಿಗೆ ಸ್ಪಂದಿಸಲು ಆಗುವಂತೆ ದಿನದ 24 ಗಂಟೆ ಸಾರ್ವಜನಿಕ ಸಂಪರ್ಕಕ್ಕೆ ಲಭ್ಯರಿರಬೇಕಾದ ಹುದ್ದೆ. ಇಂಥ ಸ್ಥಾನವನ್ನು ಹೊಂದಿರುವ ಯಾವುದೇ ವ್ಯಕ್ತಿ ಸುದೀರ್ಘ ಕಾಲ ಕರ್ತವ್ಯದಿಂದ ದೂರ ಇರುವುದು ರಾಷ್ಟ್ರೀಯ ಹಿತಾಸಕ್ತಿ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದುದು ಎಂದು ಹೇಳಿತು.

ಕೇಜ್ರಿವಾಲ್ ಗೈರು ಪ್ರಶ್ನಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ) ಹಲವು ಸಮನ್ಸ್ ಜಾರಿಗೊಳಿಸಿದ್ದರೂ ವಿಚಾರಣೆಗೆ ಹಾಜರಾಗದ ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ನಡೆಯನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿತು.

'ಇ.ಡಿ ತಮ್ಮ ಹೇಳಿಕೆಯನ್ನು ದಾಖಲಿಸಿಲ್ಲ ಎಂಬ ಆಧಾರದಲ್ಲಿ ಈಗ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧನವನ್ನು ತಾವು ಪ್ರಶ್ನಿಸಬಹುದೇ' ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠವು ಕೇಜ್ರಿವಾಲ್ ಪರ ವಕೀಲರಿಗೆ ಪ್ರಶ್ನಿಸಿತು.

ಕೆಳಹಂತದ ಕೋರ್ಟ್‌ನಲ್ಲಿ ಏಕೆ ಜಾಮೀನು ಅರ್ಜಿ ಸಲ್ಲಿಸಿಲ್ಲ? ತಮ್ಮ ಹೇಳಿಕೆ ದಾಖಲಿಸಿಲ್ಲ ಎಂದು ಒಂದು ಕಡೆ ಹೇಳುತ್ತೀರಿ. ಇನ್ನೊಂದೆಡೆ ನೀವು ಹಲವು ಸಮನ್ಸ್ ಜಾರಿಗೊಳಿಸಿದರೂ, ಇ.ಡಿ ಎದುರು ಹಾಜರಾಗುವುದಿಲ್ಲ. ಇದು ವಿರೋಧಾಭಾಸವಲ್ಲವೇ ಎಂದು ಪೀಠವು ಪ್ರಶ್ನಿಸಿತು.

ಮಾ.21ರಂದು ಕೇಜ್ರಿವಾಲ್ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿದ್ದು, ಸದ್ಯ ತಿಹಾರ್ ಜೈಲಿನಲ್ಲಿದ್ದಾರೆ.

'ಸಿ.ಎಂ ಆಗಿ ಕೇಜ್ರಿವಾಲ್ ಮುಂದುವರಿಕೆ'

ನವದೆಹಲಿ (ಪಿಟಿಐ): ಅರವಿಂದ ಕೇಜ್ರಿವಾಲ್ ಅವರೇ ದೆಹಲಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಎಎಪಿ ಸೋಮವಾರ ಹೇಳಿದೆ. ಮುಖ್ಯಮಂತ್ರಿ ಸ್ಥಾನದಲ್ಲಿರುವ ಯಾವೊಬ್ಬ ವ್ಯಕ್ತಿಯೂ ಅನಿರ್ದಿಷ್ಟ ಕಾಲದವರೆಗೆ ಅಜ್ಞಾತವಾಗಿ ಉಳಿದ ಉದಾಹರಣೆ ಇಲ್ಲ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟ ಬಳಿಕವೂ ಎಎಪಿ ಮುಖ್ಯಮಂತ್ರಿ ವಿಚಾರದಲ್ಲಿ ತನ್ನ ನಿಲುವನ್ನು ಬದಲಿಸಿಕೊಂಡಿಲ್ಲ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಅವರು, 'ಮುಖ್ಯಮಂತ್ರಿ ಸ್ಥಾನದಿಂದ ಕೇಜ್ರಿವಾಲ್ ಅವರನ್ನು ಕೆಳಗಿಳಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಮೂರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಸ್ವತಃ ಹೈಕೋರ್ಟ್ ತಿರಸ್ಕರಿಸಿದೆ. ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಆಗಿದ್ದರು. ಅವರೇ ಆ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ' ಎಂದು ಹೇಳಿದರು.

ಜನವರಿ ಮೊದಲ ವಾರ ಶೂನ್ಯ ಡಿಗ್ರಿ ಸೆಲ್ಸಿಯಸ್ ಇತ್ತು • ಪರಿಸರವಾದಿಗಳ ಆತಂಕ

ಊಟಿಯ ಉಷ್ಣಾಂಶ 29 ಡಿಗ್ರಿ ಸೆಲ್ಸಿಯಸ್

ಪ್ರಜಾವಾಣಿ ವಾರ್ತೆ

ಚೆನ್ನೈ: ತಂಪು ವಾತಾವರಣಕ್ಕೆ ಹೆಸರಾಗಿದ್ದ ತಮಿಳುನಾಡಿನ ಉದಕಮಂಡಲ ಅಥವಾ ಊಟಿಯಲ್ಲಿ ಭಾನುವಾರ ಮತ್ತು ಸೋಮವಾರ ಗರಿಷ್ಠ ಉಷ್ಣಾಂಶ 29 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ ಬರುವ ಈ ಹೆಸರಾಂತ ಪ್ರವಾಸಿ ತಾಣದಲ್ಲಿ ನಾಲ್ಕು ತಿಂಗಳ ಹಿಂದಷ್ಟೇ ಬಹುತೇಕ ಶೂನ್ಯ ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ತೀವ್ರತರನಾದ ಚಳಿಯ ವಾತಾವರಣ ಆವರಿಸಿತ್ತು.

ಈ ಚಳಿಗಾಲ ಮತ್ತು ಬೇಸಿಗೆ ಅವಧಿಯಲ್ಲಿ ದಾಖಲಾಗಿರುವ ಭಿನ್ನ ತೀವ್ರಗತಿಯ ಉಷ್ಣಾಂಶವು ಈಗ ಗಂಭೀರ ಚಿಂತನೆಗೆ ಆಸ್ಪದವಾಗಿದೆ.

ಇದು, ತಾಪಮಾನ ಬದಲಾವಣೆಯ ಪರಿಣಾಮ ಎಂದು ಹೇಳಿರುವ ಪರಿಸರ ಕಾರ್ಯಕರ್ತರು , ಗಿರಿಧಾಮವನ್ನು ರಕ್ಷಿಸಲು ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಸಾಮಾನ್ಯವಾಗಿ ಏಪ್ರಿಲ್–ಜೂನ್ ಅವಧಿಯಲ್ಲಿ ಇಲ್ಲಿಗೆ ಗರಿಷ್ಠ ಸಂಖ್ಯೆಯ ಪ್ರವಾಸಿಗರು ಬರುತ್ತಾರೆ.

ಭಾನುವಾರ ಮತ್ತು ಸೋಮವಾರ ಇಲ್ಲಿ ದಾಖಲಾಗಿರುವ ಉಷ್ಣಾಂಶ, ಸಾಮಾನ್ಯವಾಗಿ ದಾಖಲಾಗುವ ಉಷ್ಣಾಂಶಕ್ಕಿಂತಲೂ 5.4 ಡಿಗ್ರಿ ಸೆಲ್ಸಿಯಸ್ ಹೆಚ್ಚಿತ್ತು. ಇದು, ಗಿರಿಧಾಮದಲ್ಲಿ 1951ರಲ್ಲಿ ಹವಾಮಾನ ಕೇಂದ್ರ ಸ್ಥಾಪನೆಯಾದ ಬಳಿಕ, ದಾಖಲಾಗಿರುವ ಗರಿಷ್ಠ ಉಷ್ಣಾಂಶವೂ ಆಗಿದೆ.

ಗರಿಷ್ಠ ಪ್ರಮಾಣದ ಉಷ್ಣಾಂಶವು ಮುಂದಿನ ಕೆಲವು ದಿನ ಮುಂದುವರಿಯಬಹುದು ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ನೆಚ್ಚರಿಕೆ ನೀಡಿದೆ. ತಮಿಳುನಾಡಿನಲ್ಲಿ ಮೇ 3ರವರೆಗೂ ಉಷ್ಣಹವೆ ಬಾಧಿಸಲಿದೆ ಎಂದು ಇಲಾಖೆಯು ಎಚ್ಚರಿಕೆ ನೀಡಿದೆ.

ಊಟಿ ಒಳಗೊಂಡಿರುವ ನೀಲಗಿರಿ ಜಿಲ್ಲೆಯು ಕರ್ನಾಟಕ, ತಮಿಳುನಾಡು, ಕೇರಳದದ ಜನರಿಗೆ ಕೇವಲ ಪ್ರವಾಸಿ ಕೇಂದ್ರವಷ್ಟೇ ಅಲ್ಲ. ಸರ್ವಋತುವಿನಲ್ಲಿಯೂ ಹರಿಯುವ ಹಲವು ತೊರೆಗಳ ಉಗಮ ಸ್ಥಾನವೂ ಆಗಿದೆ.

ಅಲ್ಲದೆ, ಹಲವು ಗಿಡಮೂಲಿಕೆಗಳು, ಸಸ್ಯ ತಳಿಗಳ ನೆಲೆಯಾಗಿದೆ. ಕೇರಳದ ವಯನಾಡ್ ಗಡಿಗೆ ಹೊಂದಿಕೊಂಡಿರುವ ಈ ಜಿಲ್ಲೆಯಲ್ಲಿ ಜಲವಿದ್ಯುತ್ ಘಟಕವು ಇದೆ. ಈ ವ್ಯಾಪ್ತಿಯಲ್ಲಿ ಹುಲಿ ಸೇರಿ ವನ್ಯಜೀವಿಗಳು ಇದ್ದು, ಮಾನವ–ಪ್ರಾಣಿ ಸಂಘರ್ಷಕ್ಕೂ ಕಾರಣವಾಗಿದೆ.

ಹವಾಮಾನ ಇಲಾಖೆ ಪ್ರಕಾರ, ಹಿಂದೆ 1986ರ ಏ. 29ರಂದು ಊಟಿಯಲ್ಲಿ ಗರಿಷ್ಠ ತಾಪಮಾನ 28.5 ಡಿಗ್ರಿ ಸೆಲ್ಸಿಯಸ್, ದಾಖಲಾಗಿತ್ತು. ಈ ವರ್ಷದ ಜನವರಿ ಮೊದಲ ವಾರ 1 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.



ಪ್ರವಾಸಿ ತಾಣ ಊಟಿ –ಸಂಗ್ರಹ ಚಿತ್ರ

20 ಸಾವಿರ ವಾಹನಗಳ ಪ್ರವೇಶ ಮದ್ರಾಸ್ ಹೈಕೋರ್ಟ್ ಕಳವಳ

ಚೆನ್ನೈ: ಊಟಿ ಮತ್ತು ಕೊಡೈಕನಾಲ್‌ಗೆ ಗಿರಿಧಾಮಗಳಿಗೆ ಸಂಪರ್ಕ ಕಲ್ಪಿಸುವ ಎಂಟು ಚೆಕ್ ಪಾಯಿಂಟ್‌ಗಳ ಮೂಲಕ 11,500 ಕಾರುಗಳು ಸೇರಿದಂತೆ ಸುಮಾರು 20 ಸಾವಿರ ವಾಹನಗಳು ಪ್ರವೇಶಿಸುತ್ತವೆ ಎಂಬ ಬಗ್ಗೆ ಮದ್ರಾಸ್ ಹೈಕೋರ್ಟ್ ಸೋಮವಾರ ಕಳವಳ ವ್ಯಕ್ತಪಡಿಸಿದೆ.

'ಇನ್ನು ಮುಂದೆ ವಾಹನಗಳ ಸಮರ್ಪಕ ಅಂಕಿ ಅಂಶ ಸಂಗ್ರಹಿಸಲು ಆಗುವಂತೆ ಗಿರಿಧಾಮಗಳಿಗೆ ಪ್ರವೇಶಿಸುವ ಎಲ್ಲ ವಾಹನಗಳಿಗೆ ಇ-ಪಾಸ್ ಪಡೆಯುವುದು ಅಗತ್ಯ ಎಂದು ನ್ಯಾಯಮೂರ್ತಿಗಳಾದ ಎನ್.ಸತೀಶ್ ಕುಮಾರ್, ಡಿ. ಭರತ ಚಕ್ರವರ್ತಿ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.



ಲಖನೌದ ಏಕನಾ ಕ್ರೀಡಾಂಗಣದಲ್ಲಿ ಸೋಮವಾರ ಅಭ್ಯಾಸದ ವೇಳೆ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್ ಜತೆ ಮುಂಬೈ ಇಂಡಿಯನ್ಸ್‌ನ ಸೂರ್ಯಕುಮಾರ್ ಯಾದವ್, ರೋಹಿತ್ ಶರ್ಮಾ ಖುಷಿಯ ಕ್ಷಣ –ಪಿಟಿಐ ಚಿತ್ರ

ಕೋಲ್ಕತ್ತ ನೈಟ್ ರೈಡರ್ಸ್‌ಗೆ ಆರನೇ ಜಯ • ಡೆಲ್ಲಿ ಕ್ಯಾಪಿಟಲ್ಸ್‌ಗೆ ಏಳು ವಿಕೆಟ್‌ಗಳ ಸೋಲು

ವರುಣ್ ಮೋಡಿ, ಸಾಲ್ಟ್ ಅಬ್ಬರ

ಕೋಲ್ಕತ್ತ (ಪಿಟಿಐ): ಬೌಲರ್‌ಗಳ ಬಿಗು ದಾಳಿಯ ನಂತರ ಆರಂಭ ಆಟಗಾರ ಫಿಲ್ ಸಾಲ್ಟ್ (68; 33ಎ) ಅವರ ಆಕ್ರಮಣಕಾರಿ ಅರ್ಧಶತಕದ ನೆರವಿನಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿ ಪ್ಲೇ ಆಫ್ ಹಾದಿಯತ್ತ ಹೆಜ್ಜೆಯಿಟ್ಟಿತು.

ಇದು ಕೋಲ್ಕತ್ತ ತಂಡಕ್ಕೆ ಒಂಬತ್ತು ಪಂದ್ಯಗಳಿಂದ ಆರನೇ ಗೆಲುವಾಗಿದ್ದು, ಒಟ್ಟು 12 ಅಂಕ ಸಂಪಾದಿಸಿದೆ. ಡೆಲ್ಲಿ ತಂಡವು 11 ಪಂದ್ಯಗಳಿಂದ 10 ಪಾಯಿಂಟ್ಸ್ ಸಂಗ್ರಹಿಸಿದ್ದು, ಪ್ಲೇ ಆಫ್ ಹಾದಿ ಕಠಿಣವಾಗಿದೆ.

ಈಡನ್ ಗಾರ್ಡನ್‌ನಲ್ಲಿ ಟಾಸ್ ಗೆದ್ದು ಬ್ಯಾಟ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ 9 ವಿಕೆಟ್‌ಗೆ 153 ರನ್ ಗಳಿಸಲಷ್ಟೇ ಶಕ್ತವಾಯಿತು. ಇದಕ್ಕೆ ಉತ್ತರವಾಗಿ ಕೋಲ್ಕತ್ತ ತಂಡವು ಇನ್ನೂ 21 ಎಸೆತ ಬಾಕಿ ಇರುವಂತೆ 3 ವಿಕೆಟ್‌ಗಳಿಗೆ 157 ರನ್ ಗಳಿಸಿತು.


ಸಾಲ್ಟ್ ಮೊದಲ ವಿಕೆಟ್‌ಗೆ ಸುನಿಲ್ ನಾರಾಯಣ್ ಜತೆ 6.1 ಓವರ್‌ಗಳಲ್ಲೇ 79 ರನ್ ಸೇರಿಸಿ ಭದ್ರ ಬುನಾದಿ ಹಾಕಿದರು. ಇದರಲ್ಲಿ ಸುನಿಲ್ ಪಾಲು 15 ರನ್. ಮಿಂಚಿನ ಬ್ಯಾಟಿಂಗ್ ನಡೆಸಿದ ಸಾಲ್ಟ್ 7 ಬೌಂಡರಿ ಮತ್ತು ಐದು ಸಿಕ್ಸರ್ ಸಿಡಿಸಿದರು. ತಂಡವು ನೂರರ ಸಮೀಪ ಸಾಗುತ್ತಿದ್ದಾಗ ಸಾಲ್ಟ್ ಅವರು ಅಕ್ಷರ್ ಪಟೇಲ್ ಅವರಿಗೆ ವಿಕೆಟ್ ಒಪ್ಪಿಸಿದರು. ಆದರೆ, ಈ ಪಂದ್ಯದಲ್ಲೂ ರಿಂಕು ಸಿಂಗ್ (11) ನಿರಾಸೆ ಮೂಡಿಸಿದರು.

ನಂತರ ನಾಯಕ ಶ್ರೇಯಸ್ ಅಯ್ಯರ್ (ಔಟಾಗದೇ 33) ಮತ್ತು ವೆಂಕಟೇಶ್ | ಅಯ್ಯರ್ (ಔಟಾಗದೇ 26) ಗೆಲುವಿನ ಔಪಚಾರಿಕತೆಯನ್ನು ಪೂರೈಸಿದರು. ಅವರು ನಾಲ್ಕನೇ ವಿಕೆಟ್‌ಗೆ ಮುರಿಯದ 57 ರನ್ (43 ಎ) ಸೇರಿಸಿದರು. ಇದೇ ವೇಳೆ ಶ್ರೇಯಸ್ ಐಪಿಎಲ್‌ನಲ್ಲಿ 3 ಸಾವಿರ ರನ್ ಗಡಿ ದಾಟಿದರು. ಅವರು 110 ಇನ್ನಿಂಗ್ಸ್‌ಗಳಲ್ಲಿ ಈ ಸಾಧನೆ ಮಾಡಿದರು.



ಫಿಲ್ ಸಾಲ್ಟ್ ರನ್ 68 ಎಸೆತ 33 ಬೌಂಡರಿ 7 ಸಿಕ್ಸರ್ 5

ವರುಣ್ ಚಕ್ರವರ್ತಿ 4–0–16–3



ಎಎಫ್‌ಪಿ/ ಪಿಟಿಐ ಚಿತ್ರ

ಇದಕ್ಕೂ ಮೊದಲು ಕೋಲ್ಕತ್ತ ತಂಡದ ವೇಗದ ಬೌಲರ್‌ಗಳಾದ ವೈಭವ್ ಆರೋರಾ (29ಕ್ಕೆ2) ಮತ್ತು ಹರ್ಷಿತ್ ರಾಣಾ (28ಕ್ಕೆ 2) ಅವರು ಆರಂಭದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಲಗಾಮು ಹಾಕಿದರು. ಮಧ್ಯಮ ಹಂತದ ಓವರುಗಳಲ್ಲಿ ವರುಣ್ ಚಕ್ರವರ್ತಿ (16ಕ್ಕೆ3) ಎದುರಾಳಿಗಳು ಚೇತರಿಸಿಕೊಳ್ಳದಂತೆ ನೋಡಿಕೊಂಡರು. ಆರೋರಾ ಪವರ್ ಪ್ಲೇ ಅವಧಿಯೊಳಗೆ ಎರಡು ವಿಕೆಟ್ ಪಡೆದರು. 9ನೇ ಓವರ್‌ನಲ್ಲಿ ದಾಳಿಗಿಳಿದ ಚಕ್ರವರ್ತಿ ಸತತ ನಾಲ್ಕು ಓವರ್‌ಗಳ ಸ್ಪಿನ್ ದಾಳಿಯಲ್ಲಿ ಪ್ರಮುಖ ಬ್ಯಾಟರ್‌ಗಳಾದ ರಿಷಭ್ ಪಂತ್ (27, 20ಎ), ಟ್ರಿಸ್ಟನ್ ಸ್ಟಬ್ಸ್ ಮತ್ತು ಇಂಪ್ಯಾಕ್ಟ್ ಸಬ್ ಆದ ಕುಮಾರ್ ಕುಶಾಗ್ರ ಅವರ ವಿಕೆಟ್‌ಗಳನ್ನು ಪಡೆದು ಪೆಟ್ಟು ಕೊಟ್ಟರು. ಆದರೆ, ಪ್ರಮುಖ ಬೌಲರ್ ಮಿಚೆಲ್ ಸ್ಟಾರ್ಕ್ ಮತ್ತೊಮ್ಮೆ ದುಬಾರಿ ಎನಿಸಿ ಮೂರು ಓವರುಗಳಲ್ಲಿ 43 ರನ್ ತೆತ್ತರು. ಒತ್ತಡದಲ್ಲಿ ದೆಹಲಿಯ ಬ್ಯಾಟರ್‌ಗಳು ಆಕ್ರಮಣಕಾರಿ ಆಟವಾಡಲು ವಿಫಲರಾದರು.

ದೆಹಲಿ ಕ್ಯಾಪಿಟಲ್ಸ್ ಪರ ಕುಲದೀಪ್ ಯಾದವ್ ಕೊನೆಯಲ್ಲಿ ಸ್ವಲ್ಪ ಪ್ರತಿರೋಧ ತೋರಿದರು. ಅವರೇ ಅತಿ ಹೆಚ್ಚು ರನ್ (ಔಟಾಗದೇ 35, 26ಎ) ಗಳಿಸಿದರಲ್ಲದೇ, ತಂಡ 150ರ ಗಡಿ ದಾಟಲು ನೆರವಾದರು. ಒಂದು ಹಂತದಲ್ಲಿ 15 ಓವರುಗಳ ಒಳಗೆ 115 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿದ್ದ ಡೆಲ್ಲಿ ತಂಡವನ್ನು ಆಲೌಟ್ ಮಾಡಲಾಗದ ನಿರಾಸೆ ಮಾತ್ರ ಕೋಲ್ಕತ್ತವನ್ನು ಕಾಡಿತು. ಕುಲದೀಪ್ ತಮ್ಮ ಮಾಜಿ ಫ್ರಾಂಚೈಸಿ ತಂಡವನ್ನು ಕಾಡಿದರು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್: 9ಕ್ಕೆ153 (20 ಓವರುಗಳಲ್ಲಿ)
ಪೃಥ್ವಿ ಶಾ ಸಿ ಸಾಲ್ಟ್ ಬಿ ಆರೋರಾ 13 (7ಎ, 4x3)
ಮೆಕ್‌ಗುರ್ಕ್ ಸಿ ವೆಂಕಟೇಶ್ ಬಿ ಸ್ಟಾರ್ಕ್ 12 (7ಎ, 4x1, 6x1)
ಅಭಿಷೇಕ್ ಬಿ ಹರ್ಷಿತ್ 18 (15ಎ, 4x2, 6x1)
ಹೋಪ್ ಬಿ ಆರೋರಾ 6 (3ಎ, 6x1)
ಪಂತ್ ಸಿ ಶ್ರೇಯಸ್ ಬಿ ವರುಣ್ 27 (20ಎ, 4x2, 6x1)
ಅಕ್ಷರ್ ಬಿ ಸುನಿಲ್ 15 (21ಎ, 4x2)
ಸ್ಟಬ್ಸ್ ಸಿ ಸಾಲ್ಟ್ ಬಿ ವರುಣ್ 4 (7ಎ)
ಕುಶಾಗ್ರ ಸಿ ಸಾಲ್ಟ್ ಬಿ ವರುಣ್ 1 (3ಎ)
ಕುಲದೀಪ್ ಔಟಾಗದೇ 35 (26ಎ, 4x5, 6x1)
ರಾಸಿಕ್ ಸಿ ಶ್ರೇಯಸ್ ಬಿ ಹರ್ಷಿತ್ 8 (10ಎ, 4x1)
ವಿಲಿಯಮ್ಸ್ ಔಟಾಗದೇ 1 (2ಎ)
ಇತರೆ: 13 (ಲೆಗ್‌ಬೈ 3, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1–17 (ಪೃಥ್ವಿ ಶಾ, 1.3), 2–30 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 2.5), 3–37 (ಶಾಯ್ ಹೋಪ್, 3.3), 4–68 (ಅಭಿಷೇಕ್ ಪೊರೆಲ್, 6.4), 5–93 (ರಿಷಭ್ ಪಂತ್, 10.1), 6–99 (ಟ್ರಿಸ್ಟನ್ ಸ್ಟಬ್ಸ್, 12.1), 7–101 (ಅಕ್ಷರ್ ಪಟೇಲ್, 13.3), 8–111 (ಕುಮಾರ್ ಕುಶಾಗ್ರ, 14.3), 9–140 (ರಾಸಿಖ್ ಸಲಾಂ, 18.2).
ಬೌಲಿಂಗ್: ಮಿಚೆಲ್ ಸ್ಟಾರ್ಕ್ 3–0–43–1; ವೈಭವ್ ಆರೋರಾ 4–0–29–2; ಹರ್ಷಿತ್ ರಾಣಾ 4–0–28–2; ಸುನೀಲ್ ನಾರಾಯಣ್ 4–0–24–1; ವರುಣ್ ಚಕ್ರವರ್ತಿ 4–0–16–3; ಆಂಡ್ರೆ ರಸೆಲ್ 1–0–10–0.
ಕೋಲ್ಕತ್ತ ನೈಟ್ ರೈಡರ್ಸ್ 3ಕ್ಕೆ 157 (16.3 ಓವರುಗಳಲ್ಲಿ)
ಸಾಲ್ಟ್ ಬಿ ಅಕ್ಷರ್ 68 (33ಎ, 4x7, 6x5)
ಸುನೀಲ್ ಸಿ ಮೆಕ್‌ಗುರ್ಕ್ ಬಿ ಅಕ್ಷರ್ 15 (10ಎ, 4x3)
ರಿಂಕು ಸಿ ಕುಲದೀಪ್ ಬಿ ವಿಲಿಯಮ್ಸ್ 11 (11ಎ, 4x1)
ಶ್ರೇಯಸ್ ಔಟಾಗದೇ 33 (23ಎ, 4x3, 6x1)
ವೆಂಕಟೇಶ್ ಔಟಾಗದೇ 26 (23ಎ, 4x2, 6x1)
ಇತರೆ: 4 (ಲೆಗ್‌ಬೈ 2, ನೋಬಾಲ್ 1, ವೈಡ್ 1)
ವಿಕೆಟ್ ಪತನ: 1-79 (ಸುನಿಲ್ ನಾರಾಯಣ್, 6.1), 2-96 (ಫಿಲ್ ಸಾಲ್ಟ್, 8.1), 3-100 (ರಿಂಕು ಸಿಂಗ್, 9.2)
ಬೌಲಿಂಗ್: ಲಿಜಾಡ್ ವಿಲಿಯಮ್ಸ್ 3–0–38–1, ಖಲೀಲ್ ಅಹಮ್ಮದ್ 3–0–28–0, ರಾಸಿಖ್ ಸಲಾಂ 2.3–0–30–0, ಅಕ್ಷರ್ ಪಟೇಲ್ 4–0–25–2, ಕುಲದೀಪ್ ಯಾದವ್ 4–0–34–0
ಪಂದ್ಯದ ಆಟಗಾರ: ವರುಣ್ ಚಕ್ರವರ್ತಿ
ಫಲಿತಾಂಶ: ಕೆಕೆಆರ್ ತಂಡಕ್ಕೆ 7 ವಿಕೆಟ್ ಗೆಲುವು

ಲಖನೌ– ಮುಂಬೈ ಇಂಡಿಯನ್ಸ್ ಪಂದ್ಯ ಇಂದು

ರಾಹುಲ್ ಪ್ರದರ್ಶನದತ್ತ ಚಿತ್ತ

ಲಖನೌ (ಪಿಟಿಐ): ಟಿ20 ವಿಶ್ವಕಪ್ ತಂಡದ ಆಯ್ಕೆಗೆ ಕ್ಷಣಗಣನೆ ನಡೆಯುತ್ತಿರುವಂತೆ, ಕೆ.ಎಲ್.ರಾಹುಲ್ ಅವರು ತಂಡದಲ್ಲಿ ಎರಡನೇ ವಿಕೆಟ್ ಕೀಪರ್ ಸ್ಥಾನಕ್ಕೆ ಪೈಪೋಟಿಯಲ್ಲಿದ್ದಾರೆ. ಲಖನೌ ಸೂಪರ್ ಜೈಂಟ್ಸ್ ತಂಡ ಮಂಗಳವಾರ ಮುಂಬೈ ಇಂಡಿಯನ್ಸ್ ವಿರುದ್ಧ ಐಪಿಎಲ್ ಪಂದ್ಯ ಆಡಲಿದ್ದು, ರಾಹುಲ್ ಅವರಿಗೆ ತಮ್ಮ ಸಾಮರ್ಥ್ಯ ತೋರಲು ಸುವರ್ಣ ಅವಕಾಶ ಒದಗಿಸಿದೆ.

ಟಿ20 ಕ್ರಿಕೆಟ್‌ನಲ್ಲಿ ರಾಹುಲ್ ಅವರ ಸ್ಟ್ರೈಕ್ ರೇಟ್ ಬಗ್ಗೆ ಹಿಂದಿನಿಂದಲೂ ಚರ್ಚೆಯಿದೆ. ಪವರ್‌ಪ್ಲೇ ಅವಧಿಯಲ್ಲೂ ವೇಗದ ಆರಂಭ ನೀಡುತ್ತಿಲ್ಲ ಎನ್ನುವ ವಿಷಯವೂ ಹೊಸದಲ್ಲ. ಆದರೆ ಈ ಬಾರಿಯ ಐಪಿಎಲ್‌ನಲ್ಲಿ ಅವರು ಒಂದಿಷ್ಟು ಸುಧಾರಿತ ಪ್ರದರ್ಶನವನ್ನು ನೀಡಿದ್ದಾರೆ. 144.27ರ ಸ್ಟ್ರೈಕ್‌ರೇಟ್‌ನಲ್ಲಿ 378 ರನ್ ಗಳಿಸಿದ್ದಾರೆ. ಆದರೆ ರಿಷಭ್ ಪಂತ್ (160.60) ಮತ್ತು ಸಂಜು ಸ್ಯಾಮ್ಸನ್ (161.08) ಅವರ ಪ್ರದರ್ಶನ ಇನ್ನೂ ಉತ್ತಮವಾಗಿದೆ.

ರಸ್ತೆ ಅಪಘಾತದಲ್ಲಿ ಗಾಯಾಳಾದ ಮೇಲೆ ಐಪಿಎಲ್ ಮೂಲಕ ಪುನರಾಗಮನ ಮಾಡಿರುವ ಪಂತ್ ವಿಶ್ವಕಪ್ ತಂಡದ ಮೊದಲ ಕೀಪರ್ ಸ್ಥಾನವನ್ನು ಬಹುತೇಕ ಖಾತ್ರಿ ಪಡಿಸಿಕೊಂಡಿದ್ದಾರೆ. ವಿಕೆಟ್ ಕೀಪಿಂಗ್‌ನಲ್ಲೂ ಅವರು ಸೊಗಸಾದ ಪ್ರದರ್ಶನ ನೀಡಿದ್ದಾರೆ. ಸ್ಯಾಮ್ಸನ್ ಸಹ ಒತ್ತಡದ ಸಂದರ್ಭದಲ್ಲಿ ಬಿರುಸಿನ ಇನಿಂಗ್ಸ್‌ಗಳನ್ನು ಆಡಿ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಗೆಲುವು ಕೊಡಿಸಿದ್ದಾರೆ.

ಪರಿಸ್ಥಿತಿ ಹೀಗಿರುವಾಗ, ರಾಷ್ಟ್ರೀಯ ತಂಡಕ್ಕೆ ಆಯ್ಕೆ ಆಗಬೇಕಾದರೆ ರಾಹುಲ್ ಅವರೂ ನಿರ್ಭೀತಿಯಿಂದ ಆಡಬೇಕಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	9	8	1	16	0.694
ಕೋಲ್ಕತ್ತ ನೈಟ್ ರೈಡರ್ಸ್	9	6	3	12	1.096
ಚೆನ್ನೈ ಸೂಪರ್ ಕಿಂಗ್ಸ್	9	5	4	10	0.810
ಸನ್‌ರೈಸರ್ಸ್ ಹೈದರಾಬಾದ್	9	5	4	10	0.075
ಲಖನೌ ಸೂಪರ್ ಜೈಂಟ್ಸ್	9	5	4	10	0.059
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಗುಜರಾತ್ ಟೈಟನ್ಸ್	10	4	6	8	-1.113
ಪಂಜಾಬ್ ಕಿಂಗ್ಸ್	9	3	6	6	-0.187
ಮುಂಬೈ ಇಂಡಿಯನ್ಸ್	9	3	6	6	-0.261
ಆರ್‌ಸಿಬಿ (ಬೆಂಗಳೂರು)	10	3	7	6	-0.415

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (500 ರನ್)
ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್, ಮುಸ್ತಫಿಜುರ್ (14 ವಿಕೆಟ್)


ಇನ್ನೊಂದೆಡೆ ಪ್ಲೇ ಆಫ್‌ಗೆ ಪೈಪೋಟಿ ಜೋರಾಗಿದೆ. ಲಖನೌ ತಂಡದ ಬ್ಯಾಟಿಂಗ್, ಕ್ವಿಂಟನ್ ಡಿಕಾಕ್, ಮಾರ್ಕಸ್ ಸ್ಟೊಯಿನಿಸ್ ಮತ್ತು ನಿಕೋಲಸ್ ಪೂರನ್ ಅವರ ಆಟವನ್ನು ಅವಲಂಬಿಸಿದೆ. ಮುಂಬೈ ಬೌಲಿಂಗ್ ದೌರ್ಬಲ್ಯವನ್ನೂ ಬಳಸಲು ಅವಕಾಶವಿದೆ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಮುಂಬೈ ಬೌಲಿಂಗ್ ದೌರ್ಬಲ್ಯ ಜಾಹೀರಾಗಿತ್ತು. ಅದರಲ್ಲೂ ಆಸ್ಟ್ರೇಲಿಯಾದ ಯುವ ಬ್ಯಾಟರ್ ಜೇಕ್ ಫ್ರೇಸರ್–ಮೆಕ್‌ಗುರ್ಕ್ ಎದುರಾಳಿ ದಾಳಿ ಲೆಕ್ಕಕ್ಕಿಲ್ಲದಂತೆ ಆಡಿದ್ದರು.

ಬಿಗುದಾಳಿಗೆ ಹೆಸರಾದ ಬೂಮ್ರಾ ಅವರೂ ದಂಡನೆಗೆ ಒಳಗಾಗಿದ್ದರು. ಲೂಕ್ ವುಡ್ ಮತ್ತು ಹಾರ್ದಿಕ್ ಪಾಂಡ್ಯ ಸುಧಾರಿತ ಪ್ರದರ್ಶನ ನೀಡಬೇಕಾಗಿದೆ. ಐದು ಸಲದ ಚಾಂಪಿಯನ್ ಮುಂಬೈ ಸದ್ಯ ಕೊನೆಯಿಂದ ಎರಡನೇ ಸ್ಥಾನದಲ್ಲಿದೆ. ವಿಶ್ವಕಪ್‌ಗೆ ಮುನ್ನವೇ ಟಿ20ಯ ಪರಿಣತ ಆಟಗಾರ ಸೂರ್ಯಕುಮಾರ್ ಯಾದವ್ ಲಯಕ್ಕೆ ಮರಳಬೇಕಾಗಿದೆ.

ಮಯಂಕ್ ಫಿಟ್: ವೇಗದ ಬೌಲಿಂಗ್ ನವತಾರೆ ಮಯಂಕ್ ಯಾದವ್ ಅವರು ಹೊಟ್ಟೆಯ ಸೆಳೆತದಿಂದ ಪೂರ್ಣ ಗುಣಮುಖರಾಗಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಅವರು ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಆಡುವ ನಿರೀಕ್ಷೆಯಿದೆ ಎಂದು ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ತಿಳಿಸಿದ್ದಾರೆ. ಅವರು ಮೂರು ಪಂದ್ಯಗಳಿಂದ ಆರು ವಿಕೆಟ್ ಪಡೆದಿದ್ದಾರೆ. ಎರಡು ಬಾರಿ ಪಂದ್ಯ ಶ್ರೇಷ್ಠ ಆಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ

ಟಿ20 ವಿಶ್ವಕಪ್‌ಗೆ ಕಿವೀಸ್ ತಂಡ: 4ನೇ ಬಾರಿ ಕೇನ್‌ಗೆ ನಾಯಕತ್ವ



ವೆಲಿಂಗ್ಟನ್ (ಎಎಫ್‌ಪಿ): ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಜೂನ್ 2ರಿಂದ 30ರವರೆಗೆ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್‌ಗೆ15ಆಟಗಾರರನ್ಯೂಜಿಲೆಂಡ್‌ತಂಡವನ್ನುಸೋಮವಾರ ಪ್ರಕಟಿಸಲಾಗಿದೆ. ಅನುಭವಿ ಕೇನ್ ವಿಲಿಯಮ್ಸನ್ ತಂಡವನ್ನು ಮುನ್ನಡೆಸಲಿದ್ದಾರೆ.

ವಿಲಿಯಮ್ಸ್ ಪಾಲಿಗೆ ಇದು ಆರನೇ ಟಿ20 ವಿಶ್ವಕಪ್ ಮತ್ತು ನಾಯಕನಾಗಿ ನಾಲ್ಕನೇಯದ್ದು ಆಗಲಿದೆ. ಆಲ್‌ರೌಂಡರ್ ರಚಿನ್ ರವೀಂದ್ರ ಮತ್ತು ವೇಗಿ ಮ್ಯಾಟ್ ಹೆನ್ರಿ ಅವರು ಮೊದಲ ಬಾರಿ ವಿಶ್ವಕಪ್ ತಂಡದಲ್ಲಿ ಆಡಲಿದ್ದಾರೆ. ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ದಾಖಲೆ 157 ವಿಕೆಟ್‌ಗಳನ್ನು ಪಡೆದಿರುವ 35 ವರ್ಷದ ಟಿಮ್ ಸೌಥಿ ಅವರು 34 ವರ್ಷದ ಟ್ರೆಂಟ್ ಬೌಲ್ಟ್ ಜೊತೆ ವೇಗದ ದಾಳಿಯ ಹೊಣೆ ವಹಿಸಲಿದ್ದಾರೆ. ಬೌಲ್ಟ್‌ಗೆ ಇದು ಐದನೇ ಟಿ20 ವಿಶ್ವಕಪ್. ವೇಗದ ಬೌಲರ್‌ಗಳಾದ ಆ್ಯಡಂ ಮಿಲ್ನ್ ಮತ್ತು ಕೈಲ್ ಜೇಮಿಸನ್ ಅವರು ಗಾಯಾಳಾಗಿದ್ದು ಅವಕಾಶ ಪಡೆದಿಲ್ಲ.

ಪ್ರಸಕ್ತ ಐಪಿಎಲ್‌ನಲ್ಲಿ ಹೆಬ್ಬೆರಳ ಗಾಯದಿಂದಾಗಿ ಹೊರಬಿದ್ದಿದ್ದ ಆರಂಭ ಆಟಗಾರ ಡೆವಾನ್ ಕಾನ್ವೆ ಅವರು ತಂಡದಲ್ಲಿ ಅವಕಾಶ ಪಡೆದಿದ್ದಾರೆ.

ತಂಡ ಇಂತಿದೆ: ಕೇನ್ ವಿಲಿಯಮ್ಸನ್ (ನಾಯಕ), ಫಿನ್ ಅಲೆನ್, ಟ್ರೆಂಟ್ ಬೌಲ್ಟ್, ಮೈಕೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್ಮನ್, ಡೇವನ್ ಕಾನ್ವೆ, ಲಾಕಿ ಫರ್ಗ್ಯೂಸನ್, ಮ್ಯಾಟ್ ಹೆನ್ರಿ, ಡೇರಿಲ್ ಮಿಚೆಲ್, ಜಿಮ್ಮಿ ನೀಶಮ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಈಶ್ ಸೋಧಿ ಮತ್ತು ಟಿಮ್ ಸೌಥಿ.

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ

3 ತಾಣ ಅಂತಿಮಗೊಳಿಸಿದ ಪಾಕ್

ಹೋರ್ (ಪಿಟಿಐ): ಮುಂದಿನ ವರ್ಷದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಆತಿಥ್ಯ ವಹಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು, ಪಂದ್ಯಗಳನ್ನು ನಡೆಸಲು ಕರಾಚಿ, ಲಾಹೋರ್ ಮತ್ತು ರಾವಲ್ಪಿಂಡಿಯ ಕ್ರೀಡಾಂಗಣಗಳನ್ನು ಆಯ್ಕೆ ಮಾಡಿದೆ.

ಭಾರತದ ಪಾಲ್ಗೊಳ್ಳುವಿಕೆ ಖಚಿತಪಡಿಸಿಕೊಳ್ಳಲು ಈ ಟೂರ್ನಿಯಲ್ಲಿ ಹೈಬ್ರಿಡ್ ಮಾದರಿಗೆ ಪರಿಶೀಲನೆ ನಡೆಯುತ್ತಿದೆ ಎಂಬ ಊಹಾಪೋಹಗಳ ನಡುವೆಯೇ ಪಾಕಿಸ್ತಾನ ತನ್ನ ನೆಲದಲ್ಲೇ ಟೂರ್ನಿ ನಡೆಯಬೇಕೆಂಬ ನಿಲುವಿನೊಡನೆ ಮುಂದಡಿಯಿಟ್ಟಿದೆ.

2017ರಲ್ಲಿ ಈ ಟೂರ್ನಿ ಕೊನೆಯ ಬಾರಿ ಇಂಗ್ಲೆಂಡ್ ನಡೆದಿತ್ತು. ಮುಂದಿನ ವರ್ಷದ ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ಚಾಂಪಿಯನ್ಸ್ ಟ್ರೋಫಿ ನಡೆಯುವ ನಿರೀಕ್ಷೆಯಿದೆ.

ಭಾರತ ಇದುವರೆಗೆ ತನ್ನ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಲ್ಲ. ಆದರೆ, ಭಾರತ ಸರ್ಕಾರ, ತಂಡಕ್ಕೆ ಪಾಕಿಸ್ತಾನದಲ್ಲಿ ಆಡಲು ಅನುಮತಿ ನಿರಾಕರಿಸಿದಲ್ಲಿ ಐಸಿಸಿಯು ಹೈಬ್ರಿಡ್ ಮಾದರಿ ಬಳಸಿ ಭಾರತದ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ ಆಯೋಜಿಸಲು ಯೋಚಿಸುತ್ತಿದೆ ಎಂಬ ಊಹಾಪೋಹಗಳು ಹಬ್ಬಿವೆ. ಸರ್ಕಾರದ ನೀತಿಗೆ ವಿರುದ್ಧವಾಗಿ ನಡೆಯುವಂತೆ ಯಾವುದೇ ಸದಸ್ಯ ರಾಷ್ಟ್ರಕ್ಕೆ ಸೂಚಿಸುವುದಿಲ್ಲ ಎಂದು ಐಸಿಸಿ ಈಗಾಗಲೇ ಸ್ಪಷ್ಟಪಡಿಸಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಂದ್ಯಗಳ ವೇಳಾಪಟ್ಟಿಯನ್ನು ಈಗಾಗಲೇ ಐಸಿಸಿಗೆ ಕಳುಹಿಸಿಕೊಡಲಾಗಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಲಾಹೋರ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಐಸಿಸಿಯ ಭದ್ರತಾ ತಂಡ ಬಂದಿದ್ದು, ಅವರ ಜೊತೆ ಸಭೆಯು ಉತ್ತಮ ರೀತಿಯಲ್ಲಿ ನಡೆದಿದೆ. ಅವರು ಇಲ್ಲಿನ ಏರ್ಪಾಡುಗಳನ್ನು ಪರಿಶೀಲಿಸಿದ್ದಾರೆ. ಕ್ರೀಡಾಂಗಣಗಳ ಮೇಲ್ದರ್ಜೆ ಯೋಜನೆಯನ್ನು ಅವರ ಜೊತೆ ಹಂಚಿಕೊಂಡಿದ್ದೇವೆ’ ಎಂದರು.

ಭಾರತದ ಸಲುವಾಗಿ ಟೂರ್ನಿಯಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಪಿಸಿಬಿ ಬಿಗಿ ನಿಲುವು ತಾಳಿದೆ. ಆದರೆ ಈಗಿನ ಕ್ರೀಡಾಂಗಣಗಳ ಗುಣಮಟ್ಟ ಉತ್ತಮವಾಗಿಲ್ಲ ಎಂದು ಅವರು ಒಪ್ಪಿಕೊಂಡರು. ಇವುಗಳನ್ನು ಮೇಲ್ದರ್ಜೆಗೇರಿಸಲು ಮೇ 7ರಂದು ಅಂತರರಾಷ್ಟ್ರೀಯ ಕಂಪನಿಗಳಿಂದ ಬಿಡ್ ಆಹ್ವಾನಿಸಲಾಗುವುದು. ಈಗಾಗಲೇ ವಿಳಂಬವಾಗಿದೆ. ಈಗ ಈ ಕೆಲಸ ತುಂಬಾ ಕಷ್ಟ. ಆದರೆ ನಾವು ಈ ಕೆಲಸ ಮಾಡಬಲ್ಲೆವು ಎಂದರು.

ಥಾಮಸ್ ಕಪ್: ಇಂಗ್ಲೆಂಡ್ ವಿರುದ್ಧ 5–0 ಸುಲಭ ಜಯ

ಎಂಟರ ಘಟ್ಟಕ್ಕೆ ಭಾರತ ತಂಡ

ಚೆಂಗ್ಡು (ಚೀನಾ), (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ ಸೋಮವಾರ ನಡೆದ ‘ಸಿ’ ಗುಂಪಿನ ಪಂದ್ಯದಲ್ಲಿ 5-0 ಯಿಂದ ಇಂಗ್ಲೆಂಡ್ ತಂಡವನ್ನು ಸದೆಬಡಿದು ಥಾಮಸ್ ಕಪ್ ಟೂರ್ನಿ ಎಂಟರ ಘಟ್ಟಕ್ಕೆ ಮುನ್ನಡೆಯಿತು.

ಮೊದಲ ಪಂದ್ಯದಲ್ಲಿ 4-1 ರಿಂದ ಥಾಯ್ಲೆಂಡ್ ತಂಡವನ್ನು ಸೋಲಿಸಿದ್ದ ಭಾರತ ಎರಡನೇ ಗೆಲುವಿನಿಂದ ನಾಕೌಟ್‌ಗೆ ಅರ್ಹತೆ ಪಡೆಯಿತು.

ಎಚ್.ಎಸ್.ಪ್ರಣಯ್ 21-15, 21-15ರಲ್ಲಿ ನೇರ ಗೇಮ್‌ಗಳಿಂದ ಹ್ಯಾರಿ ಹುವಾಂಗ್ ಅವರನ್ನು ಸೋಲಿಸಿ ಭಾರತಕ್ಕೆ 1-0 ಮುನ್ನಡೆ ಒದಗಿಸಿದರು. ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಡಬಲ್ಸ್ ಪಂದ್ಯದಲ್ಲಿ ಬೆನ್ ಲೇನ್ ಮತ್ತು ಸೀನ್ ವೆಂಡಿ ಅವರನ್ನು ಸೋಲಿಸಲು ಮೂರು ಗೇಮ್‌ಗಳನ್ನು ಆಡಬೇಕಾಯಿತು. ಅಂತಿಮವಾಗಿ 2022ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಭಾರತದ ಜೋಡಿ 21-17, 19-21, 21-15ರಲ್ಲಿ ಜಯಗಳಿಸಿತು.



ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ –ಎಪಿ/ಪಿಟಿಐ ಚಿತ್ರ

ಕಿದಂಬಿ ಶ್ರೀಕಾಂತ್ 21-16, 21-11 ರಿಂದ ನದೀಮ್ ದಲ್ವಿ ಅವರನ್ನು ಸೋಲಿಸಿ ತಂಡಕ್ಕೆ 3-0 ಗೆಲುವಿನ ಮುನ್ನಡೆ ಒದಗಿಸಿದರು. ಭಾರತದ ಎರಡನೇ ಡಬಲ್ಸ್ ತಂಡವಾದ ಎಂ.ಆರ್.ಅರ್ಜುನ್- ಧ್ರುವ್ ಕಪಿಲಾ ಜೋಡಿ 21-7, 21-19 ರಿಂದ ರೋರಿ ಎಸ್ಟನ್- ಅಲೆಕ್ಸ್ ಗ್ರೀನ್ ಜೋಡಿಯನ್ನು ಸೋಲಿಸಿತು. ಅಂತಿಮ ಸಿಂಗಲ್ಸ್‌ನಲ್ಲಿ 24 ವರ್ಷದ ಕಿರಣ್ ಜಾರ್ಜ್ 21-18, 21-12ರಲ್ಲಿ ಚೋಳನ್ ಕಾಯನ್ ಅವರನ್ನು ಸೋಲಿಸಿದರು.

ಭಾರತ, ಬುಧವಾರ ನಡೆಯುವ ಗುಂಪಿನ ಅಂತಿಮ ಲೀಗ್ ಪಂದ್ಯದಲ್ಲಿ 14 ಬಾರಿಯ ಚಾಂಪಿಯನ್ ಇಂಡೊನೇಷ್ಯಾ ತಂಡವನ್ನು ಎದುರಿಸಲಿದೆ.

ಕ್ರಿಕೆಟ್: ಸಂಜಿತ್ ಸತೀಶ್ ದ್ವಿಶತಕ

ಬೆಂಗಳೂರು: ಸಂಜಿತ್ ಸತೀಶ್ ಅವರ ದ್ವಿಶತಕ ಬಲದಿಂದ ಸಿಬಿಟಿ ಮಕುಶ್ಲಾ ತಂಡವು ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಪಂದ್ಯ ದಲ್ಲಿ ಸೋಮವಾರ ಕಪಿಲ್ ಸಿ.ಸಿ ತಂಡದ ವಿರುದ್ಧ 424 ರನ್‌ಗಳ ಜಯ ದಾಖಲಿಸಿತು.

ಮೊದಲು ಬ್ಯಾಟಿಂಗ್ ನಡೆಸಿದ ಮಕುಶ್ಲಾ ತಂಡವು ಸಂಜಿತ್ (248) ಮತ್ತು ರಾಮನಾಥ್ ನಾಯಕ್ (122) ಅವರ ಬ್ಯಾಟಿಂಗ್ ಬಲದಿಂದ 30 ಓವರ್ ಗಳಲ್ಲಿ ಒಂದು ವಿಕೆಟ್‌ಗೆ 455 ರನ್ ಕಲೆಹಾಕಿತು. ಆದರೆ ಕಪಿಲ್ ತಂಡ 17.4 ಓವರ್‌ಗಳಲ್ಲಿ 31 ರನ್‌ಗಳಿಗೆ ಕುಸಿಯಿತು.

ಸಂಕ್ಷಿಪ್ತ ಸ್ಕೋರ್: ಸಿಬಿಟಿ ಮಕುಶ್ಲಾ: 30 ಓವರ್‌ಗಳಲ್ಲಿ 1ಕ್ಕೆ 455 (ಸಂಜಿತ್ ಸತೀಶ್ 248, ರಾಮನಾಥ್ ನಾಯಕ್ 112, ಫಹೀಂ 65) **ಕಪಿಲ್ ಸಿ.ಸಿ:** 17.4 ಓವರ್‌ಗಳಲ್ಲಿ 31 (ಕೀತನ್ ಬಿ.ಆರ್ 4ಕ್ಕೆ 2, ವಿಕ್ರಮ್ 10ಕ್ಕೆ 2). **ಫಲಿತಾಂಶ:** ಸಿಬಿಟಿ ಮಕುಶ್ಲಾ ತಂಡಕ್ಕೆ 424 ರನ್‌ಗಳ ಜಯ

ಸಿಕ್ಸ್ ಕ್ರಿಕೆಟ್ ಅಕಾಡೆಮಿ: 30 ಓವರ್‌ಗಳಲ್ಲಿ 8ಕ್ಕೆ 244 (ಆಂಜನೇಯ ಗುಪ್ತಾ 68, ಪ್ರಾಂಶುಲ್ ಶರ್ಮಾ 56; ಮಿಲಿಂದ್ ಆಕಾಶ್ 44ಕ್ಕೆ 3). ಜಸ್ಟ್ ಕ್ರಿಕೆಟ್ ಅಕಾಡೆಮಿ: 26.2 ಓವರ್‌ಗಳಲ್ಲಿ 97 ವೇದ್ ನಹರ್ 17ಕ್ಕೆ 3, ಅನಿಕೇತ್ ಚತುರ್ವೇದಿ 31ಕ್ಕೆ 3). ಫಲಿತಾಂಶ: ಸಿಕ್ಸ್ ಕ್ರಿಕೆಟ್ ಅಕಾಡೆಮಿಗೆ 147 ರನ್‌ಗಳ ಜಯ

ಬೂಟ್ ಕ್ಯಾಂಪ್: 30 ಓವರ್‌ಗಳಲ್ಲಿ 6ಕ್ಕೆ 178 (ರಫಾ ಪೂಣಚ 53; ಅಂಶ್ ಕುಮಾರ್ 28ಕ್ಕೆ 2). ಪಿಇಎಸ್‌ಐಟಿ: 30 ಓವರ್‌ಗಳಲ್ಲಿ 7ಕ್ಕೆ 179 (ಆರ್ಯನ್ ಸಿಂಗ್ ಚಾವ್ಡಾ 86; ಅಮೋಘ್ ಶ್ರೀನಿವಾಸ್ 31ಕ್ಕೆ 3). ಫಲಿತಾಂಶ: ಪಿಇಎಸ್‌ಐಟಿ ತಂಡಕ್ಕೆ 3 ವಿಕೆಟ್ ಜಯ

ಡಿಪಿಎಸ್ ಈಸ್ಟ್: 30 ಓವರ್‌ಗಳಲ್ಲಿ 2ಕ್ಕೆ 225 (ನೀರಜ್ 77) ಡಿಪಿಎಸ್ ಸೌತ್: 30 ಓವರ್‌ಗಳಲ್ಲಿ 7ಕ್ಕೆ 208 (ದೇಬ್ರಾಜ್ 66; ಧ್ಯೇಯ್ ಶಾಸ್ತ್ರಿ 27ಕ್ಕೆ 2). **ಫಲಿತಾಂಶ:** ಡಿಪಿಎಸ್ ಈಸ್ಟ್ ತಂಡಕ್ಕೆ 17 ರನ್‌ಗಳ ಜಯ

ಐಎಸ್‌ಎಲ್: ಮುಂಬೈ ಫೈನಲ್‌ಗೆ

ಮುಂಬೈ (ಪಿಟಿಐ): ಮುಂಬೈ ಸಿಟಿ ಎಫ್‌ಸಿ ತಂಡವು ಸೋಮವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಎರಡನೇ ಲೆಗ್ ಸೆಮಿಫೈನಲ್‌ನಲ್ಲಿ 2-0 ಯಿಂದ ಗೋವಾ ಎಫ್‌ಸಿ ತಂಡವನ್ನು ಸೋಲಿಸಿ ಫೈನಲ್ ಪ್ರವೇಶಿಸಿತು.

ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡವು ಈಗಾಗಲೇ ಒಡಿಶಾ ಎಫ್‌ಸಿ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿದೆ. ಮೇ 4ರಂದು ನಡೆಯುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಮುಂಬೈ ಸಿಟಿ ತಂಡವು ಮೋಹನ್ ಬಾಗನ್ ತಂಡವನ್ನು ಎದುರಿಸಲಿದೆ.

ಗೋವಾದಲ್ಲಿ ನಡೆದಿದ್ದ ಮೊದಲ ಲೆಗ್ ಸೆಮಿಫೈನಲ್‌ನಲ್ಲೂ ಮುಂಬೈ ಸಿಟಿ ತಂಡವು 3-2ರಿಂದ ಗೋವಾ ಎಫ್‌ಸಿ ತಂಡವನ್ನು ಸೋಲಿಸಿತ್ತು.

ಟಾಪ್ಸ್: ದೀಪಿಕಾ ಮರುಸೇರ್ಪಡೆ

ನವದೆಹಲಿ (ಪಿಟಿಐ): ಶಾಂಘೈನಲ್ಲಿ ನಡೆದ ಆರ್ಚರಿ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ದೀಪಿಕಾ ಕುಮಾರಿ ಅವರನ್ನು ಕೇಂದ್ರ ಕ್ರೀಡಾ ಸಚಿವಾಲಯದ ಟಾಪ್ಸ್ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್) ಯೋಜನೆಗೆ ಮರು ಸೇರ್ಪಡೆ ಮಾಡಲಾಗಿದೆ.

2022ರ ಡಿಸೆಂಬರ್‌ನಲ್ಲಿ ತಾಯಿಯಾದ ನಂತರ ಕಳೆದ ವರ್ಷ ಇಡೀ ಋತುವನ್ನು ಕಳೆದುಕೊಂಡಿದ್ದ ವಿಶ್ವದ ಮಾಜಿ ಅಗ್ರಗಣ್ಯ ರಿಕರ್ವ್ ಆರ್ಚರಿಪಟು ದೀಪಿಕಾ ಈ ಋತುವಿನಲ್ಲಿ ಪುನರಾಗಮನ ಮಾಡಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಮೂರು ಬಾರಿಯ ಒಲಿಂಪಿಯನ್ ದೀಪಿಕಾ ಈ ವರ್ಷದ ಆರಂಭದಲ್ಲಿ ಏಷ್ಯಾಕಪ್‌ನಲ್ಲಿ ಪದಕ ಗೆದ್ದಿದ್ದರು.


ಕಳೆದ ವರ್ಷ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಕ್ವಾಲಿಫೈಯಿಂಗ್ ಟೂರ್ನಿಯಲ್ಲಿ ಪುರುಷರ ವೈಯಕ್ತಿಕ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದ ಧೀರಜ್ ಬೊಮ್ಮದೇವರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಏಕೈಕ ಗುರಿಕಾರ ಆಗಿದ್ದಾರೆ.



ಆರ್ಚರಿಪಟು ದೀಪಿಕಾ ಕುಮಾರಿ

ಇನ್ನು ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೊನೆಯ ಕ್ವಾಲಿಫೈಯರ್ ಟೂರ್ನಿ ಬಾಕಿ ಉಳಿದಿದೆ. ಅದು ಟರ್ಕಿಯಲ್ಲಿ ಜೂನ್ 15 ಮತ್ತು 16 ರಂದು ನಡೆಯಲಿದೆ.

ಬಾಕ್ಸಿಂಗ್: ಪದಕ ಖಚಿತಪಡಿಸಿದ ಬ್ರಿಜೇಶ್, ಸಾಗರ್, ಸುಮಿತ್



ಬ್ರಿಜೇಶ್

ಅಸ್ತಾನಾ (ಕಜಕಸ್ತಾನ), (ಪಿಟಿಐ): ಭಾರತದ ಬಾಕ್ಸರ್‌ಗಳಾದ ಬ್ರಿಜೇಶ್ ತಮ್ಟಾ, ಸಾಗರ್ ಜಾಖಡ್ ಮತ್ತು ಸುಮಿತ್ ಅವರು ಏಷ್ಯನ್ 22 ವರ್ಷದೊಳಗಿನವರ ಮತ್ತು ಯುವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಗೆಲುವು ಸಾಧಿಸಿ ಸೆಮಿಫೈನಲ್ ತಲುಪಿದರು. ಆ ಮೂಲಕ ಪದಕಗಳನ್ನೂ ಖಚಿತಪಡಿಸಿಕೊಂಡರು.

ಬ್ರಿಜೇಶ್ (48 ಕೆ.ಜಿ. ಕ್ಲಾಸ್) ಅವರು ಉಜ್ಬೇಕಿಸ್ತಾನದ ಸಬಿರೊವ್ ಸೈಫಿದ್ದೀನ್ ಅವರನ್ನು ತೀವ್ರ ಹೋರಾಟದ ನಂತರ ಸೋಲಿಸಿದರು. ಇಬ್ಬರೂ ಮೊದಲ ಎರಡು ಸುತ್ತುಗಳಲ್ಲಿ ಒಂದೊಂದರಲ್ಲಿ ಜಯಿಸಿದ್ದರು. ಮೂರನೇ ಸುತ್ತಿನಲ್ಲಿ ಬ್ರಿಜೇಶ್ 4–3 ರಲ್ಲಿ ಜಯಗಳಿಸಿದರು.

ಸಾಗರ್ ಜಾಖಡ್ (60 ಕೆ.ಜಿ) ಮತ್ತು ಸುಮಿತ್ (67 ಕೆ.ಜಿ) ಅವರು ಕ್ರಮವಾಗಿ ಥಾಯ್ಲೆಂಡ್‌ನ ಕಲಾಸೀರಮ್ ತನಫಾನ್‌ಸಕೋನ್ ಮತ್ತು ಕೊರಿಯಾದ ಹಾಂಗ್ ಸಿಯೊ ಜಿನ್ ಅವರನ್ನು 5–0 ಸಮಾನ ಅಂತರದಿಂದ ಸೋಲಿಸಿದರು. ಆದರೆ ಜಿತೇಶ್ (54 ಕೆ.ಜಿ) ಅವರು 0–5 ರಿಂದ ಕಜಕಸ್ತಾನದ ತುಲೆಬೆಕ್ ನುರಾಸಿಲ್ ಅವರಿಗೆ ಮಣಿಸಿದರು.

ಇದರೊಂದಿಗೆ ಈ ಕೂಟದಲ್ಲಿ ಭಾರತಕ್ಕೆ ಎಂಟು ಪದಕಗಳು ಖಚಿತವಾದವು. ಐದು ಮಂದಿ ಮಹಿಳಾ ಬಾಕ್ಸರ್‌ಗಳು– ಅನ್ನು (48 ಕೆ.ಜಿ), ಪಾರ್ಥವಿ ಗ್ರೆವಾಲ್ (66 ಕೆ.ಜಿ), ನಿಕಿತಾ ಚಾಂದ್ (60 ಕೆ.ಜಿ), ಖುಷಿ ಪೂನಿಯಾ (81 ಕೆ.ಜಿ) ಮತ್ತು ನಿರ್ಜರಾ ಬಾನಾ (+81 ಕೆ.ಜಿ) ಅವರು ಸೆಮಿಫೈನಲ್ ಸೆಣಸಾಟ ಆರಂಭಿಸಲಿದ್ದಾರೆ.

ಈಗಾಗಲೇ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ, ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಪ್ರೀತಿ (54 ಕೆ.ಜಿ) ಅವರು ಮಂಗಳವಾರ 22 ವರ್ಷದೊಳಗಿನವರ ಮಹಿಳಾ ವಿಭಾಗದಲ್ಲಿ ಉಜ್ಬೇಕಿಸ್ತಾನದ ಉಕ್ತಮೊವಾ ನಿಗಿನಾ ಅವರನ್ನು ಎದುರಿಸಲಿದ್ದಾರೆ. ಈ ಪ್ರತಿಷ್ಠಿತ ಟೂರ್ನಿಗೆ ಭಾರತ ಬಾಕ್ಸಿಂಗ್ ಫೆಡರೇಷನ್ 50 ಸದಸ್ಯರ ತಂಡವನ್ನು ಕಣಕ್ಕಿಳಿಸಿದೆ. ಇಲ್ಲಿ 25 ತೂಕ ವಿಭಾಗಗಳಲ್ಲಿ 24 ರಾಷ್ಟ್ರಗಳ 390 ಬಾಕ್ಸರ್‌ಗಳು ಸ್ಪರ್ಧಿಸುತ್ತಿದ್ದಾರೆ.

ಯುವ ಮತ್ತು 22 ವರ್ಷದೊಳಗಿನವರ ವಿಭಾಗದ ಫೈನಲ್ ಸೆಣಸಾಟಗಳು ಮೇ 6 ಮತ್ತು 7ರಂದು ನಡೆಯಲಿವೆ.

ಇಂದು ಗ್ರ್ಯಾನ್‌ಪ್ರಿ ಅಥ್ಲೆಟಿಕ್ ಕೂಟ ★ಒಲಿಂಪಿಕ್ಸ್ ಅರ್ಹತೆಗೆ ಅವಕಾಶ

ತಜಿಂದರ್, ಮನು, ಶೈಲಿ ಮೇಲೆ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ಗೆ ಆಯ್ಕೆಯಾಗಲು ದೇಶದ ಪ್ರಮುಖ ಅಥ್ಲೀಟುಗಳು ಕೊನೆಗಳಿಗೆಯ ಪ್ರಯತ್ನದಲ್ಲಿದ್ದಾರೆ. ಮಂಗಳವಾರ ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಇಂಡಿಯನ್ ಗ್ರ್ಯಾನ್‌ಪ್ರಿ ಮೊದಲ ಲೆಗ್ ಅವರಿಗೆ ಇಂಥ ಅವಕಾಶ ಒದಗಿಸಿದೆ.

ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತ ಮತ್ತು ಏಷ್ಯನ್ ಶಾಟ್‌ಪಟ್ ಚಾಂಪಿಯನ್ ತಜಿಂದರ್‌ಪಾಲ್ ಸಿಂಗ್ ತೂರ್ ಅವರು ಒಲಿಂಪಿಕ್ ಅರ್ಹತಾ ಮಟ್ಟ ತಲುಪಲು ಪ್ರಯತ್ನ ನಡೆಸುವವರಲ್ಲಿ ಪ್ರಮುಖ ಅಥ್ಲೀಟ್. ಪಂಜಾಬ್‌ನ 29 ವರ್ಷದ ತೂರ್ ಅವರು ಇಲ್ಲಿ ಸ್ವರ್ಣ ಗೆಲ್ಲುವುದು ಖಚಿತವಾಗಿದ್ದು, ಕಣದಲ್ಲಿರುವ ಇನ್ನಿಬ್ಬರು ಎದುರಾಳಿಗಳು ಅಂಥ ಪ್ರಬಲರೇನಲ್ಲ. ಆದರೆ ಅವರಿಗೆ ಇಲ್ಲಿ ಚಿನ್ನಕ್ಕಿಂತ ಮುಖ್ಯವಾಗಿರುವುದು ಒಲಿಂಪಿಕ್ ಅರ್ಹತಾ ಮಟ್ಟ 21.50 ಮೀ. ಸಾಧಿಸುವುದು. ಈ ಹಿಂದೆ ಅವರು ಇದನ್ನು ದಾಟಿದ್ದಿದೆ.

ಈ ಕೂಟದಲ್ಲಿ ಅರ್ಹತಾ ಮಟ್ಟ ದಾಟಿ ಪ್ಯಾರಿಸ್‌ಗೆ ಟಿಕೆಟ್ ಗಿಟ್ಟಿಸಿದರೆ, ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸಲು ಅವರಿಗೆ ಸಾಕಷ್ಟು ಸಮಯಾವಕಾಶವೂ ದೊರೆಯಲಿದೆ. ಟಿಸಿಎಸ್ 10ಕೆ ಓಟದ ಪ್ರಚಾರ ರಾಯಭಾರಿಯಾಗಿದ್ದ ಅವರು ಕಳೆದ ವಾರವೇ ನಗರಕ್ಕೆ ಬಂದಿದ್ದಾರೆ.

ಲಾಂಗ್ ಜಂಪ್ ಪಟು ಮುಹಮ್ಮದ್ ಅನೀಸ್ ಯಾಹ್ಯಾ, ಟ್ರಿಪಲ್ ಜಂಪ್ ಸ್ಪರ್ಧಿ ಎಲ್ದೋಸ್ ಪಾಲ್, ಜಾವೆಲಿನ್ ಥ್ರೋವರ್, ಕರ್ನಾಟಕದವರೇ ಆದ ಡಿ.ಪಿ. ಮನು, ಮಹಿಳಾ ಲಾಂಗ್ ಜಂಪ್ ಸ್ಪರ್ಧಿ ಶೈಲಿ ಸಿಂಗ್ ಅವರ ಪ್ರದರ್ಶನದ ಮೇಲೂ ನಿರೀಕ್ಷೆಗಳಿವೆ.



ತಜಿಂದರ್‌ಪಾಲ್ ಸಿಂಗ್ ತೂರ್ –ಪ್ರಜಾವಾಣಿ ಚಿತ್ರ

ಏಷ್ಯನ್ ಗೇಮ್ಸ್ ಮತ್ತು ಹಾಲಿ ಒಲಿಂಪಿಕ್ ಚಾಂಪಿಯನ್ ಸಹ ಆಗಿರುವ ನೀರಜ್ ಚೋಪ್ರಾ ಮತ್ತು ಹಾಂಗ್‌ಝೌ ಕೂಟದ ಬೆಳ್ಳಿ ವಿಜೇತ ಕಿಶೋರ್ ಕುಮಾರ್ ಜೇನಾ ಅವರ ನಂತರ ಮನು ಸದ್ಯ ಮೂರನೇ ಸ್ಥಾನದಲ್ಲಿದ್ದಾರೆ. ನೀರಜ್ ಮತ್ತು ಜೇನಾ ಅವರು ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ. ತವರಿನಲ್ಲಿ ಮನು ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಉತ್ತಮ ಅವಕಾಶ ಹೊಂದಿದ್ದಾರೆ. ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 84.35 ಮೀ. ಆದರೆ ಅವರು ಒಲಿಂಪಿಕ್ಸ್ ಅರ್ಹತಾ ಮಟ್ಟ 85.50 ಮೀ. ದೂರಕ್ಕೆ ಜಾವೆಲಿನ್ ಎಸೆಯಬೇಕಾಗಿದ್ದು, ಇದು ಅವರಿಗೆ ಸವಾಲಾಗಲಿದೆ.

ರಾಬರ್ಟ್ ಬಾಬಿ ಜಾರ್ಜ್ ಅವರಿಂದ ತರಬೇತಿಯಲ್ಲಿರುವ 20 ವರ್ಷದ ಶೈಲಿ ಅವರು ಭರವಸೆ ಮೂಡಿಸಿದ್ದಾರೆ. ಕಳೆದ ವರ್ಷ ಬ್ಯಾಂಕಾಕ್ ಏಷ್ಯನ್ ಅಥ್ಲೆಟಿಕ್ ಕೂಟದಲ್ಲಿ ಬೆಳ್ಳಿ ಗೆದ್ದಿದ್ದ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 6.76 ಮೀ. ಪ್ಯಾರಿಸ್ ಒಲಿಂಪಿಕ್ ಅರ್ಹತಾ ಮಟ್ಟ 6.86 ಮೀ. ಇದೆ.

200 ಮೀ. ಓಟಗಾರ್ತಿ ಹಿಮಾ ದಾಸ್ ಅವರೂ ಕಣದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ಅವರ ಮೇಲಿನ ನಿಷೇಧವನ್ನು ಹಿಂದಕ್ಕೆ ಪಡೆದ ನಂತರ ಇದು ಅವರ ಮೊದಲ ಪ್ರಮುಖ ಕೂಟ. 12 ತಿಂಗಳ ಅವಧಿಯಲ್ಲಿ ತಮ್ಮ ಚಲನವಲನದ ಮಾಹಿತಿ ನೀಡದ ಕಾರಣ ಕಳೆದ ವರ್ಷ 24 ವರ್ಷದ ಓಟಗಾರ್ತಿಯ ಮೇಲೆ ‘ನಾಡಾ’ ತಾತ್ಕಾಲಿಕ ನಿಷೇಧ ಹೇರಿತ್ತು.

ಮೇ 9ರಿಂದ ಒಲಿಂಪಿಕ್ ಕ್ವಾಲಿಫೈಯರ್ ಹಳೆ ತಂಡಕ್ಕೆ ಮಣೆ ಹಾಕಿದ ಕುಸ್ತಿ ಸಂಸ್ಥೆ

ನವದೆಹಲಿ: ಮುಂದಿನ ತಿಂಗಳು ಇಸ್ತಾನ್‌ಬುಲ್‌ನಲ್ಲಿ ನಡೆಯುವ ಅಂತಿಮ ಒಲಿಂಪಿಕ್ ಅರ್ಹತಾ ಕುಸ್ತಿ ಟೂರ್ನಿಗೆ ಭಾರತ ಕುಸ್ತಿ ಸಂಸ್ಥೆಯು (ಡಬ್ಲ್ಯುಎಫ್‌ಐ) ಸೋಮವಾರ ತಂಡವನ್ನು ಪ್ರಕಟಿಸಿದೆ. ಹೊಸ ಟ್ರಯಲ್ಸ್‌ಗೆ ಸಮಯದ ಕೊರತೆಯುಂದಾಗಿ ಬಿಷ್ಕೆಕ್‌ನಲ್ಲಿ ನಡೆದ ಏಷ್ಯನ್ ಕ್ವಾಲಿಫೈಯರ್‌ನಲ್ಲಿ ಸ್ಪರ್ಧಿಸಿದ ಬಹುತೇಕ ಕುಸ್ತಿಪಟುಗಳನ್ನೇ ಅಂತಿಮಗೊಳಿಸಲಾಗಿದೆ.

ಮೇ 9ರಿಂದ 13ರವರೆಗೆ ಅರ್ಹತಾ ಟೂರ್ನಿ ನಡೆಯಲಿದೆ. 2018ರ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ವಿನೇಶಾ ಫೋಗಾಟ್, ಅಂಶು ಮಲಿಕ್ ಮತ್ತು 23 ವರ್ಷದೊಳಗಿನ ವಿಶ್ವ ಚಾಂಪಿಯನ್ ರಿತಿಕಾ ಹೂಡಾ ಅವರನ್ನು ಹೊರತುಪಡಿಸಿ ತಂಡವನ್ನು ಪ್ರಕಟಿಸಲಾಗಿದೆ. ಈ ಮೂವರು ಈಚೆಗೆ ಬಿಷ್ಕೆಕ್‌ನಲ್ಲಿ ನಡೆದ ಏಷ್ಯನ್ ಒಲಿಂಪಿಕ್ ಕ್ವಾಲಿಫೈಯರ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಪಡೆದಿದ್ದಾರೆ.

ಬಿಷ್ಕೆಕ್‌ನಲ್ಲಿ ಭಾರತದ ಪುರುಷರ ತಂಡದ ಕಳಪೆ ಪ್ರದರ್ಶನ ನೀಡಿತ್ತು. ಯಾರಿಗೂ ಒಲಿಂಪಿಕ್ಸ್ ಕೋಟಾ ಲಭಿಸಿರಲಿಲ್ಲ. ಈ ಬಗ್ಗೆ ಭಾರತ ಕುಸ್ತಿ ಸಂಸ್ಥೆ ಅತೃಪ್ತಿ ಹೊಂದಿತ್ತು. ಹೀಗಾಗಿ, ಅಂತಿಮ ಅರ್ಹತಾ ಟೂರ್ನಿಗೆ ಹೊಸ ಟ್ರಯಲ್ಸ್ ನಡೆಯಲು ಯೋಜನೆ ಹಾಕಿಕೊಂಡಿತ್ತು. ಆದರೆ, ಸಮಯದ ಕೊರತೆಯಿಂದಾಗಿ ತಂಡದಲ್ಲಿ ಹೆಚ್ಚಿನ ಬದಲಾವಣೆ ಮಾಡಿಲ್ಲ ಎಂದು ಡಬ್ಲ್ಯುಎಫ್‌ಐ ಮೂಲಗಳು ತಿಳಿಸಿವೆ. ಇಲ್ಲಿ ಒಟ್ಟು 54 ಒಲಿಂಪಿಕ್ಸ್ ಕೋಟಾ ಲಭ್ಯವಿದೆ. ಪ್ರತಿ ಕೆ.ಜಿ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನ ಪಡೆಯುವ ಸ್ಪರ್ಧಿಗಳಿಗೆ ಒಲಿಂಪಿಕ್ಸ್ ಟಿಕೆಟ್ ಸಿಗಲಿದೆ.



ದೀಪಕ್ ಪೂನಿಯಾ

ಭಾರತ ತಂಡ: ಫ್ರೀಸ್ಟೈಲ್: ಅಮನ್ (57 ಕೆಜಿ), ಸುಜಿತ್ (65 ಕೆಜಿ), ಜೈದೀಪ್ (74 ಕೆಜಿ), ದೀಪಕ್ ಪೂನಿಯಾ (86 ಕೆಜಿ), ದೀಪಕ್ (97 ಕೆಜಿ), ಸುಮಿತ್ (125 ಕೆಜಿ). **ಗ್ರೀಕೊ ರೋಮನ್:** ಸುಮಿತ್ (60 ಕೆಜಿ), ಅಶು (67 ಕೆಜಿ), ವಿಕಾಸ್ (77 ಕೆಜಿ), ಸುನಿಲ್ ಕುಮಾರ್ (87 ಕೆಜಿ), ನಿತೇಶ್ (97 ಕೆಜಿ), ನವೀನ್ (130 ಕೆಜಿ). **ಮಹಿಳೆಯರ ವಿಭಾಗ:** ಮಾನ್ಸಿ (62 ಕೆಜಿ), ನಿಶಾ (68 ಕೆಜಿ).